ನ್ಯಾಯಸಮ್ಮತವಾದ ಮತ್ತು ಆರೋಗ್ಯಪೂರ್ಣವಾದ ಸಮಾಜಕ್ಕಾಗಿ ಕಾರ್ಯನಿರ್ವಹಿಸುವುದಕ್ಕೆ ಚರ್ಚು ಜನಾದೇಶ ಪಡೆದಿದೆ. ಬಹಳ ವಿಶಾಲ ಅರ್ಥವನ್ನು ಹೊಂದಿದ ಪ್ರಾಥಮಿಕ ಆರೋಗ್ಯ ಪಾಲನೆಯು ಈ ಕಾರ್ಯಸಾಧನೆಯಲ್ಲಿ ಅತ್ಯಂತ ಮಹತ್ವಪೂರ್ಣ ಸಾಧನವಾಗುತ್ತದೆಂದು ನಾವು ನಂಬಿದ್ದೇವೆ. ಪ್ರಸ್ತುತ ಇಂದಿನ ಪರಿಸ್ಥಿತಿಗಳಲ್ಲಿ ಬಡವ ಮತ್ತಷ್ಟು ಮೂಲೆಗೆ ದೂಡಲ್ಪಡುತ್ತಲೇ ಹೋಗುತ್ತಿದ್ದಾನೆ, ಮತ್ತುಷ್ಟು ಶೋಷಣೆಗೊಳಗಾಗುತ್ತಲೇ ಹೋಗುತ್ತಿದ್ದಾನೆ ಎಂಬ ಅರಿವು ನಮಗಿದ್ದು ಒಂದು ಚರ್ಚಾಗಿ ನಾವು ನಮ್ಮ ಸೇವೆಯಲ್ಲಿ ಮೊದಲ ಆದ್ಯತೆಯನ್ನು ಆ ಜನರಿಗೇ ಕೊಡುತ್ತೇವೆ. ಜಾಗತೀಕರಣ, ರಾಚನಿಕ ಸುಧಾರಣೆಗಳು ಹಾಗೂ ಸಮಾಜದ ಮಾರುಕಟ್ಟೆಕರಣಗಳು ಭಾರತದ ಆರ್ಥಿಕ ಅಭಿವೃದ್ಧಿ ಕುರಿತ ನೀತಿಗಳ ದಿಕ್ಕನ್ನೇ ಬದಲಿಸಿರುವುದರಿಂದ ಬಡವರು ಇನ್ನಷ್ಟು ಮೂಲೆಗುಂಪಾಗುತ್ತಿದ್ದು ಹಿಂದೆಂದಿಗಿಂತ ಹೆಚ್ಚಿನ ಅಪಾಯ ಎದುರಿಸುತ್ತಿದ್ದಾರೆ. ನಮ್ಮ ಚರ್ಚಿನ ನಡುವೆ, ಅದರ ಅಂಗಸಂಸ್ಥೆಗಳ ನಡುವೆ, ಆರೋಗ್ಯ ವೃತ್ತಿಪರರ ನಡುವೆ ಹಾಗೂ ಇನ್ನೂ ವಿಶಾಲಾರ್ಥದಲ್ಲಿ ಹೇಳಬೇಕೆಂದರೆ ಇಡೀ ಸಾರ್ವಜನಿಕರ ನಡುವೆ ನಮ್ಮ ದೇಶದ ಪ್ರಸ್ತುತ ವಾಸ್ತವ ಪರಿಸ್ಥಿತಿಗಳ ಬಗ್ಗೆ ಇನ್ನಷ್ಟು ಸ್ಪಷ್ಟವಾದ ತಿಳುವಳಿಕೆಯನ್ನು ಬೆಳೆಸುವುದಕ್ಕೆ ಹಾಗೂ ಈ ನಿಟ್ಟಿನಲ್ಲಿ ನಾವು ಕೈಗೆತ್ತಿಕೊಳ್ಳಬೇಕಿರುವ ತುರ್ತು ಕೆಲಸಗಳ ಬಗ್ಗೆ, ಅದರಲ್ಲೂ ವಿಶೇಷವಾಗಿ

ಬಡಜನರ ಪರವಾಗಿ ತುರ್ತಾಗಿ ಮಾಡಬೇಕಿರುವ ಕೆಲಸಗಳ ಬಗ್ಗೆ ಸ್ಪಷ್ಟವಾದ ತಿಳಿವಳಿಕೆಯನ್ನು ಹೆಚ್ಚಿಸುವುದಕ್ಕೆ ನಾವು ಕಟಿಬದ್ಧರಾಗಿದ್ದೇವೆ.

ಇಂತಹ ಒಂದು ಪರಿಸ್ಥಿತಿಯಲ್ಲಿ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವುದು ಅತ್ಯಂತ ತುರ್ತಿನದಾಗಿದೆ:

- ರೋಗನಿವಾರಕ ಇಲಾಖೆಯು ಏಸುಕ್ರಿಸ್ತನು ನಮಗೆ ವಹಿಸಿರುವ ಕರ್ತವ್ಯ ಎಂಬ ವಿಶಾಲ ತಿಳಿವಳಿಕೆಯನ್ನು ಹಾಗೂ ಆವಿರ್ಭವಿಸುತ್ತಿರುವ ಆರೋಗ್ಯ ಸನ್ನಿವೇಶಕ್ಕೆ ಅದು ತುರ್ತಾಗಿ ಸ್ಪಂದಿಸುವ ಅವಶ್ಯಕತೆಯನ್ನು ಅರ್ಥಮಾಡಿಕೊಂಡು ಅದಕ್ಕೆ ತಕ್ಕಂತೆ ಚರ್ಚು, ಅದರ ಭಕ್ತ ಸಮೂಹ, ಹಾಗೂ ಅದರ ಅಂಗಸಂಸ್ಥೆಗಳು ಸಂವೇದನಾಶೀಲರಾಗುವಂತೆ ಮಾಡುವುದು.

- ಪ್ರಸ್ತುತವಾಗಿ ಅಸ್ತಿತ್ವದಲ್ಲಿರುವ ಆರೋಗ್ಯ ಸನ್ನಿವೇಶವನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕವಲುಗಳೊಂದಿಗೆ, ಅದರಲ್ಲೂ ವಿಶೇಷವಾಗಿ ಅತ್ಯಂತ ಕಡುಬಡವರಾಗಿರುವ ಜನಸಮೂಹಗಳ ಆರೋಗ್ಯ ಮತ್ತು ಬದುಕಿನ ಮೇಲೆ ಅವು ಬೀರುವ ಪರಿಣಾಮಗಳನ್ನು ಲಕ್ಷ್ಯವನ್ನಾಗಿಟ್ಟುಕೊಂಡು ಆಳವಾಗಿ ಅಧ್ಯಯನ ಮಾಡಿ ವಿಶ್ಲೇಷಣೆಗೊಳಪಡಿಸುವುದು; ಹಾಗೂ ಈ ಬಡಜನತೆಗೆ ನ್ಯಾಯ ಒದಗಿಸುವ ಪ್ರಯತ್ನದಲ್ಲಿ ಅವರ ಪರವಾಗಿ ನಿಂತು ಬಲವಾಗಿ ಸಮರ್ಥಿಸುವ ಮೂಲಕ ಹಾಗೂ ಅವರೊಂದಿಗೆ ಐಕ್ಯಮತ್ಯ ಪ್ರದರ್ಶಿಸುವ ಮೂಲಕ ಪ್ರತಿಸ್ಪಂದಿಸುವುದು.

- ಪ್ರಾಥಮಿಕ ಆರೋಗ್ಯ ಪಾಲನೆಯು ಜನತೆಗೆ ಶಕ್ತಿ–ಸಾಮರ್ಥ್ಯಗಳನ್ನು ತುಂಬವ ರೀತಿಯಲ್ಲಿ ಮತ್ತು ಆರೋಗ್ಯವನ್ನು ಒಂದು ಜನಾಂದೋಲನವಾಗಿ ರೂಪಿಸುವ ರೀತಿಯಲ್ಲಿ ಲಭ್ಯವಿರುವ ಎಲ್ಲಾ ಮಾರ್ಗೋಪಾಯಗಳನ್ನು ಬಳಸಿಕೊಂಡು ಪ್ರಾಥಮಿಕ ಆರೋಗ್ಯ ಪಾಲನಾ ಪರಿಕಲ್ಪನೆಯನ್ನು ಅದರ ಅತ್ಯಂತ ವಿಶಾಲವಾದ ಅರ್ಥದಲ್ಲಿ ಉತ್ತೇಜಿಸುವುದು. ಚರ್ಚು ತನ್ನ ಭಕ್ತಸಮೂಹವನ್ನು, ಕ್ರಿಶ್ಚಿಯನ್ ಆರೋಗ್ಯ ವೃತ್ತಿಪರರನ್ನು ಹಾಗೂ ತನ್ನ ಸಹಭಾಗಿ ಆರೋಗ್ಯ ತರಬೇತಿ ಅಂಗಸಂಸ್ಥೆಗಳನ್ನು ಈ ಆರೋಗ್ಯ ಚಳವಳಿಗಾಗಿ ಅಣಿನೆರೆಸುತ್ತದೆ.

<u>ನಾವು ಅನುಸರಿಸಬೇಕಾದ ಮೂರು ಹಂತಗಳನ್ನು ಈ ಕೆಳಗೆ ಸೂಚಿಸಲಾಗಿದೆ.</u>

1. *<u>ವ್ಯಕ್ತಿಗತ ಹಂತ:</u>* ಬಿಡಿಬಿಡಿ ವ್ಯಕ್ತಿಗಳಾಗಿ ನಾವು ನಮ್ಮದೇ ಆದ ವಯಕ್ತಿಕ ಹಾಗೂ ಸಾಂಸ್ಥಿಕ ಸಂಪರ್ಕಗಳ ಮೂಲಕ ಪ್ರಾಥಮಿಕ ಆರೋಗ್ಯ ಪಾಲನೆಯ ತತ್ವ ಮತ್ತು ಆಚರಣೆಗಳಿಗೆ ಕಟಿಬದ್ಧವಾಗಿರುತ್ತೇವೆ.
2. *<u>ಸಂಘಟನೆಗಳ ಹಂತ:</u>* ಪ್ರಾಥಮಿಕ ಆರೋಗ್ಯಕ್ಕೆ ಸಂಬಂಧಿಸಿದ ಈ ಆಲೋಚನೆಗಳನ್ನು ಕಾರ್ಯಗತಗೊಳಿಸುವುದಕ್ಕೆ 'ಭಾರತದ ಕ್ರಿಶ್ಚಿಯನ್ ವೈದ್ಯಕೀಯ ಸಂಸ್ಥೆ' (Christian Medical Association of India - CMAI) ಇನ್ನಿತರ ಸಮಾನಮನಸ್ಕ ಆಸಕ್ತ ಗುಂಪುಗಳೊಂದಿಗೆ, ಜನರೊಂದಿಗೆ ಜೊತೆಗೂಡಿ ಕಾರ್ಯನಿರ್ವಹಿಸಬೇಕೆಂದು ನಾವು ಶಿಫಾರಸ್ಸು ಮಾಡುತ್ತೇವೆ.
3. *<u>ಮಾಹಿತಿ ಹಂಚಿಕೊಳ್ಳುವುದು:</u>* ಈ ಕೆಲಸಕ್ಕೆ ಸಂಬಂಧಿಸಿದಂತೆ ಆಗುತ್ತಿರುವ ಪ್ರಗತಿಯನ್ನು ನಿರಂತರವಾಗಿ ಆಗಿಂದಾಗ್ಗೆ ನಮಗೆ ತಿಳಿಸಬೇಕೆಂದು ನಾವು 'ಭಾರತದ ಕ್ರಿಶ್ಚಿಯನ್ ವೈದ್ಯಕೀಯ ಸಂಸ್ಥೆ'ಯನ್ನು ವಿನಂತಿಸುತ್ತೇವೆ. ಅದೇ ವೇಳೆಯಲ್ಲಿ ನಾವೂ ನಮ್ಮ ಅನುಭವಗಳನ್ನು ಮತ್ತು ಪ್ರತಿಸ್ಪಂದನೆಗಳನ್ನು ಉಳಿದ ಇನ್ನಿತರ ವ್ಯಕ್ತಿ–ಸಂಘಟನೆಗಳ ಜಾಲಗಳೊಂದಿಗೆ ಹಂಚಿಕೊಳ್ಳಬೇಕು.

(CMAI Primary Health Care Consultation – 1995)

1990ರ ದಶಕದ ಬಹುತೇಕ ಅವಧಿಯಲ್ಲಿ ಆರೋಗ್ಯ ನೀತಿಗಳ ಕುರಿತ ಆಸ್ಥೆಗಳಲ್ಲೆಲ್ಲಾ ಮುಂಚೂಣಿ ಪಾತ್ರ ನಿರ್ವಹಿಸಿದ 'ಭಾರತದ ಸ್ವಯಂ ಆರೋಗ್ಯ ಸಂಸ್ಥೆ'ಯು (Voluntary Health Association of India – VHAI) ದೇಶದ ಆರೋಗ್ಯ ಸೇವೆಗಳ ವಿವಿಧ ಆಯಾಮಗಳನ್ನು ಬಾಧಿಸುತ್ತಿರುವ ಬೇನೆಗಳನ್ನು ಪತ್ತೆಹಚ್ಚಿ ಅವುಗಳ ನಿವಾರಣೆಗಾಗಿ ಭವಿಷ್ಯದಲ್ಲಿ ಮಾಡಬೇಕಿರುವ ಕೆಲಸಗಳನ್ನು ಸ್ಪಷ್ಟವಾಗಿ ಶಿಫಾರಸ್ಸು ಮಾಡುವುದಕ್ಕೋಸ್ಕರ ಆರೋಗ್ಯ ಮತ್ತು ಅಭಿವೃದ್ಧಿ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಮಾಡಿ ಅಪಾರ ಅನುಭವ ಗಳಿಸಿರುವ ಹೆಸರಾಂತ ಜನರ ಒಂದು ಆಯೋಗವನ್ನು ರಚಿಸುವುದಕ್ಕಾಗಿ ನಿರ್ಧರಿಸಿತು. ಹೀಗೆ, "ಭಾರತದಲ್ಲಿ ಆರೋಗ್ಯ ಕುರಿತ ಸ್ವತಂತ್ರ

ಆಯೋಗ"ವು (Independent Commission hon Health in India - ICHI) ಅಸ್ತಿತ್ವಕ್ಕೆ ಬಂತು. ಮೂರು ವರ್ಷಗಳಿಗೂ ಅಧಿಕ ಅವಧಿಯ ಸತತ ಪರಿಶ್ರಮದ ತರುವಾಯ ಈ ವಿಚಾರ ಕುರಿತಂತೆ ಬಹು ಮುಖ್ಯವಾದ ಸ್ವತಂತ್ರ ದಸ್ತಾವೇಜು ಸಿದ್ಧಗೊಂಡಿತು; ಇದರಲ್ಲಿ ಸರ್ಕಾರಕ್ಕೆ ಮುನ್ನೂರುಕ್ಕೂ ಹೆಚ್ಚು ಶಿಫಾರಸ್ಸುಗಳನ್ನು ಮಾಡಲಾಗಿತ್ತು. ಲಭ್ಯವಿರುವ ದಸ್ತಾವೇಜುಗಳ ಹಾಗೂ ದ್ವಿತೀಯ ಹಂತದ ಮಾಹಿತಿಗಳ ಅಧ್ಯಯನ; ಆರೋಗ್ಯ ಕಾಳಜಿಗಳ ಕುರಿತ ಸಾರ್ವಜನಿಕ ವಿಚಾರಣಾ ಸಭೆಗಳು; ಬಹುಮುಖ್ಯ ವಿಷಯಗಳ ಬಗೆಗಿನ ಪ್ರಾಥಮಿಕ ಸಂಶೋದನೆ ಮುಂತಾದವುಗಳನ್ನು ಈ ಆಯೋಗ ಮಾಡಿದ ಕೆಲಸವು ಒಳಗೊಂಡಿತ್ತು. 1998ರ ಆರಂಭದಲ್ಲಿ ಸರ್ಕಾರಕ್ಕೆ ಸಲ್ಲಿಸಲಾದ ICHIನ ಈ ವರದಿಯು ನಮ್ಮ ದೇಶದಲ್ಲಿ ಆರೋಗ್ಯ ಪಾಲನಾ ಬೆಳವಣಿಗೆಯ ದಿಕ್ಕನ್ನು ಕುರಿತಂತೆ ಮುನ್ನಡೆಯುತ್ತಿರುವ ಚರ್ಚೆಗೆ ಒಂದು ಬಹುಮುಖ್ಯವಾದ ಕೊಡುಗೆಯಾಗಿದೆ. ಆರೋಗ್ಯ ಸೇವೆಗಳ ವಿಚಾರದಲ್ಲಿ ಬಡಜನರ ಪರವಾಗಿರುವ, ಜನರ ಪಾಲ್ಗೊಳ್ಳುವಿಕೆಯ ಪರವಾಗಿರುವ, ಸಮುದಾಯದ ಪರವಾಗಿರುವ ಆರೋಗ್ಯ ದೃಷ್ಟಿಕೋನವನ್ನು (ಇದು ಇಂದಿನ ತುರ್ತು ಅಗತ್ಯವಾಗಿದೆ) ಬಲವಾಗಿ ಎತ್ತಿಹಿಡಿಯುವಂತಹ ಇನ್ನಷ್ಟು ಶೋಧಿಸಿದ, ಇನ್ನಷ್ಟು ವ್ಯವಸ್ಥಿತವಾಗಿ ಐಕ್ಯಗೊಳಿಸಿ ಹೆಣೆಯಲ್ಪಟ್ಟ ವರದಿಯೊಂದನ್ನು ಸಲ್ಲಿಸುವ ಅವಕಾಶವನ್ನು ICHI ತಪ್ಪಿಸಿಕೊಂಡಿತಾದರೂ ಆರೋಗ್ಯ ಪಾಲನೆಯ ವಿಚಾರದಲ್ಲಿ ಅನುಸರಿಸಲಾಗುತ್ತಿರುವ ಅತ್ಯಂತ ಸರಳೀಕೃತ ಜೈವಿಕ ವೈದ್ಯಮಾದರಿಯ ಬಗ್ಗೆ ಅತೀವ ಕಳವಳವನ್ನಂತೂ ಖಂಡಿತಾ ವ್ಯಕ್ತಪಡಿಸಿತು; ಮಾತ್ರವಲ್ಲ, ಸಮುದಾಯದ ಪಾಲ್ಗೊಳ್ಳುವಿಕೆಯ ಅಗತ್ಯದ ಬಗ್ಗೆ ಹಾಗೂ ನಮ್ಮ 'ಪಾರಂಪರಿಕ ಸಂಸ್ಥೆಗಳಲ್ಲಿ ಮತ್ತು ಸಮುದಾಯದ'ಲ್ಲಿ ಆಳವಾಗಿ ಬೇರೂರಿರುವ ಪ್ರಯತ್ನಗಳ ಅವಶ್ಯಕತೆಯ ಬಗ್ಗೆಯೂ ಸಾಕಷ್ಟು ಒತ್ತು ನೀಡಿತು.

ಭಾರತದಲ್ಲಿ ಆರೋಗ್ಯ ಕುರಿತ ಸ್ವತಂತ್ರ ಆಯೋಗ - 1998

Independent Commission on Health in India - ICHI)

ಅತ್ಯಂತ ಸಂಕುಚಿತವಾಗಿರುವ, ಸರಳೀಕೃತವಾಗಿರುವ ತಥಾಕಥಿತ ಪ್ರಬಲ ಜೈವಿಕ-ವೈದ್ಯ ಮಾದರಿಯ ಆರೋಗ್ಯ ಪಾಲನೆಯ ಆಚೆಗೆ ಹೋಗಿ ಮಾನವನನ್ನು ಕೇಂದ್ರವನ್ನಾಗಿರಿಸಿಕೊಳ್ಳುವ ಸಮಗ್ರ ದೃಷ್ಟಿಯ ಆರೋಗ್ಯ ಪಾಲನಾ ಮಾದರಿಯ ಕಡೆಗೆ ನೋಡಬೇಕಿದೆ. ಆಧುನಿಕ ಅಲೋಪಥಿಕ್ ವೈದ್ಯ ವ್ಯವಸ್ಥೆ ಹಾಗೂ ಪಾರಂಪರಿಕ ವೈದ್ಯ ವ್ಯವಸ್ಥೆಗಳು ಒಂದು ಮತ್ತೊಂದರ ಒಳನೋಟಗಳನ್ನು ಪರಿಶೀಲಿಸುತ್ತಾ, ಫಲವತ್ತುಗೊಳಿಸುತ್ತಾ ಅವೆರಡರ ನಡುವೆ ಬಹಳ ಶಿಸ್ತುಬದ್ಧವಾದ, ಆರೋಗ್ಯಪೂರ್ಣ ಚರ್ಚೆ ನಡೆಯುವ ಅವಶ್ಯಕತೆಯಿದೆ.

ಒಂದು ದೇಶದ ಆರೋಗ್ಯ ಎಂದರೆ ಅದರ ಎಲ್ಲಾ ಪ್ರಜೆಗಳ, ಸಮುದಾಯಗಳ ಮತ್ತು ಅವು ವಾಸಿಸುವ ವಸತಿ ನೆಲೆಗಳ ಆರೋಗ್ಯದ ಒಟ್ಟು ಮೊತ್ತವೇ ಆಗಿರುತ್ತದೆ. ಒಂದು ದೇಶದ ಎಲ್ಲಾ ಜನತೆ, ಸಮುದಾಯಗಳು ಸಕ್ರಿಯವಾಗಿ ಪಾಲ್ಗೊಂಡಾಗ ಮಾತ್ರವೇ ಆರೋಗ್ಯಪೂರ್ಣ ದೇಶವನ್ನು ನಿರ್ಮಿಸುವ ಗುರಿ ಮುಟ್ಟುವುದಕ್ಕೆ ಸಾಧ್ಯವಾಗುತ್ತದೆ. ಕಳೆದ ಐದು ದಶಕಗಳಲ್ಲಿ ನಾವು ಪ್ರಧಾನವಾಗಿ ಸಂಸತ್ತು, ವಿಧಾನಸಭೆ, ಮಂತ್ರಿ ಮಂಡಳ, ಅಧಿಕಾರಶಾಹಿ ಮತ್ತು ಪಕ್ಷದ ಕಾರ್ಯನಿರ್ವಾಹಕರು - ಈ ಐದು ಸಂಸ್ಥೆಗಳ ಮೇಲೆ ಆಧಾರಪಟ್ಟಿರುವ ಸಾಮಾಜಿಕ ಪರಿವರ್ತನೆಯ ಹಾದಿಯನ್ನು ಅನುಸರಿಸಿದ್ದೇವೆ. ಪ್ರಭುತ್ವ ಮತ್ತು ಸಮಾಜದ ನಡುವೆ ಮಧ್ಯಸ್ಥಿಕೆ ಮಾಡುವ, ಸಮನ್ವಯ ಸಾಧಿಸುವ ಸಂಸ್ಥೆಗಳು ಇರದಿದ್ದರೆ ಪ್ರಭುತ್ವಕ್ಕೆ ಒಂದು ತಳಹದಿಯೇ ಇರುವುದಿಲ್ಲ; ಹಾಗಾಗಿ, ಅದು ಜನರ ಕೈಗೆ ಎಟುಕದಂತೆ ದೂರವಿರುತ್ತದೆ ಮಾತ್ರವಲ್ಲ, ಜನರ ಅಗತ್ಯಗಳಿಗೆ ಸ್ಪಂದಿಸುವ ಸಂವೇದನೆಯನ್ನೂ ಕಳೆದುಕೊಂಡುಬಿಡುತ್ತದೆ. ಇಡೀ ದೇಶದಾದ್ಯಂತ ಒಂದಲ್ಲಾ ಒಂದು ಸ್ವರೂಪದಲ್ಲಿ ಅಸ್ತಿತ್ವದಲ್ಲಿರುವ ನಮ್ಮ ಪಾರಂಪರಿಕ ಸಂಸ್ಥೆಗಳಲ್ಲಿ ಮತ್ತು ನಮ್ಮ ಸಮುದಾಯಗಳ ಮುಂದೊಡಗುಗಳಲ್ಲಿ ನಮ್ಮ ಅಭಿವೃದ್ಧಿ ಪ್ರಯತ್ನಗಳು ಆಳವಾಗಿ ಬೇರೂರಿಲ್ಲದಿರುವುದು ದುರಾದೃಷ್ಟಕರ. ಒಂದು ವೇಳೆ ಶತಶತಮಾನಗಳಿಂದ ಕೆಲವು ವಿಶೇಷ ಗುಣಲಕ್ಷಣಗಳೊಂದಿಗೆ ಬೆಳೆದುನಿಂತಿರುವ ನಮ್ಮ ರಾಷ್ಟ್ರೀಯ ಮನೋಧರ್ಮಕ್ಕನುಗುಣವಾಗಿ ನಮ್ಮನ್ನು ನಾವು ಹೊಂದಿಸಿಕೊಂಡರೆ ಪ್ರಗತಿಯನ್ನು ಬಹಳ ಸುಲಭವಾಗಿ ಸಾಧಿಸಿಬಿಡಬಹುದು; ಇದನ್ನು ನಿರ್ಲಕ್ಷಿಸಿದರೆ ಅಥವ ತಿರಸ್ಕರಿಸಿ ಬದಿಗೊತ್ತಿದರೆ ಅದು ತನ್ನ ನೆಲೆಯನ್ನು, ತನ್ನ ಬೇರುಗಳನ್ನು ಕಳೆದುಕೊಳ್ಳುತ್ತಾ ನಿಧಾನವಾಗಿ ಕೊನೆಗೆ ಸತ್ವವನ್ನೇ ಕಳೆದುಕೊಂಡು ಚೈತನ್ಯರಹಿತವಾಗಿಬಿಡುತ್ತದೆ.

(ICHI ವರದಿಗೆ ಅಲೋಕ್ ಮುಖ್ಯೋಪಾಧ್ಯಾಯ ಅವರು ಬರೆದ ಮುನ್ನುಡಿಯಿಂದ ಆಯ್ದ ಭಾಗಗಳು)

ದೇಶದಲ್ಲಿ ಹುಟ್ಟಿಬರುತ್ತಿರುವ 'ಸಮುದಾಯ ಆರೋಗ್ಯ ಚಳವಳಿ'ಯನ್ನು ಬೆಂಬಲಿಸುತ್ತಿರುವ ಅತ್ಯಂತ ಪ್ರಮುಖವಾಗಿರುವ ಇತ್ತೀಚಿನ ಎರಡು ಬೆಳವಣಿಗೆಗಳು ಎಂದರೆ ಆರೋಗ್ಯವನ್ನು ತಮ್ಮ ಕಾರ್ಯಸೂಚಿಯಲ್ಲಿ ಸೇರ್ಪಡೆಗೊಳಿಸುವುದಕ್ಕೆ ಪ್ರಾರಂಭಿಸಿರುವ 'ಪ್ರಜಾ ಚಳವಳಿಗಳ ರಾಷ್ಟ್ರೀಯ ಮೈತ್ರಿಕೂಟ' (National Alliance of Peoples Movement - NAPM) ಮತ್ತು ಅಖಿಲ-ಭಾರತ ಪ್ರಜಾ ವಿಜ್ಞಾನ ಜಾಲ (All India Peoples Science Network - AIPSN). ಆವಿರ್ಭವಿಸುತ್ತಿರುವ ಈ ಕಾರ್ಯಸೂಚಿಯಾದರೂ ಏನು?

ಪ್ರಜಾ ಚಳವಳಿಗಳ ರಾಷ್ಟ್ರೀಯ ಮೈತ್ರಿಕೂಟ - 1996
(National Alliance of Peoples Movement - NAPM)

'ಪ್ರಜಾ ಚಳವಳಿಗಳ ರಾಷ್ಟ್ರೀಯ ಮೈತ್ರಿಕೂಟ'ವು ಇತ್ತೀಚಿನ ವರ್ಷಗಳಲ್ಲಿ ಒಂದು ಬೆಳೆಯುತ್ತಿರುವ ವಿದ್ಯಮಾನವಾಗಿದೆ. ಸಹಭಾಗಿ ಸಂಘಟನೆಗಳ, ವ್ಯಕ್ತಿಗಳ ಒಂದು ಒಕ್ಕೂಟವಾಗಿ ಹೊರಹೊಮ್ಮುವುದಕ್ಕೆ ಅದು ಪ್ರಯತ್ನಿಸುವುದಿಲ್ಲ. ಅದೊಂದು ರೀತಿಯಲ್ಲಿ ಜನಮುಖಿ ಅಭಿವೃದ್ಧಿ ಮಾದರಿಯನ್ನು ರಾಜಕೀಯ ಮತ್ತು ಸಾರ್ವಜನಿಕ ಬದುಕಿನ ಕೇಂದ್ರ ಸ್ಥಾನಕ್ಕೆ ತರುವುದಕ್ಕಾಗಿ ಜೊತೆಗೂಡಿ ಹೋರಾಡುತ್ತಿರುವ ಸಮಾನ ಮನಸ್ಕ ಸಂಘಟನೆಗಳು ಮತ್ತು ಚಳವಳಿಗಳು ತಮ್ಮ ಸ್ವಾಯತ್ತತೆಯನ್ನು, ಪ್ರತ್ಯೇಕ ಗುರುತನ್ನು ಉಳಿಸಿಕೊಳ್ಳುತ್ತಲೇ ಒಂದು ವೇದಿಕೆಯಡಿಯಲ್ಲಿ ಒಗ್ಗೂಡುವ ಪ್ರಕ್ರಿಯೆಯಾಗಿದೆ. ಎಲ್ಲರೂ ಒಪ್ಪಬಹುದಾದ ಒಂದು ನಿರ್ದಿಷ್ಟ ಸೈದ್ಧಾಂತಿಕ ಸಾಮಾನ್ಯತೆ ಮತ್ತು ವ್ಯೂಹತಂತ್ರಗಳ ಆಧಾರದಲ್ಲಿ ಒಗ್ಗೂಡುವ ಅಂತಹ ಒಂದು ಮೈತ್ರಿಕೂಟವು ಬಲಿಷ್ಠವಾದ ಸಾಮಾಜಿಕ ಮತ್ತು ರಾಜಕೀಯ ಶಕ್ತಿಯ ಉಗಮಕ್ಕೆ ಹಾಗೂ ಆ ಮೂಲಕ ರಾಷ್ಟ್ರೀಯ ಜನಾಂದೋಲನದ ಹುಟ್ಟಿಗೆ ಕಾರಣವಾಗಬಲ್ಲದು.

1996ರಲ್ಲಿ ವಿಕಾಸಗೊಂಡು ಆವಿರ್ಭವಿಸಿದ ಪ್ರಜಾ ಪ್ರಣಾಳಿಕೆಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ:

"ಘನತೆಯಿಂದ ಬದುಕುವ ಜನರ ಹಕ್ಕು ಸರ್ವಶ್ರೇಷ್ಠವಾದುದೆಂದು ನಾವು ನಂಬುತ್ತೇವೆ. ಬಡತನ, ಬದುಕಿನ ಆಧಾರಗಳ ನಾಶ ಮತ್ತು ನಿರುದ್ಯೋಗವನ್ನು ಹೋಗಲಾಡಿಸುವುದಕ್ಕಾಗಿ ಹೋರಾಡಲು ನಾವು ಕಟಿಬದ್ಧರಾಗಿದ್ದೇವೆ. ಜನರನ್ನು ಹೊರಗಿಡುವಂತಹ, ಅವರ ಜೀವನಾಧಾರಗಳನ್ನು ಅವರಿಂದ ಕಸಿಕುಕೊಳ್ಳುವಂತಹ, ಬೆಲೆಗಳು ಸುರುಳಿಯಾಕಾರದಲ್ಲಿ ಮೇಲೇರುವುದಕ್ಕೆ ಕಾರಣವಾಗುವ, ನಿರುದ್ಯೋಗವನ್ನು ಸೃಷ್ಟಿಸುವ ಹಾಗೂ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕನ್ನು ಶ್ರೀಮಂತಗೊಳಿಸಲು ಕೊಡುಗೆ ನೀಡುವುದಕ್ಕೆ ಜನರ ಮಾನವ-ಅಂತಃಸ್ಸಾಮರ್ಥ್ಯವನ್ನು ತಡೆಯುವ ಎಲ್ಲಾ ನೀತಿಗಳನ್ನು ಮತ್ತು ಪ್ರಕ್ರಿಯೆಗಳನ್ನು ನಾವು ಬಲವಾಗಿ ವಿರೋಧಿಸುತ್ತೇವೆ. ಸಮಾಜದ ಎಲ್ಲಾ ಸದಸ್ಯರೂ ಘನತೆ ಮತ್ತು ನಿರ್ಭೀತಿಯಿಂದ ಬದುಕುವುದಕ್ಕೆ ಹಕ್ಕುಗಳನ್ನು ಮತ್ತು ಅವಕಾಶಗಳನ್ನು ಖಾತ್ರಿಯಾಗಿ ನೀಡುವ ನೈತಿಕ, ನ್ಯಾಯಸಮ್ಮತ ಮತ್ತು ಬಹುಕಾಲ ಉಳಿಯಬಲ್ಲ ಸಮಾಜವೊಂದನ್ನು ಕಟ್ಟುವುದಕ್ಕೆ ನಾವು ಶ್ರಮಿಸುತ್ತೇವೆ.....

"ಪರಸ್ಪರ ಗೌರವ ಮತ್ತು ಪರಸ್ಪರ ಬದುಕಿನ ಕಾಳಜಿಗಳ ಆಧಾರದ ಮೇಲೆ ನಿಂತ ಮಾನವೀಯತೆಯಿಂದ ಕೂಡಿದ, ಎಲ್ಲರನ್ನೂ ಒಳಗೊಳ್ಳುವ ಹಾಗೂ ಪ್ರಜಾತಾಂತ್ರಿಕವಾದ ಸಮಾಜವೊಂದನ್ನು ಕಟ್ಟುವುದಕ್ಕೆ ನಾವು ದೃಢ ನಿಶ್ಚಯ ಮಾಡಿದ್ದೇವೆ. ಸಾದಗಿ (ಸರಳ ಜೀವನ) ಎಂಬುದು ಕೇವಲ ಒಂದು ಆದರ್ಶ ಕನಸು ಮಾತ್ರ ಅಲ್ಲ. ಸಮಾನತೆ ಸಾಧಿಸಬೇಕೆಂದರೆ ಮತ್ತು ನ್ಯಾಯವು ಸಮಾನವಾಗಿ ಹಂಚಿಕೆಯಾಗಬೇಕೆಂದರೆ ಆಹಾರ, ಬಟ್ಟೆ, ವಸತಿ, ಆರೋಗ್ಯ ಮತ್ತು ಶಿಕ್ಷಣಗಳಂಥ ಮೂಲಭೂತ ಅವಶ್ಯಕತೆಗಳನ್ನು ಸರ್ವರಿಗೂ ಖಾತ್ರಿಯಾಗಿ ನೀಡುವಂತಹ ಲಭ್ಯ ಸಂಪನ್ಮೂಲಗಳನ್ನು ಬಹಳ ವಿವೇಚನೆಯಿಂದ ಬಳಸಬೇಕಾಗುತ್ತದೆ. ಮಿತಿಮೀರಿದ ಸಾರ್ವಜನಿಕ ಖರ್ಚುಗಳನ್ನು ಹಾಗೂ ವ್ಯರ್ಥ ಬಳಕೆಯನ್ನು ನಿಲ್ಲಿಸುವುದರಿಂದ ಮಾತ್ರವೇ ಹಾಗೂ ಭೌತಿಕ ಸಂಪತ್ತಿಗಲ್ಲದೇ ಕ್ರಿಯಾಶೀಲತೆಗೆ ಮತ್ತು ನಿಸ್ವಾರ್ಥ ಮಾನವೀಯತೆಗೆ ಮೌಲ್ಯ ಕೊಟ್ಟಾಗ ಮಾತ್ರವೇ ಅದು ಸಾಧ್ಯವಾಗುತ್ತದೆ....."

ಈ ಹೊಸ ಬೆಳವಣಿಗೆಯು ಅಧಿಕಾರ ಸಂಬಂಧಗಳನ್ನು ಸಮುದಾಯ ಆರೋಗ್ಯ ಚಳವಳಿಯ ಬೆಂಬಲದೊಂದಿಗೆ ಕಾರ್ಯನಿರ್ವಹಿಸುತ್ತಿದ್ದ ಆರೋಗ್ಯ ವೃತ್ತಿಪರರಿಂದ ಜನರಿಗೆ ವರ್ಗಾಯಿಸಿದ್ದು ಬಹುದೊಡ್ಡ, ಮಹ್ವಪೂರ್ಣ ಬೆಳವಣಿಗೆಯಾಗಿದ್ದು ಅದಕ್ಕೆ ಬೃಹತ್ ಅಂತಃಸಾಮರ್ಥ್ಯವಿದೆ.

ಈ ನಿಟ್ಟಿನಲ್ಲಿ ಇನ್ನೊಂದು ಮಹತ್ವಪೂರ್ಣ ಬೆಳವಣಿಗೆ ಎಂದರೆ "ಅಖಿಲ-ಭಾರತ ಪ್ರಜಾ ವಿಜ್ಞಾನ ಜಾಲ"ದ (AIPSN) ವಿಕಾಸಗೊಳ್ಳುತ್ತಿರುವ ಸಮುದಾಯ ಆರೋಗ್ಯ ಕಾರ್ಯಸೂಚಿ. AIPSN ಕಾರ್ಯಜಾಲವು ಇತ್ತೀಚಿನ ವರ್ಷಗಳಲ್ಲಿ ನಮ್ಮ ದೇಶದಲ್ಲಿ ನಡೆಯುತ್ತಿರುವ ವಿಜ್ಞಾನದಲ್ಲಿ ವಿವಿಧ ಸಾಮಾಜಿಕ ಕಾಳಜಿಗಳನ್ನು ಕುರಿತ ಚಟುವಟಿಕೆಗಳಲ್ಲಿ ಬಹಳ ಮುಂಚೂಣಿ ಪಾತ್ರ ನಿರ್ವಹಿಸುತ್ತಿದೆ. ಆರೋಗ್ಯ ಕುರಿತ ಸಮಿತಿಯು ಆಗಸ್ಟ್ 15ರಂದು, ಭಾರತದ ದೇಶದ ಐವತ್ತನೇ ಸ್ವಾತಂತ್ರ್ಯ ಮಹೋತ್ಸವದ ಸಂದರ್ಭದಲ್ಲಿ, ಹೊರತಂದ "ಬದುಕುವುದು ಮತ್ತು ಅಸ್ತಿತ್ವದಲ್ಲಿರುವುದು – ಇವುಗಳ ನಡುವೆ" (Between Living and Surviving) ಎಂಬ ಶೀರ್ಷಿಕೆಯನ್ನು ಹೊಂದಿದ ಪುಸ್ತಿಕೆಯು ಬಹಳ ಸ್ಪಷ್ಟವಾಗಿ, ಬಹಳ ಸರಳವಾಗಿ ಹಾಗೂ ಬಹಳ ಪರಿಣಾಮಕಾರಿಯಾಗಿ ಸಮುದಾಯ ಆರೋಗ್ಯ ಕಾರ್ಯಸೂಚಿಯನ್ನು ನಿಷ್ಕೃಷ್ಟವಾಗಿ ಪ್ರತಿಪಾದಿಸಿದೆ. 1993ರ "ವಿಶ್ವ ಅಭಿವೃದ್ಧಿ ವರದಿ"ಯು (World Development Report) ಆಲ್ಮಾ ಆಟಾ ಘೋಷಣೆಯನ್ನು ಹೇಗೆ ವಿರೂಪಗೊಳಿಸಿದೆಯೆಂಬುದನ್ನು ಬಹಳ ಚೆನ್ನಾಗಿ ಬಯಲುಗೊಳಿಸಿದೆ; ಮಾತ್ರವಲ್ಲ ಈ ವಿರೂಪವನ್ನು ಪ್ರತಿರೋಧಿಸಲು ಸಮೂಹ ಸಾರ್ವಜನಿಕ ಹೋರಾಟ ನಡೆಸಬೇಕೆಂದೂ ಹಾಗೂ ಪರಿಣಾಮಕಾರಿಯಾದ ಆರೋಗ್ಯ ವ್ಯವಸ್ಥೆಯೊಂದನ್ನು ಪ್ರತಿಷ್ಠಾಪಿಸಲು ಒಂದು ಜನಾಂದೋಲ ರೂಪಿಸಬೇಕೆಂದೂ ಕರೆಕೊಟ್ಟಿದೆ.

ಆಲ್ಮಾ ಆಟಾ ಘೋಷಣೆ ಮತ್ತು ವಿಶ್ವ ಬ್ಯಾಂಕ್ ವರದಿಯ ಸಾದೃಶ್ಯತೆ

ಮೂಲಭೂತ ಮಾನವ ಹಕ್ಕಾಗಿ ಆರೋಗ್ಯ ಪಾಲನೆ – ಆಲ್ಮಾ ಆಟಾ ಘೋಷಣೆ, 2978	ಸುರಕ್ಷಾ ಕವಚವಾಗಿ ಆರೋಗ್ಯ ಪಾಲನೆ – ವಿಶ್ವಬ್ಯಾಂಕ್ ವರದಿ, 1993
1. ಸಮಗ್ರ ಪ್ರಾಥಮಿಕ ಆರೋಗ್ಯವು 'ಉತ್ತೇಜನಾಕಾರಿ, ಪ್ರತಿಬಂಧಾತ್ಮಕ, ಗುಣಕಾರಿ ಹಾಗೂ ಮರುಸ್ಥಾಪನಾತ್ಮಕ ಸೇವೆಗಳನ್ನು ಒದಗಿಸುತ್ತಾ ಒಟ್ಟಾರೆ ಸಮುದಾಯದ ಪ್ರಮುಖ ಆರೋಗ್ಯ ಸಮಸ್ಯೆಗಳನ್ನು ನಿಭಾಯಿಸುತ್ತದೆ.'	1. ಆಯ್ದ ಪ್ರಾಥಮಿಕ ಆರೋಗ್ಯ ಪಾಲನೆ: ಇದು ರಾಷ್ಟ್ರೀಯ ಕೇಂದ್ರವು ಬಹುಮುಖ್ಯವೆಂದು ಗುರುತಿಸಿರುವ ಆರು ಕ್ಷೇತ್ರಗಳನ್ನು ನಿಭಾಯಿಸುತ್ತದೆ.
2. ಆರೋಗ್ಯ ಪಾಲನೆಯನ್ನು ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರ ಮಟ್ಟಿಗೆ ಜನರ ಬಳಿ ಕೊಂಡೊಯ್ಯುವಂತಹ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆ.	2. ಬಹುತೇಕ ಗುಣಕಾರಿ ಆರೋಗ್ಯ ಸೇವೆಗಳನ್ನು ಖಾಸಗೀ ಕ್ಷೇತ್ರವು ಒದಗಿಸುತ್ತದೆ
3. ಪ್ರಕ್ರಿಯೆಯ ಮೇಲೆ ಒತ್ತು: ಅಂತರ್‌ಕ್ಷೇತ್ರೀಯ ಸಂಬಂಧಗಳು (ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳ ನಡುವೆ – ಅಸು), ಸಮಾನತೆ, ಮೂಲಭೂತ ಅವಶ್ಯಕತೆಗಳು ಮತ್ತು ಜನರ ಪಾಲ್ಗೊಳ್ಳುವಿಕೆ	3. ನಿಗಧಿತ ತಂತ್ರಜ್ಞಾನದ ಸಾಧನಗಳ ಮೂಲಕ ರೋಗವನ್ನು ನಿರ್ಮೂಲನೆ ಮಾಡುವುದಕ್ಕೆ ಹೆಚ್ಚಿನ ಒತ್ತು. ಎಷ್ಟು ಸಾವುಗಳುಂಟಾಗುವುದನ್ನು ತಪ್ಪಿಸಲಾಯಿತು ಎಂಬ ಸಂಖ್ಯೆಯ ಆಧಾರದಲ್ಲಿ ತಂತ್ರಜ್ಞಾನದ ಸಾಮರ್ಥ್ಯವನ್ನು ಅಳೆಯುವುದು.
4. ಆರೋಗ್ಯ ಪಾಲನೆಗೆ ಸಂಬಂಧಪಟ್ಟಂತೆ ಯೋಜನೆ ರೂಪಿಸುವಲ್ಲಿ, ಅದನ್ನು ಅನುಷ್ಠಾನಗೊಳಿಸುವಲ್ಲಿ ಜನರು ಬಿಡಿ ಬಿಡಿ ವ್ಯಕ್ತಿಯಾಗಿ ಹಾಗೂ ಒಂದು ಸಾಮೂಹಿಕ ಸಮಷ್ಠಿಯಾಗಿ ಪಾಲ್ಗೊಳ್ಳುವ ಹಕ್ಕನ್ನು, ಕರ್ತವ್ಯವನ್ನು ಹೊಂದಿರುತ್ತಾರೆ.	4. ಅತ್ಯಂತ ಕಡಿಮೆ ಖರ್ಚಿನಲ್ಲಿ ಯಾವ ರೋಗಗಳನ್ನು ನಿಭಾಯಿಸಬಹುದು ಎಂಬುದನ್ನು ಪ್ರಭುತ್ವವು ನಿರ್ಧರಿಸಿ ಅಂತಹ ರೋಗಗಳ ಮೇಲಷ್ಟೇ ಗಮನ ಕೇಂದ್ರೀಕರಿಸುವುದು (ಇದರಿಂದ ಪ್ರಭುತ್ವದ ಖರ್ಚು ಕಡಿಮೆಯಿರುವಂತೆ ನೋಡಿಕೊಳ್ಳಬಹುದು)

- ಬಡತನ ವಿರುದ್ಧದ ಹಾಗೂ ಸಂಪತ್ತು–ಅಧಿಕಾರಗಳಲ್ಲಿ ಅಸಮಾನತೆಗಳ ವಿರುದ್ಧದ ಅಭಿಯಾನಗಳು.

- *ಉತ್ತಮ ಬದುಕುವ ಪರಿಸರಕ್ಕಾಗಿನ ಅಭಿಯಾನ:* ಪರಿಸರ ಚಳವಳಿಗಳು, ಉತ್ತಮ ವಸತಿಗಾಗಿನ ಚಳವಳಿಗಳು, ಕುಡಿಯುವ ನೀರು, ಶೌಚಾಲಯ ಮುಂತಾದ ಮೂಲಭೂತ ಅವಶ್ಯಕತೆಗಳಿಗಾಗಿನ ಚಳವಳಿಗಳು.

- *ಕೆಲಸದ ಸ್ಥಳಗಳಲ್ಲಿ ಉತ್ತಮ ಪರಿಸ್ಥಿತಿಗಳಿಗಾಗಿನ ಅಭಿಯಾನ:* ಉತ್ಪಾದನಾ ಶಕ್ತಿಗಳ ಮೇಲಿನ ನಿಯಂತ್ರಣವನ್ನು ಪ್ರಜಾತಾಂತ್ರೀಕರಣಗೊಳಿಸುವ ಗುರಿಯನ್ನಿಟ್ಟುಕೊಂಡಿರುವ ಚಳವಳಿಗಳು.

- ಪುರುಷಾಧಿಪತ್ಯ ಮತ್ತು ಇನ್ನಿತರ ತಾರತಮ್ಯಗಳ ವಿರುದ್ಧದ ಅಭಿಯಾನಗಳು: ಮಹಿಳಾ ಚಳವಳಿಗಳು ಮತ್ತು ಮಹಿಳಾವಾದಿ ಚಳವಳಿಗಳು ಹಾಗೂ ಮಹಿಳೆಯರ ವಿರುದ್ಧದ ತಾರತಮ್ಯವನ್ನು ಹಾಗೂ ಜಾತಿ, ಜನಾಂಗೀಯತೆ ಮುಂತಾದವುಗಳ ಆಧಾರದಲ್ಲಿ ನಡೆಯುವ ತಾರತಮ್ಯಗಳನ್ನು ವಿರೋಧಿಸುವ ಇನ್ನಿತರ ಪ್ರಜಾತಾಂತ್ರಿಕ ಚಳವಳಿಗಳು.

- ಇಂದಿನ ಒಪ್ಪಿತ ಮೌಲ್ಯಗಳನ್ನು, ರೂಢಿಮಾದರಿಗಳನ್ನು ಹಾಗೂ ಪದ್ಧತಿಗಳನ್ನು ಪ್ರಶ್ನಿಸುವ ಸಾಂಸ್ಕೃತಿಕ ಚಳವಳಿಗಳು.

- ಕಡು ಬಡತನದಲ್ಲಿ ಬೇಯುತ್ತಿರುವ ಹಾಗೂ ತೀವ್ರವಾಗಿ ದಮನಕ್ಕೊಳಗಾಗಿರುವ ಮಾನವನ ಪರಿಸ್ಥಿತಿಯನ್ನು ಕಂಡು ಬೇಗುದಿಯಿಂದ ಕಡುಸಂಕಟಕ್ಕೊಳಗಾಗಿರುವ, ಆದರೂ ಆಶಾವಾದಿಯಾಗಿರುವ ಚಳವಳಿಗಳು.

- ವಿಶಾಲ ಸಾರ್ವಭೌಮತ್ವಕ್ಕಾಗಿನ ಚಳವಳಿಗಳು; ಇದರಿಂದ ಭಾರತದ ಆರೋಗ್ಯ ನೀತಿಗಳು ಭಾರತದಲ್ಲೇ ನಿರ್ಧಾರವಾಗುತ್ತವೆಯೇ ಹೊರತು ***ವಿಶ್ವ ಬ್ಯಾಂಕಿನ*** ಹಿಂಬದಿಯ ಕೊಠಡಿಗಳಲ್ಲಲ್ಲ....."

* * * * *

COM H-11.

ಸಮುದಾಯ ಆರೋಗ್ಯ

ಹೊಸ ಮಾದರಿಯೊಂದರ ಹುಡುಕಾಟ

'ಆರೋಗ್ಯ ಎಂದರೆ ಕೇವಲ ರೋಗ ಇಲ್ಲದಿರುವಿಕೆ ಅಥವ ದೇಹದೌರ್ಬಲ್ಯದಿಂದ ಮುಕ್ತವಾಗಿರುವುದು ಎಂದಷ್ಟೇ ಅಲ್ಲ, ಬದಲಿಗೆ ಅದು ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಸ್ವಾಸ್ಥ್ಯಗಳೆಲ್ಲವನ್ನೂ ಒಳಗೊಂಡಿರುತ್ತದೆ'
ಎಂದು ಆರೋಗ್ಯವನ್ನು 1968ರಲ್ಲಿ ವಿಶ್ವ ಆರೋಗ್ಯ ಸಂಘಟನೆ (WHO) ವ್ಯಾಖ್ಯಾನಿಸಿದೆ. ಈ ವ್ಯಾಖ್ಯಾನವು ಬಿಡಿ ಬಿಡಿ ವ್ಯಕ್ತಿಗಳ ಆರೋಗ್ಯವನ್ನು ಕೇಂದ್ರವನ್ನಾಗಿಗಟ್ಟುಕೊಂಡಿದ್ದು ಇದನ್ನೇ ನಾವು ಕುಟುಂಬ ಮತ್ತು ಸಮುದಾಯಗಳಿಗೂ ಬಹಳ ಚೆನ್ನಾಗಿ ಅನ್ವಯಿಸಿ ವಿವರಿಸಬಹುದು. ಈ ದೃಷ್ಟಿಯಲ್ಲಿ 'ಸಮುದಾಯ ಆರೋಗ್ಯ' ಎಂದರೆ ಒಂದು ಸಮುದಾಯ ಹಾಗೂ ಅದರ ಸದಸ್ಯರೆಲ್ಲರ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಸ್ವಾಸ್ಥ್ಯವನ್ನು ಸುಧಾರಿಸುವ ಒಂದು ಪ್ರಕ್ರಿಯೆ ಎಂದು ಅರ್ಥೈಸಬಹುದು.

ಪ್ರತಿಬಂಧಾತ್ಮಕ ಹಾಗೂ ಸಾಮಾಜಿಕ ಆರೋಗ್ಯಕ್ಕೆ ಸಂಬಂಧಿಸಿದ ಸುಪ್ರಸಿದ್ಧ ಭಾರತೀಯ ಪಠ್ಯಪುಸ್ತಕವು (ಪಾರ್ಕ್ ಪಠ್ಯಪುಸ್ತಕ ಎಂದೇ ಸುಪ್ರಸಿದ್ಧವಾಗಿರುವ) ಬಿಡಿ ಬಿಡಿ ವ್ಯಕ್ತಿಯಿಂದ ಸಮುದಾಯದೆಡೆಗಿನ ಈ ಪರಿವರ್ತನೆಯನ್ನು ಇನ್ನಷ್ಟು ಚೆನ್ನಾಗಿ ವಿವರಿಸುತ್ತದೆ: *"ಒಂದು ಕಾಲದಲ್ಲಿ ರೋಗ ಗುಣಪಡಿಸುವ ಕಲೆ ಎಂದಷ್ಟೇ ಪರಿಗಣಿಸಲಾಗುತ್ತಿದ್ದ ಔಷಧೋಪಚಾರ ಕ್ರಿಯೆ ಇಂದು ನಿರ್ದಿಷ್ಟ ಸಮಾಜವೊಂದರ ಜನತೆಯ ಆರೋಗ್ಯವನ್ನು ಉತ್ತೇಜಿಸುವಂಥ, ಪುನರ್‌ಸ್ಥಾಪಿಸುವಂಥ ಹಾಗೂ ಅದನ್ನು ಕಾಪಾಡಿಕೊಂಡು ಹೋಗುವಂಥ ಎಲ್ಲಾ ಚಟುವಟಿಕೆಗಳ ಒಟ್ಟು ಮೊತ್ತ ಎಂದು ಪರಿಗಣಿಸಲ್ಪಡುತ್ತಿದೆ. ಎಲ್ಲಿ ಇಂಥ ಒಂದು ಪರಿಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆಯೋ ಅಲ್ಲಿ ಔಷಧಿ ಎಂದರೆ ಫಿಜಿಷಿಯನ್‌ನ ಕ್ರಿಯೆ ಎಂದಷ್ಟೇ ಅರ್ಥೈಸಿಕೊಳ್ಳುವುದಿಲ್ಲ, ಬದಲಿಗೆ ಅದನ್ನು ದಾಟಿದ ವಿಶಾಲ ವ್ಯಾಪ್ತಿಯ ಅರ್ಥ ಇರುತ್ತದೆ; ಅದನ್ನು 'ಸಮುದಾಯ ಆರೋಗ್ಯ'ವೆಂಬುದಾಗಿ ಪರಿಗಣಿಸಲಾಗುತ್ತದೆ."*

ಭಾರತದಲ್ಲಿ ಈ "ಸಮುದಾಯ ಆರೋಗ್ಯ" ಎಂಬ ಪರಿಕಲ್ಪನೆಗೆ ಬಹಳ ವಿಶೇಷ ಮಹತ್ವವಿದೆ. ಏಕೆಂದರೆ, ಹಲವು ದಶಕಗಳ ಹಿಂದಿನಿಂದಲೂ, ಆರೋಗ್ಯಕ್ಕೆ ಸಂಬಂಧಿಸಿದಂತೆ 'ಸರ್ವರಿಗೂ ಪ್ರಾಥಮಿಕ ಆರೋಗ್ಯ' ಎಂಬ ಹೊಸ ಪರಿಕಲ್ಪನೆಯನ್ನು ಜನಪ್ರಿಯಗೊಳಿಸಿದ ಆಲ್ಮಾ ಆಟಾ ಘೋಷಣೆಗಿಂತಲೂ ಮುಂಚೆಯೇ ಭಾರತದಲ್ಲಿ ಆರೋಗ್ಯವನ್ನು ಅನುಷ್ಠಾನಗೊಳಿಸುವುದಕ್ಕೆ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಪ್ರತಿಪಾದಕರಿಗೆ, ಕಾರ್ಯಕರ್ತರಿಗೆ ಮತ್ತು ಯೋಜನೆ ರೂಪಕರಿಗೆ "ಸಮುದಾಯ ಆರೋಗ್ಯ" ಎಂಬುದು ಒಂದು ದೃಷ್ಟಿಕೋನವಾಗಿದೆ, ಒಂದು ಪರಿಭಾಷೆಯಾಗಿದೆ, ಒಂದು ಪ್ರಕ್ರಿಯೆಯಾಗಿದೆ, ಒಂದು ಆಲೋಚನೆಯಾಗಿದೆ, ಅಷ್ಟು ಮಾತ್ರವಲ್ಲ ಅವರಿಗೆ ಅದೊಂದು ಸಿದ್ಧಾಂತವಾಗಿದೆ. ಹಲವಾರು ಸಮಾನ ಮನಸ್ಕ ಗುಂಪುಗಳಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಅಕೆಡೆಮಿಕ್ ಮತ್ತು ಪಾಶ್ಚಿಮಾತ್ಯ ಗುಂಪುಗಳಲ್ಲಿ 'ಪ್ರಾಥಮಿಕ ಆರೋಗ್ಯ ಪಾಲನೆ' ಎಂಬುದನ್ನು 'ಸಾರ್ವಜನಿಕ ಆರೋಗ್ಯ' ಹಾಗೂ 'ಸಮುದಾಯ ಆರೋಗ್ಯ' ಎಂಬ ಪರಿಕಲ್ಪನೆಗಳಿಗೆ ಸಂವಾದಿಯಾಗಿ, ಸಮಾನಾರ್ಥಕವಾಗಿ ಬಳಸಲಾಗುತ್ತದೆ. 'ಸಮುದಾಯ ಆರೋಗ್ಯ' ಎಂಬುದು 'ಪ್ರಾಥಮಿಕ ಆರೋಗ್ಯ ಪಾಲನೆ' ಮತ್ತು 'ಸಾರ್ವಜನಿಕ ಆರೋಗ್ಯ'ಗಳಿಗಿಂತ ವಿಶಾಲವಾದುದು ಎಂಬುದು ನಮ್ಮ ನಂಬಿಕೆಯಾಗಿದೆ. 'ಆರೋಗ್ಯ ಕಾರ್ಯ' ಪತ್ರಿಕೆಯ ಈ ವಿಶೇಷ ಸಂಚಿಕೆಗಾಗಿನ ಈ ವಿಶೇಷ ಮುಖಪುಟ ಲೇಖನಕ್ಕೆ *"ಸಮುದಾಯ ಆರೋಗ್ಯ: ಹೊರ ಮಾದರಿಯೊಂದರ ಹುಡುಕಾಟ"* ಎಂಬ ಶೀರ್ಷಿಕೆಯನ್ನು ಕೊಡಲಾಗಿದ್ದು ಇದರಲ್ಲಿ ನಮ್ಮ ದೇಶದಲ್ಲಿ ನಾವು ಅರ್ಥ ಮಾಡಿಕೊಂಡಂತೆ 'ಸಮುದಾಯ ಆರೋಗ್ಯ' ಎಂಬ 'ಪರಿಕಲ್ಪನೆ' ಮತ್ತು 'ದೃಷ್ಟಿಕೋನ'ಗಳು ವಿಕಾಸ ಹೊಂದುವುದಕ್ಕೆ ಸಹಕರಿಸಿದ ಕೀಲಕ ದಸ್ತಾವೇಜುಗಳು, ಮುಂದೊಡಗುಗಳು ಹಾಗೂ ಘಟನಾವಳಿಗಳ ಗುರುತುಗಳನ್ನು ಚಾರಿತ್ರಿಕವಾಗಿ ಒಂದಾದ ಮೇಲೆ ಒಂದರಂತೆ (ಅದು ದಿನಾಂಕವಾರು ಕ್ರಮಗತಿಯಲ್ಲೇ ಇರಬೇಕೆಂದೇನೂ ಇಲ್ಲ) ಅವಲೋಕಿಸಲು ಪ್ರಯತ್ನಿಸಲಾಗಿದೆ.

ವೈದ್ಯರನ್ನು, ನರ್ಸ್‌ಗಳನ್ನು, ಆರೋಗ್ಯ ಮತ್ತು ಅಭಿವೃದ್ಧಿ ಕಾರ್ಯಕರ್ತರನ್ನು, ಶಿಕ್ಷಕರನ್ನು, ಮುಂದಾಲೋಚಕರನ್ನು ಹಾಗೂ ನಾಗರಿಕರನ್ನು ಆಸ್ಪತ್ರೆ ಮತ್ತು ಡಿಸ್ಪೆನ್ಸರಿಗಳು, ಔಷಧಿ ಮತ್ತು ಔಷಧೀಯ ತಂತ್ರಜ್ಞಾನಗಳು, ಶಸ್ತ್ರಚಿಕಿತ್ಸೆ ಮತ್ತು ಅತ್ಯುನ್ನತ ರೋಗಪತ್ತೆ ವಿಧಾನಗಳು ಮುಂತಾದವುಗಳ ಆಧಾರದ ಮೇಲೆಯೇ ನಿಂತಿರುವ ಜೈವಿಕ-ವೈದ್ಯಕೀಯ ವ್ಯವಸ್ಥೆಯಿಂದ ಆಚೆಗೆ ಕರೆದುಕೊಂಡು ಹೋಗಿ ಸಮುದಾಯ ಕೇಂದ್ರಿತವಾದ, ಸಮುದಾಯೋನ್ನತಿಯ ದೃಷ್ಟಿಕೋನ ಹೊಂದಿರುವ ಹಾಗೂ ಸಮುದಾಯದ ಮೇಲೆಯೇ ಆಧಾರಪಟ್ಟಿರುವ 'ಆರೋಗ್ಯ ಕಾರ್ಯ'ವನ್ನು ಅವರಿಗೆ ತೋರಿಸುವ ಒಂದು ಯಾತ್ರೆಯನ್ನಾಗಿ ಅಥವ ಒಂದು ಪ್ರಯಾಣವನ್ನಾಗಿ ಈ ಲೇಖನವನ್ನು ಅರ್ಥ ಮಾಡಿಕೊಳ್ಳಬೇಕೆಂದು ನಾವು ಬಯಸುತ್ತೇವೆ; ಸಮುದಾಯ ಆಧಾರಿತ ಆರೋಗ್ಯ ಕಾರ್ಯಕರ್ತರು, ಸ್ವಯಂಸೇವಾ ಕಾರ್ಯಕರ್ತರು, ಸಮುದಾಯ ಆಧಾರಿತ ಸೂಕ್ತ ತಂತ್ರಜ್ಞಾನಗಳು, ಆರೋಗ್ಯ

ಜಾಗೃತಿ ಕಾರ್ಯಕ್ರಮಗಳು, ಪಾರಂಪರಿಕ ರೋಗನಿವಾರಣಾ ಪದ್ಧತಿಗಳೊಂದಿಗಿನ ಸಂವಾದಗಳು ಹಾಗೂ ಸಮಗ್ರ ಗ್ರಾಮೀಣ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವಿಕೆಗಳು ಮುಂತಾದವುಗಳ ಮೇಲೆ ಒತ್ತುನೀಡಿರುವ 'ಆರೋಗ್ಯ ಕಾರ್ಯ'ದ ಕಡೆ ಕೊಂಡೊಯ್ಯುವ ಯಾತ್ರೆ ಅಥವ ಪ್ರಯಾಣವನ್ನಾಗಿ ಈ ಲೇಖನವನ್ನು ಅರ್ಥ ಮಾಡಿಕೊಳ್ಳಬೇಕೆಂದು ಬಯಸುತ್ತೇವೆ; ಎಲ್ಲಕ್ಕಿಂತ ಹೆಚ್ಚಾಗಿ ಇದು ಆರೋಗ್ಯ ಎಲ್ಲರಿಗೂ ಸುಲಭವಾಗಿ ದೊರೆಯಲು ಸಾಧ್ಯವಿರುವಂಥ ಹೆಚ್ಚೆಚ್ಚು ನ್ಯಾಯಸಮ್ಮತವಾದ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ-ರಾಜಕೀಯ ವ್ಯವಸ್ಥೆಗಾಗಿನ ಒಂದು ಹೋರಾಟವಾಗಿದೆ.

'ಸಮುದಾಯ ಆರೋಗ್ಯ'ಕ್ಕೆ ಸಂಬಂಧಿಸಿದಂತೆ ಮೊಟ್ಟ ಮೊದಲ ಬಾರಿಗೆ ದಿಕ್ಕುತೋರಿಸಿದ 1946ರ ಚಾರಿತ್ರಿಕ ಭೋರೆ ಸಮಿತಿಯ ವರದಿಯೊಂದಿಗೆ (ಆರೋಗ್ಯ-ಸರ್ವೇಕ್ಷಣೆ ಮತ್ತು ಅಭಿವೃದ್ಧಿ ಸಮಿತಿ ವರದಿ ಎಂದೂ ಇದನ್ನು ಕರೆಯಲಾಗುತ್ತದೆ) ನಮ್ಮ ಈ ಪ್ರಯಾಣವನ್ನು ಪ್ರಾರಂಭಿಸೋಣ. ಅಸಲಿಗೆ, ಭಾರತ ಸ್ವಾತಂತ್ರ್ಯಕ್ಕಿಂತ ಸ್ವಲ್ಪ ಮುಂಚೆಯಷ್ಟೇ ಬಂದ ಈ ವರದಿಯೇ ನಮ್ಮ ದೇಶದ 'ಆರೋಗ್ಯ ವ್ಯವಸ್ಥೆ'ಯ ಮೂಲ ನೀಲನಕ್ಷೆಯನ್ನು ಹಾಕಿಕೊಟ್ಟದ್ದು. ಭೋರೆ ಸಮಿತಿಯು ನಮ್ಮ ದೇಶದ ಆಕಾಂಕ್ಷೆಗಳಿಗೆ ಹಾಗೂ ಅದರ ಆರ್ಥಿಕ ವಾಸ್ತವಗಳಿಗೆ ಅತ್ಯುತ್ತಮವಾಗಿ ಹೊಂದಿಕೆಯಾಗುವಂಥ ಸಂಭವನೀಯ 'ಆರೋಗ್ಯ ವ್ಯವಸ್ಥೆ'ಯ ಬಗ್ಗೆ ವಸ್ತುನಿಷ್ಠ ವಿಶ್ಲೇಷಣೆಗಳನ್ನು ಹಾಗೂ ಯಥೇಚ್ಛ ಶಿಫಾರಸ್ಸುಗಳನ್ನು ಮಾಡಿದೆ; ಜೊತೆಗೆ, 'ಸ್ಥಳೀಯ ಪ್ರಯತ್ನಗಳನ್ನು ಬೆಳೆಸುವುದು' ಸ್ವಸಹಾಯದ ಸ್ಫೂರ್ತಿಯನ್ನು ಉತ್ತೇಜಿಸುವುದು ಹಾಗೂ 'ಜನರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸುವುದು' – ಇವು ನಮ್ಮೆಲ್ಲಾ ಪ್ರಯತ್ನಗಳ ಕೇಂದ್ರ ಬಿಂದುವಾಗಿರಬೇಕು ಎಂದು ಭೋರೆ ಸಮಿತಿ ಒತ್ತಿ ಹೇಳುತ್ತದೆ.

ಸಮುದಾಯ ಆರೋಗ್ಯದ ಮುನ್ನೋಟಗಳು (1946)

"ಸ್ಥಳೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಸ್ಥಳೀಯ ಜನರ ಸಕ್ರಿಯ ಪಾಲ್ಗೊಳ್ಳುವಿಕೆಯಿಲ್ಲದೇ ಯಾವುದೇ ಶಾಶ್ವತ ಸಾರ್ವಜನಿಕ ಆರೋಗ್ಯ ಸುಧಾರಣೆಯನ್ನು ಸಾಧಿಸಲು ಸಾಧ್ಯವಿಲ್ಲ. ಈ ಕಾರಣಕ್ಕಾಗಿಯೇ ನಾವು ಪ್ರತೀ ಹಳ್ಳಿಯಲ್ಲೂ ಆಯಾ ಹಳ್ಳಿಯ ಗಾತ್ರ ಮತ್ತು ಜನಸಂಖ್ಯೆಗನುಗುಣವಾಗಿ ಐದರಿಂದ ಏಳು ವ್ಯಕ್ತಿಗಳನ್ನೊಳಗೊಂಡ 'ಆರೋಗ್ಯ ಸಮಿತಿ'ಯನ್ನು ಸ್ಥಾಪಿಸಬೇಕೆಂದು ಸಲಹೆ ನೀಡಿದ್ದೇವೆ. ಸ್ವಯಂಸೇವಾ ಕಾರ್ಯಕರ್ತರೇ ಆಗಿರುವ ಸಮಿತಿಯ ಸದಸ್ಯರು ಸೂಕ್ತ ತರಬೇತಿಯ ನಂತರ ನಿರ್ದಿಷ್ಟ ಆರೋಗ್ಯ ಕ್ರಿಯಾ ಧಾರೆಯನ್ನು ಉತ್ತೇಜಿಸುವುದಕ್ಕೆ ಖಂಡಿತವಾಗಿಯೂ ನೆರವಾಗಬಲ್ಲರು. ಸಾರ್ವಜನಿಕ ಯೋಗಕ್ಷೇಮವನ್ನು ಉತ್ತೇಜಿಸುವ ದೃಷ್ಟಿಯಿಂದ ಯೋಜಿಸಲಾದ ಆರೋಗ್ಯ ಕ್ರಮಗಳನ್ನು ಜನರು ಒಪ್ಪಿಕೊಳ್ಳುವಂತೆ ಮಾಡುವುದಕ್ಕೆ ಹಾಗೂ ಈ ನಿಟ್ಟಿನಲ್ಲಿ ಸಕ್ರಿಯವಾಗಿ ಮುನ್ನುಗ್ಗಿ ಕಾರ್ಯಪ್ರವೃತ್ತರಾಗುವಂತೆ ಜನರನ್ನು ಪ್ರೇರೇಪಿಸುವುದಕ್ಕೆ ಸಮಿತಿಯ ಸದಸ್ಯರ ಸ್ಥಳೀಯ ಜ್ಞಾನ ಮತ್ತು ಸ್ಥಳೀಯ ಜನರೊಂದಿಗಿನ ಅವರ ಅವಿನಾಭಾವ ಒಡನಾಟ ಅವರನ್ನು ಶಕ್ತರನ್ನಾಗಿ ಮಾಡಬೇಕು. ಹಣಕಾಸಿನ ದೃಷ್ಟಿಯಲ್ಲಿ ಕಾರ್ಯಸಾಧುವಲ್ಲದ, ಕೈಗೆಟುಕದ ಕ್ರಮಗಳು ಎಂದೇ ಪರಿಗಣಿಸಲ್ಪಟ್ಟಿರುವ ಇನ್ನಿತರ ಅನೇಕ ಸ್ಥಳೀಯ ಪ್ರಯತ್ನಗಳನ್ನೂ ಕೂಡ ಯಾವುದೇ ರೀತಿಯಲ್ಲಿ ಹಣದ ಪ್ರತಿಫಲಾಪೇಕ್ಷೆಯಿಲ್ಲದೇ ಉತ್ತೇಜಿಸುವುದಕ್ಕೆ ಸಮಿತಿಯ ಸದಸ್ಯರು ಸಮರ್ಥರಾಗಿರಬೇಕು. *ಆರೋಗ್ಯ ಕಾರ್ಯಕ್ರಮವೊಂದು ಯಶಸ್ವಿಯಾಗಬೇಕಾದರೆ ಆರೋಗ್ಯ ಅಧಿಕಾರಿಗಳು ಆರೋಗ್ಯ ಸೇವೆಗಳನ್ನು ಜನರ ಅವಶ್ಯಕತೆಗನುಗುಣವಾಗಿರುವಂತೆ ನೋಡಿಕೊಳ್ಳಬೇಕಿರುವುದು ಎಷ್ಟು ಮುಖ್ಯವೋ ಸಮುದಾಯಗಳಲ್ಲಿ ಸ್ಥಳೀಯ ಪ್ರಯತ್ನಗಳನ್ನು ಬೆಳೆಸಬೇಕಿರುವುದು ಹಾಗೂ ಸ್ವಸಹಾಯ ಸ್ಫೂರ್ತಿಯನ್ನು ಉತ್ತೇಜಿಸಬೇಕಿರುವುದೂ ಅಷ್ಟೇ ಮುಖ್ಯವಾಗಿರುತ್ತವೆ"*

– ಆರೋಗ್ಯ-ಸರ್ವೇಕ್ಷಣೆ ಮತ್ತು ಅಭಿವೃದ್ಧಿ ಸಮಿತಿ

(ಭೋರೆ ಸಮಿತಿ) 1946

ಬ್ರಿಟೀಷ್ ಆಡಳಿತಾವಧಿಯಲ್ಲಿ ಅಭಿವೃದ್ಧಿಗೊಂಡ ಆರೋಗ್ಯ ಸೇವೆಗಳು ಭಾರತದ ಎಲ್ಲಾ ಸ್ಥಳಗಳ ಎಲ್ಲಾ ಜನರಿಗೂ, ಎಲ್ಲಾ ಪ್ರದೇಶಗಳಿಗೂ ತಲುಪಿರಲಿಲ್ಲ. ಸ್ವಾತಂತ್ರ್ಯಾ ನಂತರದಲ್ಲಿ ಅಂಥ ಕೈಗೆಟುಕದ ಪ್ರದೇಶಗಳಿಗೂ ಆರೋಗ್ಯ ಸೇವೆಗಳನ್ನು ತಲುಪಿಸುವಂತಹ ವ್ಯವಸ್ಥೆಯು ದೇಶದಲ್ಲಿ ಅಭಿವೃದ್ಧಿಗೊಳ್ಳುವುದಕ್ಕೆ ಪ್ರಾರಂಭಿಸಿತು. ಅದರೊಂದಿಗೆ, ಸಮುದಾಯ ಅಭಿವೃದ್ಧಿ ಘಟಕ ಎಂಬ ಪರಿಕಲ್ಪನೆಯೂ ವಿಕಾಸ ಹೊಂದುವುದಕ್ಕೆ ಪ್ರಾರಂಭಿಸಿತು; ಈ ಪ್ರಕ್ರಿಯೆಯಲ್ಲಿ ಒಂದೊಂದು 'ಸಮುದಾಯ ಅಭಿವೃದ್ಧಿ ಘಟಕ'ದ ಪಾಲನೆಯಲ್ಲೂ ಸಮುದಾಯ ಆರೋಗ್ಯ

ಅಗತ್ಯಗಳನ್ನು, ಅದರಲ್ಲೂ ವಿಶೇಷವಾಗಿ ಮಹಿಳೆ ಮತ್ತು ಮಕ್ಕಳ ಆರೋಗ್ಯ ಅಗತ್ಯಗಳನ್ನು ಈಡೇರಿಸುವುದಕ್ಕಾಗಿ 'ಪ್ರಾಥಮಿಕ ಆರೋಗ್ಯ ಕೇಂದ್ರ' ಎಂಬ ಆಲೋಚನೆಯೂ ವಿಕಾಸ ಹೊಂದಿತು.

ಮುದಲಿಯಾರ್ ವರದಿಯು (ಅದನ್ನು ಆರೋಗ್ಯ-ಸರ್ವೇಕ್ಷಣೆ ಮತ್ತು ಯೋಜನಾ ವರದಿ ಎಂದೂ ಕರೆಯುತ್ತಾರೆ) 'ಪ್ರಾಥಮಿಕ ಆರೋಗ್ಯ ಕೇಂದ್ರ'ದ ಮೇಲೆ ಹೆಚ್ಚು ಒತ್ತುಕೊಟ್ಟು, ಅದರ ವ್ಯಾಪ್ತಿ ಮತ್ತು ಸಂರಚನೆಗಳ ಕುರಿತಂತೆ ಸ್ಪಷ್ಟವಾದ ಸ್ಥೂಲ ಚಿತ್ರಣವನ್ನು ಕೊಡುತ್ತದೆ; ಪರಿಣಾಮಕಾರಿ ಆರೋಗ್ಯ ಪರಿಹಾರದೊಂದಿಗೆ ಗಾಢವಾಗಿ ಮಿಳಿತಗೊಂಡ ಪ್ರತಿಬಂಧಾತ್ಮಕ ಆರೋಗ್ಯ ಕೆಲಸಕ್ಕೆ ಬುನಾದಿ ಹಾಕಬೇಕಿರುವ ಅವಶ್ಯಕತೆಯನ್ನು ಅದು ಒತ್ತಿ ಹೇಳುತ್ತದೆ; ಹಾಗೂ ತಾಯಂದಿರು ಮತ್ತು ಮಕ್ಕಳು ತಮ್ಮಿಂದ ಮೊದಲ್ಗೊಂಡು ಇಡೀ ಸಮುದಾಯಕ್ಕೆ ವಿಸ್ತರಿಸಬಹುದಾದ ಅಂಥ ಕೇಂದ್ರಗಳ ಮತ್ತು ಮುಂದೊಡಗಿನ ಪ್ರಯತ್ನಗಳ ಮುಂಚೂಣಿಯಲ್ಲಿರುವ ಅಗತ್ಯವನ್ನು ಒತ್ತಿ ಹೇಳುತ್ತದೆ.

ಮುದಲಿಯಾರ್ ವರದಿ – 1961

"ಪ್ರಾಥಮಿಕ ಘಟಕದ ಕೇಂದ್ರ ಕಚೇರಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವೇ ನಾಭಿ ಬಿಂದುವಾಗಿದ್ದು ಅಲ್ಲಿಂದಲೇ ನಮ್ಮ ಕಾರ್ಯಕ್ರಮದಲ್ಲಿ ನಿರೀಕ್ಷಿಸಲಾಗಿರುವ ವಿವಿಧ ಆರೋಗ್ಯ ಚಟುವಟಿಕೆಗಳು ಹೊರಹೊಮ್ಮುತ್ತವೆ. ಈ ಅಲ್ಪಕಾಲೀನ ಕಾರ್ಯಕ್ರಮದ ಅವಧಿಯಲ್ಲಿ ಪ್ರತಿಯೊಂದೂ ಘಟಕದಲ್ಲೂ ಕಾರ್ಯನಿರ್ವಹಿಸುವುದಕ್ಕೆ ಅವಶ್ಯವಿರುವ ಸಿಬ್ಬಂದಿ ಎಂದರೆ: ಇಬ್ಬರು ವೈದ್ಯಕೀಯ ಅಧಿಕಾರಿಗಳು, ಕೇಂದ್ರದ ಹೊರಗೆ ಕಾರ್ಯನಿರ್ವಹಿಸುವುದಕ್ಕೆ ನಾಲ್ಕು ಸಾರ್ವಜನಿಕ ಆರೋಗ್ಯ ನರ್ಸ್‌ಗಳು, ಡಿಸ್ಪೆನ್ಸರಿಯಲ್ಲಿ ಕೆಲಸ ಮಾಡುವುದಕ್ಕೆ ಒಬ್ಬ ನರ್ಸ್, ನಾಲ್ಕು ಹೆರಿಗೆ ಸಹಾಯಕಿಯರು, ನಾಲ್ಕು ತರಬೇತುಗೊಂಡ ದಾಯಿಯರು (ಅಗತ್ಯವಿರುವಷ್ಟು ಸಂಖ್ಯೆಯ ನರ್ಸ್‌ಗಳು ಲಭ್ಯವಾಗುವ ತನಕ ಇದೊಂದು ಮಧ್ಯಂತರ ಕ್ರಮವಷ್ಟೆ), ಇಬ್ಬರು ಶೌಚಾಲಯ ಪರಿವೀಕ್ಷಕರು, ಇಬ್ಬರು ಆರೋಗ್ಯ ಸಹಾಯಕರು, ಇಬ್ಬರು ಗುಮಾಸ್ತರು,... ಹಾಗೂ ಒಬ್ಬ ಫಾರ್ಮಾಸಿಸ್ಟ್. ಪ್ರಾಥಮಿಕ ಘಟಕದ ವ್ಯಾಪ್ತಿಗೆ ಬರುವ ಇಡೀ ಪ್ರದೇಶವು ಈ ಸಿಬ್ಬಂದಿಯ ಕಾರ್ಯಕ್ಷೇತ್ರವಾಗಿರುತ್ತದೆಯಾದರೂ ಸಾರ್ವಜನಿಕ ಆರೋಗ್ಯ ನರ್ಸ್‌ಗಳು, ಹೆರಿಗೆ ಸಹಾಯಕಿಯರು ಮತ್ತು ತರಬೇತುಗೊಂಡ ದಾಯಿಯರನ್ನು ಹೊರತುಪಡಿಸಿ ಉಳಿದಂತೆ ಈ ಎಲ್ಲಾ ಸಿಬ್ಬಂದಿಯು ಪ್ರಾಥಮಿಕ ಘಟಕದ ಕೇಂದ್ರ ಕಚೇರಿಯಲ್ಲೇ ಇರಬೇಕು. ಸಾರ್ವಜನಿಕ ಆರೋಗ್ಯ ದಾದಿಯರ, ಹೆರಿಗೆ ಸಹಾಯಕಿಯರ ಹಾಗೂ ತರಬೇತುಗೊಂಡ ದಾಯಿಯರ ಸೇವೆ ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲಲ್ಲಿ ಅವರ ಸೇವೆ ಪ್ರಾಮಾಣಿಕವಾಗಿ, ಸುಲಭವಾಗಿ ದೊರೆಯುವ ಹಾಗೆ ಅವರನ್ನು ವಿಭಿನ್ನ ಪ್ರದೇಶಗಳಲ್ಲಿ ನಿಯೋಜನೆಗೊಳಿಸಿರಬೇಕು.

ಭಾರತದಲ್ಲಿ ಆರೋಗ್ಯ ಕಾರ್ಯಕ್ರಮವು ಪ್ರತಿಬಂಧಾತ್ಮಕ ಆರೋಗ್ಯ ಕೆಲಸದ ಅಡಿಪಾಯದ ಮೇಲೆಯೇ ಅಭಿವೃದ್ಧಿಗೊಳ್ಳಬೇಕೆಂದು ಹಾಗೂ ವೈದ್ಯಕೀಯ ಪರಿಹಾರ ಕುರಿತ ಆಡಳಿತ ನಿರ್ವಹಣೆಯ ನಿಕಟ ಸಹಯೋಗದೊಂದಿಗೆ ಅದು ಮುಂದುವರೆಯಬೇಕೆಂದೂ ನಾವು ಭಾವಿಸುತ್ತೇವೆ. ರೋಗ ಬರದಂತೆ ತಡೆಯುವ ಪ್ರತಿಬಂಧಾತ್ಮಕ ಕೆಲಸದ ಮೂಲಕ ಮಾತ್ರವಷ್ಟೇ ರೋಗ ಗುಣಪಡಿಸುವ ಚಿಕಿತ್ಸೆಗಾಗಿನ ಬೇಡಿಕೆಯನ್ನು ಕಡಿಮೆ ಮಾಡಬಹುದು. ಆದ್ದರಿಂದ ವೈದ್ಯರು ಮತ್ತು ಪ್ರಾಥಮಿಕ ಘಟಕಗಳು ರೋಗ ಗುಣಪಡಿಸುವ ಹಾಗೂ ರೋಗ ಬರದಂತೆ ತಡೆಯುವ ಎರಡೂ ಆರೋಗ್ಯ ಕರ್ತವ್ಯನ್ನು ನಿರ್ವಹಿಸಬೇಕು.

ನಾವು ತಾಯ್ತನ ಹಾಗೂ ಮಕ್ಕಳ ಯೋಗಕ್ಷೇಮದ ಕೆಲಸವನ್ನೇ ನಮ್ಮ ಕಾರ್ಯಕ್ರಮದ ಮುಂಚೂಣಿಯಲ್ಲಿರಿಸಿದ್ದೇವೆ. ಹತ್ತು ವರ್ಷದೊಳಗಿನ ಮಕ್ಕಳು ಹಾಗೂ ಬಸಿರು, ಹೆರಿಗೆಗಳಿಗೆ ಸಂಬಂಧಪಟ್ಟ ಕಾರಣಗಳಿಂದಾಗಿ ಮಹಿಳೆಯರು ಪುನರುತ್ಪಾದನೆಯ ವಯಸ್ಸಿನಲ್ಲಿ ಪ್ರತೀ ವರ್ಷ ತಡೆಯಬಹುದಾದ ಸಾವುಗಳಿಗೆ ಬಲಿಯಾಗುತ್ತಿರುವುದರ ಬಗ್ಗೆ ಈಗಾಗಲೇ ಗಮನ ಸೆಳೆಯಲಾಗಿದೆ. ಈ ಕಾರಣದಿಂದಾಗಿ ಈ ನಿರ್ದಿಷ್ಟ ಜನವಿಭಾಗದ ಸಮಸ್ಯೆಗಳ ಮೇಲೆ ತುರ್ತಾಗಿ ಗಮನವಹಿಸಿ ಪರಿಹರಿಸಬೇಕಾಗಿರುವುದು ನಮ್ಮ ಪ್ರಧಾನ ಆದ್ಯತೆಯ ಕೆಲಸವಾಗಿದೆ. ಮುಂದುವರಿದು ಹೇಳಬೇಕೆಂದರೆ, ಸಾರ್ವಜನಿಕ ಆರೋಗ್ಯದ ಪ್ರಗತಿಶೀಲವಾಗಿ ಬೆಳೆಯಬೇಕೆಂದರೆ ಜನರು ಶುಚಿಯಾದ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ; ಅದನ್ನು ಸಾಧಿಸಬೇಕೆಂದರೆ ಜನರಿಗೆ ನಿರಂತರವಾಗಿ ಶಿಕ್ಷಣ ನೀಡಬೇಕಾಗುತ್ತದೆ. ದೀರ್ಘಕಾಲೀನ ಫಲಿತಾಂಶಗಳು ಸಿಗಬೇಕೆಂದರೆ ಪ್ರಧಾನವಾಗಿ ಮಹಿಳೆಯರು ಮತ್ತು ಮಕ್ಕಳಿಗೆ ವಿಸ್ತೃತವಾಗಿ ಈ ಶಿಕ್ಷಣವನ್ನು ಕೊಡಬೇಕು. ಮಹಿಳಾ ವೈದ್ಯೆ, ಸಾರ್ವಜನಿಕ ಆರೋಗ್ಯ ನರ್ಸ್ ಮತ್ತು ಹೆರಿಗೆ ಸಹಾಯಕಿಯರು ಮಹಿಳೆಯರ ಮತ್ತು ಮಕ್ಕಳ ನಡುವೆ ತಮಗಿರುವ ವಿಸ್ತೃತ ಸಂಪರ್ಕ ಜಾಲವನ್ನು ಬಳಸಿಕೊಂಡು ಆರೋಗ್ಯ ಸಂದೇಶವನ್ನು ಮನೆಮನೆಗೆ ಕೊಂಡೊಯ್ಯಬಲ್ಲರು."

ಆರೋಗ್ಯ-ಸರ್ವೇಕ್ಷಣೆ ಮತ್ತು ಯೋಜನಾ ಸಮಿತಿ

(ಮುದಲಿಯಾರ್ ವರದಿ)

1960ರ ದಶಕದ ಕೊನೆಯ ಭಾಗದಲ್ಲಿ 'ಪ್ರಾಥಮಿಕ ಆರೋಗ್ಯ ಕೇಂದ್ರ'ಗಳ ಪರಿಕಲ್ಪನೆಯು ಆರೋಗ್ಯ ಪಾಲನೆಯ ಅವಶ್ಯಕತೆಯಿರುವ ಎಲ್ಲಾ ಜನರನ್ನೂ ತಲುಪುತ್ತಾ ಸಮುದಾಯದ ಆರೋಗ್ಯ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಹೊರಹೊಮ್ಮುತ್ತದೆ ಎಂದು ಒಂದು ರೀತಿಯ ಭ್ರಾಂತಿ ಸೃಷ್ಟಿಯಾಯಿತು; ಅದೇ ವೇಳೆಯಲ್ಲಿ ಆರೋಗ್ಯ ಕಾರ್ಯಾನುಷ್ಠಾನದ ಕೆಲಸ ಮಾತ್ರ ಇಳಮುಖಗೊಳ್ಳಲು ಪ್ರಾರಂಭಿಸಿತಲ್ಲದೆ ಗುಣಾತ್ಮಕ ಸೇವೆಗಳನ್ನು ತ್ಯಾಗ ಮಾಡಿ ಪ್ರಮಾಣಾತ್ಮಕ ಮೂಲಸೌಕರ್ಯಗಳನ್ನು ವಿಸ್ತರಿಸುವ ಸಮಸ್ಯೆಗಳು ಹೆಚ್ಚಾಗಿ ಕಂಡುಬರಲಾರಂಭಿಸಿದವು. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಹಂತಗಳಲ್ಲಿ ಬಹುತೇಕ ಯೋಜಿತ ಆರೋಗ್ಯ ಕಾರ್ಯಕ್ರಮಗಳಲ್ಲಿ ತಲೆದೋರಿದ ಅಧಿಕಾರಶಾಹಿ ಸ್ವಭಾವ ಮತ್ತು ಮೇಲು ಸ್ತರದಿಂದ ಕೆಳಸ್ತರಕ್ಕೆ ಯೋಜನೆಗಳನ್ನು ಪ್ರಾರಂಭಿಸುವ ಪ್ರವೃತ್ತಿಗಳೂ ಕೂಡ ಭೋರೆ ಮತ್ತು ಮುದಲಿಯಾರ್ ಸಮಿತಿಗಳಲ್ಲಿ ಒತ್ತುಕೊಟ್ಟು ಹೇಳಿರುವ ಸಮುದಾಯದ ತೊಡಗುವಿಕೆ ಮತ್ತು ಪಾಲ್ಗೊಳ್ಳುವಿಕೆ ಎಂಬ ಕೀಲಕ ಅಂಶಗಳನ್ನೇ ನಿರಾಕರಿಸಿದವು. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಾಗೂ ಗ್ರಾಮೀಣ ಆಸ್ಪತ್ರೆಗಳನ್ನು ಉನ್ನತ ದರ್ಜೆಗೇರಿಸುವುದನ್ನು ಬಿಟ್ಟು ಮೆಟ್ರೋಪಾಲಿಟನ್ ಮಹಾನಗರಗಳಲ್ಲಿ ಮತ್ತು ರಾಜಧಾನಿ ಕೇಂದ್ರಗಳಲ್ಲಿ ಆರೋಗ್ಯ ಸೇವೆಗಳನ್ನು ಸುಧಾರಿಸುವುದಕ್ಕೆ ಹೆಚ್ಚಿನ ಮಹತ್ವ ನೀಡಲಾಯಿತು. ಈ ಕಾರಣದಿಂದಾಗಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಯಾಕೆ ಲಭ್ಯವಿರುವುದಿಲ್ಲ? ಬಡವರಿಗಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಔಷಧಿಗಳು ಏಕೆ ಸಿಗುವುದಿಲ್ಲ? ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಯಾಕೆ ನೀರು ಮತ್ತು ವಿದ್ಯುತ್‌ನಂಥ ಮೂಲಭೂತ ಅವಶ್ಯಕತೆಗಳೂ ಇರುವುದಿಲ್ಲ? ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಉಪ ಕೇಂದ್ರಗಳನ್ನು ಯಾಕಿಷ್ಟು ಕಳಪೆ ದರ್ಜೆಯಲ್ಲಿ ನಿರ್ಮಿಸಲಾಗಿದೆ? ಎಂಬಂತಹ ಬಹಳ ಸರಳ ಪ್ರಶ್ನೆಗಳನ್ನು ಬಹಳಷ್ಟು ಜನ ಹೆಚ್ಚುಹೆಚ್ಚಾಗಿ ಕೇಳಲಾರಂಭಿಸಿದರು.

ಪರಿಸ್ಥಿತಿ ಹೀಗೆ ಬೆಳೆಯುತ್ತಿರುವ ಸಂದರ್ಭದಲ್ಲೇ ನಮ್ಮ ಸಮಾಜದ ವಾಸ್ತವಗಳಿಗೆ ಹೊಂದಿಕೆಯಾಗಬಲ್ಲ, ಪ್ರಸ್ತುತವಾಗಬಲ್ಲ ಆರೋಗ್ಯ ವ್ಯವಸ್ಥೆಯೊಂದನ್ನು ಹಾಗೂ ಆಲೋಚನಾ ಕ್ರಮವನ್ನು ಅಭಿವೃದ್ಧಿಪಡಿಸುವ ಅವಶ್ಯಕತೆಯಿದೆಂದು ಬಹಳಷ್ಟು ತಜ್ಞರಿಗೆ, ಸ್ವಯಂಸ್ಫೂರ್ತಿಯಿಂದ ಕೆಲಸ ಮಾಡುವ ಆರೋಗ್ಯ ಕಾರ್ಯಕರ್ತರಿಗೆ, ಅಕೆಡೆಮಿಕ್ ವಲಯದವರಿಗೆ, ಸಂಶೋಧಕರಿಗೆ ಮತ್ತು ದೂರಗಾಮಿ ದೃಷ್ಟಿಯುಳ್ಳವರಿಗೆ ಬಹಳ ಗಾಢವಾಗಿ ಅನ್ನಿಸತೊಡಗಿತು. ಈ ಕೆಲಸವನ್ನು ಯಾರು ಪ್ರಾರಂಭಿಸಬೇಕು? ಈ ಎಲ್ಲಾ ಪ್ರಯತ್ನಗಳಲ್ಲಿ ಅತ್ಯಂತ ಜನಪ್ರಿಯವಾದದ್ದೆಂದರೆ ಡಾ.ಆರ್.ಎಸ್.ಅರೋಳೆ ಮತ್ತು ದಿವಗಂತ ಡಾ.ಮಾಬೆಲ್ಲೆ ಅರೋಳೆಯವರು ಪ್ರಾರಂಭಿಸಿದ ಜಮ್ಖೇಡ್ ಯೋಜನೆ. ಇದನ್ನು 'ಭಾರತದ ಸ್ವಯಂ ಆರೋಗ್ಯ ಸಂಸ್ಥೆ ಜಾಲ'ವು (ಗಿಡಿಣಣಡಿಣಣಚಿಡಿಥಿ ಊಣಚಿಣಣಡಿಣ ಛಿಥಿಣಣಚಿಣಡಿಣ ಡಿಜಿ ಖಣಚಿಜಡಿಚಿ – ಗಿಊಂಖ) ರೂಪಿಸಿದ ಅನುಭವ ಸರಣಿಯಲ್ಲಿ ಬಹಳ ಚೆನ್ನಾಗಿ ದಾಖಲಿಸಲಾಗಿದೆ. ಜಮ್ಖೇಡ್ ಒಂದು ರೀತಿಯಲ್ಲಿ ಮಾದರಿ ನಮೂನೆಯಾಗಿ, ಒಂದು ಸ್ಫೂರ್ತಿಯ ಸೆಲೆಯಾಗಿ ಮಾರ್ಪಟ್ಟಿತು. ಈ ಯೋಜನೆಯ ಬಗ್ಗೆ ಈಗಾಗಲೇ ಬಹಳಷ್ಟು ಬರೆಯಲಾಗಿದೆ. ಆದರೆ, ಇಬ್ಬರೂ ಅರೋಲೆಯವರು ಸೇರಿ ಆಹ್ಮದ್‌ನಗರ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಜನರೊಂದಿಗೆ ಬೆರೆತು ಕಾರ್ಯಾರಂಭ ಮಾಡಿದ ಇಪ್ಪತ್ನಾಲ್ಕು ವರ್ಷಗಳ ನಂತರ ಜೊತೆಗೂಡಿ ಬರೆದ 'ಅಹ್ಮದ್‌ನಗರ ಜಿಲ್ಲೆ ೨ರಲ್ಲಿ ಸಮಗ್ರ ಗ್ರಾಮೀಣ ಆರೋಗ್ಯ ಯೋಜನೆ' ಎಂಬ ಪುಸ್ತಕದ ಅತ್ಯಂತ ಸಮಗ್ರ ಕತೆಯು ಲಾಲಾಭಾಯಿ, ಪುರುಭಾಯಿ, ಯಮುನಾಭಾಯಿ ಹಾಗೂ ಇವರಂತೆಯೇ ಗ್ರಾಮೀಣ ಆರೋಗ್ಯಕ್ಕಾಗಿನ ನಿರಂತರ ಹುಡುಕಾಟದಲ್ಲಿ ಅರೋಳೆಯವರೊಂದಿಗೆ ಜೊತೆಗೂಡಿದ ಎಲ್ಲಾ ಜನರ ಕತೆಯಾಗಿದೆ. ಈ ಪುಸ್ತಕದ ಕೊನೆಯ ಅಧ್ಯಾಯದಲ್ಲಿ ಅರೋಳೆಯವರು ನ್ಯಾಯಸಮ್ಮತತೆ, ಬದ್ಧತೆ ಮತ್ತು ಅಧಿಕಾರ ನೀಡಿಕೆ ಎಂಬ ಶಿರ್ಷಿಕೆಯಡಿಯಲ್ಲಿ ತಾವು ಕಲಿತ ಗುಣಪಾಠಗಳನ್ನು ಹಂಚಿಕೊಳ್ಳುತ್ತಾರೆ.

ಜಮ್ಖೇಡ್ ಸ್ಫೂರ್ತಿ

ಜಮ್ಖೇಡ್‌ಗೆ ಬಂದ ನಂತರದ ಈ ಇಪ್ಪತ್ತಮೂರು ವರ್ಷಗಲ್ಲಿ ಬಹಳಷ್ಟು ಬದಲಾವಣೆಗಳುಂಟಾಗಿವೆ. ಜನರ ಬದುಕಿನ ವಾಸ್ತವಗಳಾಗಿರುವ ಬಡತನ, ಜ್ಞಾನದ ಕೊರತೆ, ಮೂಢನಂಬಿಕೆ, ಭಯ ಮತ್ತು ಅನ್ಯಾಯಗಳು ಪದೇ ಪದೇ ನಮ್ಮನ್ನಾವರಿಸಿಕೊಂಡಿವೆ. ಸಿಆರ್‌ಎಚ್‌ಪಿಯಲ್ಲಿನ ಪ್ರಸಕ್ತ ಕಾರ್ಯಕ್ರಮದ ಶೀರ್ಷಿಕೆ ಕೂಡ ನಾವು ಮೂಲವಾಗಿ ಜಾನ್ ಹಾಪ್ಕಿನ್ಸ್ ಸ್ಕೂಲ್ ಆಫ್ ಹೈಜಿನ್ ಅಂಡ್ ಪಬ್ಲಿಕ್ ಹೆಲ್ತ್‌ನಲ್ಲಿ ಯೋಜಿಸಿದ ಚಿಕ್ಕ ಕಾರ್ಯಕ್ರಮದ ಶೀರ್ಷಿಕೆಯ ರೀತಿಯಲ್ಲೇ ಇದೆ. ಜಮ್ಖೇಡ್‌ನಲ್ಲಿ ವರ್ಷಾನುಗಟ್ಟಲೆ ವೈದ್ಯಕೀಯ ಸೇವೆ ಸಲ್ಲಿಸುತ್ತಾ ಕೆಲಸ ಮಾಡುವ ಮೂಲಕ ನಾವು

ಯಶಸ್ಸು ಗಳಿಸುವುದನ್ನು ಕಲಿತೆವು; ವೈಫಲ್ಯಗಳನ್ನು, ಬಿಕ್ಕಟ್ಟು ಪ್ರತಿಕೂಲ ಪರಿಸ್ಥಿತಿಗಳನ್ನು ಸುಧಾರಣೆ ಮಾಡುವ, ಸರಿತಿದ್ದಿಕೊಳ್ಳುವ ಅವಕಾಶಗಳನ್ನಾಗಿ ಪರಿವರ್ತಿಸುವುದನ್ನು ಕಲಿತೆವು. ಈ ಪ್ರಕ್ರಿಯೆಯಲ್ಲಿ ನಾವು ಕಲಿತ ಕೆಲವು ಗುಣಪಾಠಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇವೆ.

- ಬಡ ಮತ್ತು ಮೂಲೆಗೆ ತಳ್ಳಲ್ಪಟ್ಟ ಜನರ ಗ್ರಹಿಕೆಗಳು ಕುಲೀನ ಹಾಗೂ ಶಿಕ್ಷಿತ ವರ್ಗದ ಜನರ ಗ್ರಹಿಕೆಗಳಿಗಿಂತ ಭಿನ್ನವಾಗಿವೆ.
- ಬಹಳಷ್ಟು ಸಂದರ್ಭಗಳಲ್ಲಿ ಸಾಮಾಜಿಕ ಕ್ರಿಯೆ ಆರೋಗ್ಯವನ್ನು ಸುಧಾರಿಸುತ್ತದೆಯೇ ಹೊರತು ಕಠಿಣ ತಂತ್ರಜ್ಞಾನವಲ್ಲ.
- ಪ್ರಾಥಮಿಕ ಆರೋಗ್ಯ ಪಾಲನೆಯಲ್ಲಿ ಸಾಮಾಜಿಕ ವಿಜ್ಞಾನವನ್ನು ಸೇರಿಸಬೇಕಿರುವ ಅಗತ್ಯವನ್ನು ಒತ್ತಿ ಹೇಳಬೇಕು.
- ಆರೋಗ್ಯ ಶಿಕ್ಷಣವು ಸಂಪನ್ಮೂಲ ಮತ್ತು ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿರಬೇಕು.
- ಗ್ರಾಮೀಣ ಸಮುದಾಯಗಳು ತಮ್ಮ ತಮ್ಮ ಆರೋಗ್ಯವನ್ನು ಯೋಜಿಸಿಕೊಳ್ಳುವುದಕ್ಕೆ, ನಿರ್ವಹಿಸುವುದಕ್ಕೆ ಸಮರ್ಥವಾಗಿವೆ.
- ಔಷಧಿಗಳನ್ನು ಯಾವುದೇ ಗೊಂದಲಕ್ಕವಕಾಶ ಮಾಡಿಕೊಡದಂತೆ ವಿವರಿಸಬೇಕು ಹಾಗೂ ಜ್ಞಾನವನ್ನು ಜನರೊಂದಿಗೆ ಮುಕ್ತವಾಗಿ ಹಂಚಿಕೊಳ್ಳಬೇಕು; ಇದರಿಂದ ಜನರು ಉತ್ತಮ ಆರೋಗ್ಯವನ್ನು ಸಾಧಿಸುವುದಕ್ಕೆ ಹಾಗೂ ಅದನ್ನು ಕಾಪಾಡಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ.
- ಆರೋಗ್ಯ ತಂಡದ ಎಲ್ಲಾ ಹಂತಗಳಲ್ಲೂ ಆತ್ಮವಿಶ್ವಾಸವನ್ನು ಬಹಳಷ್ಟು ಉತ್ತೇಜಿಸಲೇಬೇಕು.
- ಸಮುದಾಯದ ಪಾಲ್ಗೊಳ್ಳುವಿಕೆ ಎಂದರೆ ಸಂಘರ್ಷ ಅಂತೇನೂ ಅಲ್ಲ.
- ಸಮುದಾಯ ಉತ್ಸಾಹದ ಪ್ರಯೋಜನ ಪಡೆದುಕೊಂಡರೆ ಅದು ನಮ್ಮನ್ನು ಪ್ರಗತಿಯತ್ತ ಕೊಂಡೊಯ್ಯುತ್ತದೆ.
- ಸಾಂಸ್ಕೃತಿಕವಾಗಿ ಎಲ್ಲರೂ ಒಪ್ಪಿಕೊಳ್ಳುವಂತಹ, ಬೇಕೆಂದಾಗ ಲಭ್ಯವಾಗುವಂತಹ ಹಾಗೂ ಸುಲಭವಾಗಿ ಎಲ್ಲರಿಗೂ ಸಿಗುವಂತಹ ತಳಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರನ್ನು ತರಬೇತುಗೊಳಿಸುವುದು ಅತೀ ಅವಶ್ಯವಾದುದು.
- ಯೋಜನೆಗಳು ಯಾವಾಗಲೂ ಪರಿಸ್ಥಿತಿಗೆ ಹೊಂದಿಕೊಳ್ಳುವಂತಿರಬೇಕು.
- ಗುಣಕಾರಕ, ಉತ್ತೇಜಕ ಹಾಗೂ ಪ್ರತಿಬಂಧಾತ್ಮಕ ಸೇವೆಗಳ ನಡುವೆ ಯಾವಾಗಲೂ ಒಂದು ಸಮತೋಲನ ಕಾಪಾಡಿಕೊಳ್ಳಬೇಕು.
- ಪ್ರಾಥಮಿಕ ಆರೋಗ್ಯ ಪಾಲನೆಗೆ ದ್ವಿತೀಯ ಹಾಗೂ ತೃತೀಯ ಆರೋಗ್ಯ ಪಾಲನೆಗಳ ಬೆಂಬಲವಿರಬೇಕು.
- ಸಮುದಾಯದ ಅಗತ್ಯ ಮತ್ತು ಸಂಪನ್ಮೂಲಗಳಿಗೆ ಹೊಂದಿಕೆಯಾಗುವಂತಹ ಸೂಕ್ತ ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸುವುದಕ್ಕೆ ವೈಜ್ಞಾನಿಕ ಜ್ಞಾನವನ್ನು ಅನ್ವಯಿಸಬೇಕು.
- ನಿಧಾನಗತಿಯ ಬೆಳವಣಿಗೆಯನ್ನು ಒಪ್ಪಿಕೊಳ್ಳಬೇಕು.
- ಪ್ರಾಥಮಿಕ ಆರೋಗ್ಯ ಪಾಲನೆಯ ಪರಿಕಲ್ಪನೆಯು ಬಹಳ ಚೈತನ್ಯಶೀಲವಾಗಿದ್ದು ಬಹು ವಿಸ್ತಾರವಾದ ಆರೋಗ್ಯ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ.

– ಡಾ. ರಜನಿಕಾಂತ್ ಅರೋಳೆ ಮತ್ತು
ದಿವಂಗತ ಡಾ. ಮಾಬೆಲ್ಲೆ ಅರೋಳೆ

ಸ್ಥೂಲ ವಿವರಗಳೊಂದಿಗೆ ಮೇಲಿನಿಂದ-ಕೆಳಕ್ಕೆ ಪ್ರಾರಂಭಿಸಲ್ಪಡುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಾದರಿಯು ಸೃಷ್ಟಿಸಿದ್ದ ಭ್ರಾಂತಿ ಕಳಚಿಬೀಳುವುದರೊಂದಿಗೆ ಜಮ್ಷೇಡ್ ಸಂಕೇತೀಕರಣಗೊಳಿಸಿದ ಹೊಸ ಮಾದರಿಯನ್ನು ಇಡೀ ದೇಶದಾದ್ಯಂತ ಪುನರಾವರ್ತಿಸುವ ಪ್ರಯತ್ನಗಳು ಎಲ್ಲೆಡೆ ಪ್ರಾರಂಭವಾದವು. ಇದಕ್ಕೂ ಮುಂಚೆಯೇ ಸ್ಥಾಪನೆಗೊಂಡಿದ್ದ 'ಆರೋಗ್ಯ ಯೋಜನೆಗಾಗಿನ ಸಮನ್ವಯಿತ ಸಂಸ್ಥೆ'ಯ (Coordinated Agency for Health Planning - CAHP) ಎಂಬ ಸಂಸ್ಥೆಯ ಅಡಿಪಾಯದ ಮೇಲೆ 1974ರಲ್ಲಿ

'ಭಾರತದ ಸ್ವಯಂ ಆರೋಗ್ಯ ಸಂಸ್ಥೆ'ಯನ್ನು (Voluntary Health Association of India - VHAI) ನವದೆಹಲಿಯಲ್ಲಿ ಪ್ರಾರಂಭಿಸಲಾಯಿತು. ದಿವಂಗತ ಫಾದರ್ ಜೇಮ್ಸ್ ಟಾಂಗ್, ರಜನಿಕಾಂತ್ ಅರೋಳೆ, ದಿವಂಗತ ಮಾಬೆಲ್ಲೆ ಅರೋಳೆ ಹಾಗೂ ಅದೇ ರೀತಿಯ ಇನ್ನಿತರ ಸಮಾನ ಮನಸ್ಕ ವೈದ್ಯರು ಸೇರಿಕೊಂಡು ತಮ್ಮಂತೆಯೇ ಇತರರೂ ಈ ರೀತಿಯ ಕೆಲಸ ಮಾಡುವಂತೆ ಹುರಿದುಂಬಿಸುವುದಕ್ಕಾಗಿ ಹಾಗೂ ಅದೇ ವೇಳೆಯಲ್ಲಿ ನಿರ್ಲಕ್ಷ್ಯಕ್ಕೊಳಗಾದ ಹಾಗೂ ಮೂಲೆಗುಂಪಾಗಿರುವ ಜನರ ತುರ್ತು ಆರೋಗ್ಯ ಅಗತ್ಯಗಳಿಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸುವಂತೆ ಸರ್ಕಾರವನ್ನು ಹಾಗೂ ಇನ್ನಿತರ ಸ್ವಯಂಸೇವಾ ಸಂಸ್ಥೆಗಳನ್ನು ಒತ್ತಾಯಿಸುವುದಕ್ಕಾಗಿ ಈ ಸಂಸ್ಥೆಯನ್ನು ಹುಟ್ಟು ಹಾಕಿದರು. 'ಭಾರತದ ಸ್ವಯಂ ಆರೋಗ್ಯ ಸಂಸ್ಥೆ'ಯ ಧ್ಯೇಯ ಹೇಳಿಕೆಯ ಭಾಗವಾಗಿದ್ದ ಅದರ ಪವಿತ್ರ ವಿಧೇಯ ವಾಕ್ಯವು ಬಹುತೇಕ ಆರಂಭಿಕ ವರ್ಷಗಳಲ್ಲಿ ಆಗತಾನೇ ಆವಿರ್ಭವಿಸುತ್ತಿದ್ದ 'ಸಮುದಾಯ ಆರೋಗ್ಯ ಚಳವಳಿ'ಗೆ ಒಂದು ರೀತಿಯಲ್ಲಿ ಮಹತ್ವಪೂರ್ಣ ಬೆಂಬಲವಾಗಿ ನಿಂತಿತು. *(ಈ ಪ್ಯಾರಾದ ಮೊದಲ ವಾಕ್ಯವು ಇಲ್ಲಿ ಪುನರಾವರ್ತನೆಯಾಗಿದೆ – ಅನು)*

'ಭಾರತದ ಸ್ವಯಂ ಆರೋಗ್ಯ ಸಂಸ್ಥೆ'

(Voluntary Health Association of India - VHAI)

ಆರೋಗ್ಯ ಪಾಲನೆಯ ಬಗ್ಗೆ ನಮಗಿರುವ ಹೊಸ ಮುನ್ನೋಟವೇನು? ಅದನ್ನು ಆಕರ್ಷಣೀಯವಾಗಿ, ಮನಮುಟ್ಟುವಂತೆ ಮಾಡುತ್ತಿರುವ ಅಂಶ ಯಾವುದು? ಈ ಕುರಿತಂತೆ ನಾವು ಹೇಳಬೇಕಾಗಿರುವುದೆಲ್ಲವೂ ಈ ಸರಳ ಮಾತುಗಳಲ್ಲಿ ಅಡಗಿದೆ: 'ಸಮುದಾಯ ಆರೋಗ್ಯ'. ನಾವು ಸಮುದಾಯದಿಂದಲೇ ಪ್ರಾರಂಭಿಸೋಣ. ಆರೋಗ್ಯಪೂರ್ಣ ಸಮುದಾಯವೇ ನಮ್ಮ ಧ್ಯೇಯ. ಸಮುದಾಯದ ಆರೋಗ್ಯವನ್ನು ಕಾಪಾಡುವುದೇ ನಮ್ಮ ಗುರಿ.

ಆರೋಗ್ಯ ಪಾಲನೆಯನ್ನು ಯೋಜಿಸುವಲ್ಲಿ, ಹಂಚುವಲ್ಲಿ ನಾವು ಸಾಮಾಜಿಕ ನ್ಯಾಯವನ್ನು ಉತ್ತೇಜಿಸುತ್ತೇವೆ. ಜನರು ತಮಗೋಸ್ಕರ ಏನೆಲ್ಲಾ ಮಾಡಿಕೊಳ್ಳಲು ಸಾಧ್ಯವಿದೆಯೋ ಅದನ್ನೆಲ್ಲಾ ಮಾಡುವುದಕ್ಕೆ ಅವರನ್ನು ಉತ್ತೇಜಿಸಿದಾಗ ಮಾತ್ರವೇ ಅವರು ಬಹಳ ಚೆನ್ನಾಗಿ ಅಭಿವೃದ್ಧಿಹೊಂದಬಲ್ಲರು ಎಂದು ನಾವು ನಂಬಿದ್ದೇವೆ. ಉತ್ತಮವಾದ ಆರೋಗ್ಯ ಸಿಗಬೇಕೆಂಬ ಬಯಕೆ ಭಾರತದ ಎಲ್ಲಾ ಜನರ ಪಾಲಿಗೂ ಖಂಡಿತವಾಗಿಯೂ ವಾಸ್ತವವಾಗಲಿದೆ ಎಂಬ ಆಶಯ ನಮಗಿದೆ.

ತೆರಿಗೆಗಳಿಂದ ಸಂಗ್ರಹಿಸಿದ ಹಣದಲ್ಲಿ ಆರೋಗ್ಯದ ಮೇಲೆ ಖರ್ಚು ಮಾಡುವುದಕ್ಕಾಗಿ ಮೀಸಲಿಟ್ಟ ಭಾಗ ಎಲ್ಲಾ ಜನರಿಗೂ ಸರಿಸಮನಾಗಿ ಹಂಚಿಕೆಯಾಗುವಂತೆ ನೋಡಿಕೊಳ್ಳಬೇಕೆಂಬುದು ನಮ್ಮ ವಾದ. ಜನರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸುವುದು ಪ್ರಧಾನವಾಗಿ ಸರ್ಕಾರದ ಕರ್ತವ್ಯ.

ಉತ್ತಮ ಆರೋಗ್ಯದ ಮೌಲ್ಯವನ್ನು ಜನರು ಅರ್ಥಮಾಡಿಕೊಳ್ಳಲು ಸಹಕರಿಸುವುದಕ್ಕೆ 'ಸ್ವಯಂ ಇಚ್ಛೆಯಿಂದ ಕಾರ್ಯನಿರ್ವಹಿಸುವವರು' ಎಂದು ಪರಿಗಣಿಸಲ್ಪಟ್ಟಿರುವ ವ್ಯಕ್ತಿಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸಾಕಷ್ಟು ಅವಕಾಶಗಳಿವೆ.

ಜನರು ಆರೋಗ್ಯ ಸೇವೆಗಳನ್ನು ಬಯಸುವಂತೆ ಮಾಡುವುದಕ್ಕೆ ನಾವು ಸಹಕರಿಸುತ್ತೇವೆ. ಜನರು ಆರೋಗ್ಯ ಸೇವೆಗಳನ್ನು ಒಂದು ಮಾನವ ಹಕ್ಕಾಗಿ ಪರಿಗಣಿಸಿ ಅವು ತಮಗೆ ದೊರಕಬೇಕೆಂಬ ಹಕ್ಕೊತ್ತಾಯ ಮಾಡುವಂತೆ ಅವರನ್ನು ಉತ್ತೇಜಿಸುವುದು ನಮ್ಮ ಪಾಲಿಗೆ ಒಳ್ಳೆಯದೆ.

ನಾವು ಮಾತನಾಡುವ ಆರೋಗ್ಯ ಸೇವೆಗಳು ಪ್ರಮುಖವಾಗಿ ಮೂಲಭೂತವಾಗಿರುವಂತಹುಗಳು ಅಥವಾ ಪ್ರಾಥಮಿಕ ಹಂತದಲ್ಲಿರುವಂತಹುಗಳು. ಅವು ಸರ್ವೇಸಾಮಾನ್ಯವಾಗಿ ಜನಸಂಖ್ಯೆಯ ಅತಿದೊಡ್ಡ ಭಾಗದ ಅಗತ್ಯಗಳನ್ನು ಪೂರೈಸುತ್ತವೆ.

ಕೆಳಹಂತದ ಆರೋಗ್ಯ ಪಾಲಕರು ರೋಗಿಗಳನ್ನು ಅಗತ್ಯ ಚಿಕಿತ್ಸೆಗಾಗಿ ಉನ್ನತ ಹಂತದ ತಜ್ಞ ವೈದ್ಯರ ಬಳಿ ಕಳಿಸುವ ವ್ಯವಸ್ಥೆಯಲ್ಲಿ ನಮಗೆ ನಂಬಿಕೆಯಿದೆ. ಈ ಪಿರಮಿಡ್ ರಚನೆಯಲ್ಲಿ ಪ್ರಾಥಮಿಕ ಆರೋಗ್ಯ ಪಾಲನೆಯೇ ಬುನಾದಿಯಾಗಿರುತ್ತದೆ. ಇದು ಬಹಳ ಮುಖ್ಯವಾದದ್ದು. ಆದರೆ ಅದು ಆಸ್ಪತ್ರೆಗಳೆಡೆಗೆ, ವೈದ್ಯಕೀಯ ಶಿಕ್ಷಣದ ಕಡೆಗೆ ಮೇಲೇಳುತ್ತದೆ.

ಸಂಶೋಧನೆ, ಉನ್ನತ ಜ್ಞಾನ ಮತ್ತು ಮುಂದುವರಿದ ಆರೋಗ್ಯ ವಿಜ್ಞಾನಗಳಲ್ಲೂ ನಮಗೆ ನಂಬಿಕೆಯಿದೆ.

ಆದರೆ, ನಮ್ಮ ಮೊದಲ ನಂಬಿಕೆಯಿರುವುದು ಸಮಾನ ಹಂಚಿಕೆಯಲ್ಲಿ. ಆರೋಗ್ಯ ಸೇವೆಗಳು ಕಡುಬಡವರಿಗೆ ಮತ್ತು ನಿರ್ಲಕ್ಷ್ಯಕ್ಕೊಳಗಾದವರಿಗೆ ತಲುಪಬೇಕೆಂಬುದೇ ನಮ್ಮ ಮೊದಲ ಪ್ರಾಶಸ್ತ್ಯ. ಆರೋಗ್ಯ ಸೇವೆಗಳ ಅಪಾರ ಅವಶ್ಯಕತೆಯಿರುವುದು ಅವರಿಗೇನೆ. ಬಹಳ ಸರಳ ಆರೋಗ್ಯ ಪಾಲನೆಯನ್ನು ಎಲ್ಲರಿಗೂ ಹೇಗೆ ಒದಗಿಸಬೇಕೆಂಬುದರ ಬಗ್ಗೆ ಈಗಾಗಲೇ ನಮಗೆ ಸಾಕಷ್ಟು ಗೊತ್ತಿದೆ. ಬಡವನಿಗೆ ಉತ್ತಮ ಆರೋಗ್ಯ ಸಿಗುತ್ತಿಲ್ಲ ಎಂದರೆ ಅದರರ್ಥ ನಮಗೆ ಅದರ ಬಗ್ಗೆ ಸಾಕಷ್ಟು ಜ್ಞಾನವಿಲ್ಲ ಎಂದೇನಲ್ಲ. ಬದಲಿಗೆ, ಭಾರತದ ಸಂಘಟಿತ ಜನರಾಗಿರುವ ನಾವು ಬಡಜನರಿಗೆ ಉತ್ತಮ ಆರೋಗ್ಯ ಸಿಗುವಂಥ ವ್ಯವಸ್ಥೆಯನ್ನು ಸಾಧಿಸುವುದಕ್ಕೆ ಅವಶ್ಯವಿರುವ ದೃಢವಾದ ಆತ್ಮಯಿಚ್ಛೆ ಹೊಂದಿಲ್ಲ ಎಂದರ್ಥ. ನಮ್ಮ ಹಳೆಯ ಆರೋಗ್ಯ ಸೇವಾ ವ್ಯವಸ್ಥೆಯನ್ನು ಸುಶೀಕ್ಷಿತ, ಕುಲೀನ ಹಾಗೂ ಪ್ರಬಲ ಜನರಿಗೆ ಅನುಕೂಲವಾಗುಂತೆ ನಿರ್ಮಿಸಲಾಗಿದೆ.

ನಮ್ಮ ಹೊಸ ದೃಷ್ಟಿಕೋನವೇನೆಂದರೆ ಸಮುದಾಯ ಮತ್ತು ಸಮುದಾಯದ ಆರೋಗ್ಯ. ಎಲ್ಲಾ ಸರಕುಗಳು ಮತ್ತು ಸೇವೆಗಳು ಇಡೀ ಸಮುದಾಯದ ಎಲ್ಲರಿಗೂ ಸರಿಸಮಾನವಾಗಿ ಹಂಚಿಕೆಯಾಗಬೇಕೆಂದು ನಾವು ಬಯಸುತ್ತೇವೆ.

1970ರ ಆರಂಭದ ಸುಮಾರಿಗೆ ದಿವಂಗತ ಜಯಪ್ರಕಾಶ್ ನಾರಾಯಣ್‌ರವರ ಸ್ಫೂರ್ತಿ ಹಾಗೂ ಪ್ರೋತ್ಸಾಹದೊಂದಿಗೆ ಕೆಲವು ವೈದ್ಯರು ಹಾಗೂ ವೈದ್ಯಕೀಯತೇತರ ವೃತ್ತಿಯಲ್ಲಿರುವ ಅವರ ಸ್ನೇಹಿತರು ಸೇರಿಕೊಂಡು ಒಂದು ಚಿಕ್ಕ ತಂಡವಾಗಿ 'ವೈದ್ಯಕೀಯ ಸ್ನೇಹಿತರ ಬಳಗ'ವನ್ನು (Medico Friend Circle – MFC) ಸ್ಥಾಪಿಸಿದರು; ತದನಂತರದ ದಿನಗಳಲ್ಲಿ ನಿಧಾನವಾಗಿ ಇದು ಪ್ರಸ್ತುತವಾಗಿ ಅಸ್ತಿತ್ವದಲ್ಲಿರುವ ವೈದ್ಯಕೀಯ ಶಿಕ್ಷಣ ಹಾಗೂ ಜನರಿಗೆ, ಅದರಲ್ಲೂ ವಿಶೇಷವಾಗಿ ಬಡ ಮತ್ತು ಮೂಲೆಗೆ ತಳ್ಳಲ್ಪಟ್ಟ ವಂಚಿತ ಸಮುದಾಯಗಳಿಗೆ ಒದಗಿಸಲಾಗುತ್ತಿರುವ ಆರೋಗ್ಯ ಪಾಲನೆಯ ಸ್ವರೂಪಗಳ ಅಪ್ರಸ್ತುತತೆಯ ಬಗ್ಗೆ ಅಪಾರ ಕಾಳಜಿಯುಳ್ಳ ವೈದ್ಯರ ಮತ್ತು ಆರೋಗ್ಯ ಕಾರ್ಯಕರ್ತರ ಒಂದು ರಾಷ್ಟ್ರೀಯ ಜಾಲವಾಗಿ ಬೆಳೆಯಿತು. 'ವೈದ್ಯಕೀಯ ಸ್ನೇಹಿತರ ಬಳಗ'ವು ತನ್ನ ವಾರ್ಷಿಕ ಸಭೆಗಳ ಮೂಲಕ, ಗ್ರಾಮೀಣ ಶಿಬಿರಗಳ ಮೂಲಕ, ಪುಸ್ತಿಕೆಗಳ ಮೂಲಕ, ಸಾಹಿತ್ಯ ಪ್ರಕಟಣೆಯ ಮೂಲಕ ಒಂದು ಚಿಂತನಾ ಹರಿವಾಗಿ ಮಾರ್ಪಟ್ಟಿತು; ಈ ಚಿಂತನಾ ಹರಿವು ಆರೋಗ್ಯ ಪಾಲನೆಯಲ್ಲಿ ಮಾನವೀಯ ಮತ್ತು ಹಾಗೂ ನಾಗರಿಕ ಮೌಲ್ಯಗಳನ್ನು ಎತ್ತಿಹಿಡಿಯಿತಲ್ಲದೇ 'ಸಮುದಾಯ ಆರೋಗ್ಯ' ಪರ್ಯಾಯಗಳ ಕರಿತಂತೆ ಹಾಗೂ ಪ್ರಸ್ತುತ ಆರೋಗ್ಯ ಪಾಲನೆ ಹಾಗೂ ವೈದ್ಯಕೀಯ ಶಿಕ್ಷಣ ವ್ಯವಸ್ಥೆಗೆ ಹೊಸ ದಿಗ್ದರ್ಶನ ನೀಡುವುದಕ್ಕಿರುವ ಮಾರ್ಗೋಪಾಯಗಳ ಕುರಿತಂತೆ ನಿರಂತರವಾಗಿ ಚರ್ಚೆ, ವಾಗ್ವಾದಗಳನ್ನು ನಡೆಸುತ್ತಲೇ ಬಂದಿತು. ಅದು ಪ್ರಕಟಿಸಿದ 1. ರೋಗಪತ್ತೆಯ ಹುಡುಕಾಟದಲ್ಲಿ (In Search of a Diagnosis), 2. ಆರೋಗ್ಯ ಪಾಲನೆ – ಅನುಸರಿಸಬೇಕಿರುವ ಮಾರ್ಗ ಯಾವುದು? (Health Care: Which Way to Go?), ೩. ಮಸೂರದ ಕೆಳಗೆ – ಆರೋಗ್ಯ ಮತ್ತು ಔಷಧಿ (Under the Lens – Health and Medicine), ಹಾಗೂ ವೈದ್ಯಕೀಯ ಶಿಕ್ಷಣದ ಮರುಪರೀಕ್ಷೆ (Medical Education Re-examined) ಎಂಬ ನಾಲ್ಕು ಆರೋಗ್ಯ ಸಂಬಂಧಿ ಕೃತಿಗಳು ದೇಶದಲ್ಲಿನ 'ಸಮುದಾಯ ಆರೋಗ್ಯ'ದ ಗತಿತರ್ಕದ ಬಗ್ಗೆ 'ವೈದ್ಯಕೀಯ ಸ್ನೇಹಿತರ ಬಳಗ'ದ ಸದಸ್ಯರ ಹೆಚ್ಚುತ್ತಿರುವ ಅಪಾರ ಕಾಳಜಿಗಳನ್ನು ಒಂದು ಕ್ರಮಗತಿಯಲ್ಲಿ ಕಟ್ಟಿಕೊಡುತ್ತವೆ. ಈ ಕಾಳಜಿಗಳನ್ನು ಹಾಗೂ ಈ ದೃಷ್ಟಿಕೋನಗಳನ್ನು ಹೊಂದಿರುವ ಸಮುದಾಯ ಆರೋಗ್ಯ ಕಾರ್ಯಾನುಷ್ಠಾನಕರಿಗೆ ಇರಬೇಕಾದ ಧೋರಣೆಗಳನ್ನು ಬಹಳ ಕೌಶಲ್ಯದಿಂದ ಆಸಕ್ತಿದಾಯಕವಾಗಿ ಹೆಣೆಯುವ ಮೂಲಕ 1970ರ ದಶಕದ ಕೊನೆಯ ಭಾಗದಲ್ಲಿ 'ವೈದ್ಯಕೀಯ ಸ್ನೇಹಿತರ ಬಳಗ' ಪ್ರಣಾಳಿಕೆಯು ವಿಕಾಸಗೊಂಡಿತು.

ವೈದ್ಯಕೀಯ ಸ್ನೇಹಿತರ ಬಳಗ (1975)
(Medico Friend Circle - MFC)

"ದೃಷ್ಟಿಕೋನ

'ವೈದ್ಯಕೀಯ ಸ್ನೇಹಿತರ ಬಳಗ'ವು ನಮ್ಮ ಜನರ ಆರೋಗ್ಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಆಸಕ್ತಿ ಹೊಂದಿರುವ, ಸಾಮಾಜಿಕವಾಗಿ ಪ್ರಜ್ಞಾವಂತರಾಗಿರುವ ವ್ಯಕ್ತಿಗಳ ಒಂದು ಗುಂಪು. ಅತ್ಯಂತ ವೈದ್ಯಕೀಕರಣಗೊಂಡಿರುವ ಪ್ರಸ್ತುತ ಆರೋಗ್ಯ ಪಾಲನಾ ವ್ಯವಸ್ಥೆಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದಕ್ಕೆ ಹಾಗೂ ಮಾನವೀಯವಾದದ ಮತ್ತು ನಮ್ಮ ದೇಶದ ವಿಶಾಲ ಜನಸಮೂಹದ ಆರೋಗ್ಯ ಅಗತ್ಯಗಳನ್ನು ಪೂರೈಸುವುದಕ್ಕೆ ಸಮರ್ಥವಾದ ಒಂದು ಆರೋಗ್ಯ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಅವಶ್ಯವಿರುವ ಸೂಕ್ತವಾದ ಕಾರ್ಯಧೋರಣೆಯನ್ನು ವಿಕಾಸಗೊಳಿಸುವುದಕ್ಕೆ ಎಂಎಫ್‌ಸಿಯು ಪ್ರಯತ್ನಿಸುತ್ತಿದೆ. ಈ ತತ್ವಕ್ಕೆ ಬದ್ಧವಾಗಿರುವ ಒಂದು ದೇಶವ್ಯಾಪಿ ಚಿಂತನಾಪ್ರವಾಹವನ್ನು ನಿರ್ಮಿಸುವುದಕ್ಕೆ 'ವೈದ್ಯಕೀಯ ಸ್ನೇಹಿತರ ಬಳಗ'ವು ಪ್ರಯತ್ನಿಸುತ್ತಿದೆ.

'ವೈದ್ಯಕೀಯ ಸ್ನೇಹಿತರ ಬಳಗ'ವು ಜನರ ಹಿತಾಸಕ್ತಿಗಳನ್ನು ಎತ್ತಿಹಿಡಿಯುತ್ತದೆ ಹಾಗೂ

- ವ್ಯಕ್ತಿಯೊಬ್ಬನಿಗೆ/ಳಿಗೆ ಹಣಕೊಡುವ ಸಾಮರ್ಥ್ಯವಿದೆಯೋ ಇಲ್ಲವೋ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳದೇ ವೈದ್ಯಕೀಯ ಹಾಗೂ ಆರೋಗ್ಯ ಪಾಲನೆಯು ಎಲ್ಲರಿಗೂ ಸಿಗಬೇಕು ಎಂಬುದನ್ನು ಪ್ರತಿಪಾದಿಸುತ್ತದೆ.
- ನಮ್ಮ ಜನರ ಅಗತ್ಯಗಳಿಂದ ಪ್ರೇರಿತವಾದ ಹಾಗೂ ಯಾವುದೇ ಕಾರಣಕ್ಕೂ ವಾಣಿಜ್ಯ ಹಿತಾಸಕ್ತಿಗಳಿಂದ ಪ್ರೇರಿತವಾಗಿರದ ಆರೋಗ್ಯ ಪಾಲನಾ ವ್ಯವಸ್ಥೆಯನ್ನು ಹಾಗೂ ವೈದ್ಯಕೀಯ ಹಸ್ತಕ್ಷೇಪ ವಿಧಾನಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಬಯಸುತ್ತದೆ.

'ವೈದ್ಯಕೀಯ ಸ್ನೇಹಿತರ ಬಳಗ'ವು ಈ ಕೆಳಕಂಡ ಅಂಶ ಸಾಧನೆಗಾಗಿ ಕಾರ್ಯನಿರ್ವಹಿಸುತ್ತದೆ:

- ನಮ್ಮ ದೇಶದ ಗ್ರಾಮೀಣ ಆರೋಗ್ಯ ಸ್ವಭಾವವವನ್ನೇ ಪ್ರಧಾನವಾಗಿ ಗುರಿಯಾಗಿಸಿಕೊಂಡಿರುವ ಸೂಕ್ತ ವೈದ್ಯಕೀಯ ಮತ್ತು ಆರೋಗ್ಯ ಪಾಲನೆಯ ಮಾದರಿಯೊಂದನ್ನು ಅಭಿವೃದ್ಧಿಪಡಿಸುವುದು.
- ನಮ್ಮ ದೇಶದ ವಿಶಾಲ ಜನಸಮೂಹದ ಅಗತ್ಯಗಳಿಗನುಗುಣವಾಗಿ ಹೆಣೆಯಲ್ಪಟ್ಟ ವೈದ್ಯಕೀಯ ಪಠ್ಯಕ್ರಮ ಮತ್ತು ತರಬೇತಿ ಮಾದರಿಗಳನ್ನು ಅಭಿವೃದ್ಧಿಪಡಿಸುವುದು.

'ವೈದ್ಯಕೀಯ ಸ್ನೇಹಿತರ ಬಳಗ'ವು

- ವೈದ್ಯಕೀಯ ವಿಜ್ಞಾನವನ್ನು ಜನಪ್ರಿಯಗೊಳಿಸುವುದಕ್ಕಾಗಿ, ಅದನ್ನು ಗೊಂದಲಕ್ಕೆಡೆಯಿಲ್ಲದಂತೆ ಸ್ಪಷ್ಟವಾಗಿ ಅರ್ಥವಾಗುವಂತೆ ಮಾಡುವುದಕ್ಕಾಗಿ ಕಟಿಬದ್ಧವಾಗಿದೆ.
- ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುವ ವೈದ್ಯಕೀಯ ವೃತ್ತಿಪರರನ್ನು ಪ್ರಜಾತಾಂತ್ರಿಕವಾಗಿ ಕಾರ್ಯನಿರ್ವಹಿಸುತ್ತಿರುವ ಒಂದು ತಂಡದ ಸಮಾನ ಸದಸ್ಯರೆಂಬುದಾಗಿ ಪರಿಗಣಿಸಬೇಕು ಎಂದು ಅದು ನಂಬುತ್ತದೆ.

'ವೈದ್ಯಕೀಯ ಸ್ನೇಹಿತರ ಬಳಗ'ವು

- ಸಾಮಾಜಿಕ ಮಟ್ಟದಲ್ಲಿ ಆರೋಗ್ಯ ಸಮಸ್ಯೆಗಳನ್ನು ಪರಿಹರಿಸುವುವಲ್ಲಿ ಪ್ರತಿಬಂಧಾತ್ಮಕ ಹಾಗೂ ಸಾಮಾಜಿಕ ಕ್ರಮಗಳಿಗಿರುವ ಮಹತ್ವಪೂರ್ಣ ಪಾತ್ರವನ್ನು ಒತ್ತಿಹೇಳುತ್ತದೆ.

'ವೈದ್ಯಕೀಯ ಸ್ನೇಹಿತರ ಬಳಗ'ವು

- ಪ್ರಜಾತಾಂತ್ರಿಕವಾದ, ವಿಕೇಂದ್ರೀಕೃತವಾದ ತಂಡ-ಕಾರ್ಯನಿರ್ವಹಣೆಯನ್ನು ಹಾಗೂ
- ಪ್ರತಿಬಂಧಾತ್ಮಕ ಮತ್ತು ಉತ್ತೇಜನಾತ್ಮಕ ಕ್ರಮಗಳನ್ನು ಯೋಜಿಸುವಲ್ಲಿ ಹಾಗೂ ಅವುಗಳನ್ನು ಕಾರ್ಯಾನುಷ್ಠಾನಗೊಳಿಸುವಲ್ಲಿ ಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆಯ ಮಹತ್ವವನ್ನು ಎತ್ತಿಹಿಡಿಯುತ್ತದೆ.

'ವೈದ್ಯಕೀಯ ಸ್ನೇಹಿತರ ಬಳಗ'ವು

- ಮಾನವೀಯ ಮೌಲ್ಯಗಳ, ಮಾನವ ಅಗತ್ಯಗಳ ಬಗೆಗಿನ ಕಾಳಜಿಗಳ, ಸಮಾನತೆ ಮತ್ತು ಪ್ರಜಾತಾಂತ್ರಿಕ ಕಾರ್ಯನಿರ್ವಹಣೆಗಳ ಅಡಿಪಾಯದ ಮೇಲೆ ನಿಂತ ವೈದ್ಯಕೀಯ ವ್ಯವಸ್ಥೆಯೊಂದನ್ನು ಜಾರಿಗೆ ತರುವುದಕ್ಕಾಗಿ ಕಾರ್ಯನಿರ್ವಹಿಸುತ್ತದೆ.

ಈ ರೀತಿಯಲ್ಲಿ 'ವೈದ್ಯಕೀಯ ಸ್ನೇಹಿತರ ಬಳಗ'ವು ವೈದ್ಯಕೀಯ ವೃತ್ತಿಪರರಲ್ಲಿ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವಂಥ ಒಂದು ಚಿಂತನಾ–ಪ್ರವಾಹವನ್ನು ಹರಿಸುವುದಕ್ಕೆ ಹಾಗೂ ಆಧುನಿಕ ವೈಜ್ಞಾನಿಕ ಔಷಧಜ್ಞಾನ ಸೃಷ್ಟಿಸಿದ ಅಂತಃಸಾಮರ್ಥ್ಯವನ್ನು ಬಳಸಿಕೊಳ್ಳುವುದಕ್ಕೆ ಶಕ್ತವಾಗುವ ಹಾಗೆ ಇಡೀ ವೈದ್ಯಕೀಯ ವೃತ್ತಿಯನ್ನೇ ಪುನರ್‌ರೂಪಿಸುವ ಗುರಿ ಸಾಧಿಸುವುದಕ್ಕೆ ಪ್ರಯತ್ನಿಸುತ್ತದೆ."

ಇದೇ ಅವಧಿಯಲ್ಲಿ ಪರಿಸ್ಥಿತಿಯನ್ನು ಕೂಲಂಕಶವಾಗಿ ಅಧ್ಯಯನ ನಡೆಸಿ ಶಿಫಾರಸ್ಸುಗಳನ್ನು ಸೂಚಿಸುವುಕ್ಕಾಗಿ ಭಾರತ ಸರ್ಕಾರವು ತಜ್ಞರ ಸಮಿತಿಯೊಂದನ್ನು ರೂಪಿಸಿತು. ಈ ಸಮಿತಿಯು ಅಸ್ತಿತ್ವಕ್ಕೆ ಬಂದಿದ್ದು 1972ರಲ್ಲಿ, ನಮ್ಮ ದೇಶವು ಸ್ವಾತಂತ್ರ್ಯದ ರಜತ ಮಹೋತ್ಸವ ಆಚರಿಸಿದ ತಕ್ಷಣವೇ. 'ಪ್ರಾಥಮಿಕ ಆರೋಗ್ಯ ಕೇಂದ್ರ' ಪರಿಕಲ್ಪನೆಯನ್ನು ಅಭಿವೃದ್ಧಿಗೊಳಿಸುವಲ್ಲಿ ಆಗಲೇ ಇಪ್ಪತ್ತೈದು ವರ್ಷಗಳು ಕಳೆದುಹೋಗಿದ್ದವು. ಈ ಅವಧಿಯಲ್ಲಿ ಕೆಲವು ಸಾಧನೆಗಳನ್ನು ಮಾಡಲಾಗಿತ್ತು – ನಿರೀಕ್ಷಿತ ಬಾಳ್ವಕೆಯ ಅವಧಿಯನ್ನು ದ್ವಿಗುಣಗೊಳಿಸಲಾಗಿತ್ತು; ಸಿಡುಬು ರೋಗವನ್ನು ನಿರ್ಮೂಲನೆ ಮಾಡಲಾಗಿತ್ತು; ಪ್ಲೇಗ್, ಕಾಲರಾ ಮತ್ತು ಮಲೇರಿಯ ರೋಗಗಳನ್ನು ನಿಯಂತ್ರಿಸಲಾಗಿತ್ತು; ಎಂಸಿಹೆಚ್ ಮತ್ತು ರೋಗನಿರೋಧಕ ಪ್ರತಿರಕ್ಷಣಾ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿತ್ತು; ವಿಶ್ವದಲ್ಲೇ ಅತ್ಯಂತ ಬೃಹತ್ತಾದ ಕುಟುಂಬ ಯೋಜನೆಯ ಕಾರ್ಯಕ್ರಮವನ್ನು ಶುರುಮಾಡಲಾಗಿತ್ತು. ಆದರೆ, ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿದ್ದ ವೈಫಲ್ಯಗಳು ಆರೋಗ್ಯ ವ್ಯವಸ್ಥೆಯನ್ನು ಹಾಳುಗೆಡವಿದ್ದವು. ಆರೋಗ್ಯವನ್ನು ಅಭಿವೃದ್ಧಿಯೊಂದಿಗೆ ಮಿಳಿತಗೊಳಿಸಿರಲಿಲ್ಲ; ಅಪೌಷ್ಟಿಕತೆಯ ಬಗ್ಗೆ ಮತ್ತು ಪರಿಸರಾತ್ಮಕ ಶೌಚದ ಬಗ್ಗೆ ಗಮನವನ್ನೇ ಹರಿಸಿರಲಿಲ್ಲ; ಆರೋಗ್ಯ ಶಿಕ್ಷಣವನ್ನು ನಿರ್ಲಕ್ಷಿಸಲಾಗಿತ್ತು; ಶಿಶು ಮರಣ ಪ್ರಮಾಣ ಹಾಗೂ ಹೆರಿಗೆ ಮರಣ ಪ್ರಮಾಣಗಳು ಇನ್ನೂ ಒಪ್ಪಲಾಗದಂತೆ ಏರುಗತಿಯಲ್ಲಿದ್ದವು. ಈ ಸಂದರ್ಭದಲ್ಲಿ ಶ್ರೀವಾತ್ಸವ ವರದಿಯು ಒಂದು ರೀತಿಯಲ್ಲಿ ವಿಶ್ಲೇಷಣಾತ್ಮಕ ಹಾಗೂ ಮುಕ್ತ ಆತ್ಮಾವಲೋಕನದ ಸ್ಫೂರ್ತಿಯಿಂದ ಇಡೀ ವ್ಯವಸ್ಥೆಯ ಬಗ್ಗೆ ತೀಕ್ಷ್ಣವಾದ ವಿಮರ್ಶೆಯನ್ನು ಮಾಡಿತು.

ಶ್ರೀವಾತ್ಸವ ವರದಿ – 1974: ಒಂದು ಗಂಭೀರ ವಿಮರ್ಶೆ

"ನಮ್ಮ ಜನಸಂಖ್ಯೆಯ ಬಹುಪಾಲು ಜನ ಇನ್ನೂ ಬಡತನ ರೇಖೆಯಿಂದ ಕೆಳಗೆ ಬದುಕುತ್ತಿರುವ ಈ ಸಾಮಾಜಿಕಾರ್ಥಿಕ ಸಂರಚನೆಯಿರುವ ಸನ್ನಿವೇಶದಲ್ಲಿ ಸಮರ್ಥ ಮತ್ತು ಪರಿಣಾಮಕಾರಿ ಆರೋಗ್ಯ ಸೇವೆಗಳನ್ನು ಒದಗಿಸಬಲ್ಲ ಒಂದು ಸಾರ್ವತ್ರಿಕ ಮತ್ತು ಸಮಾನತಾವಾದಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು ಸಾಧ್ಯವಿಲ್ಲ. ಎಲ್ಲಿಯ ತನಕ ಇಂಥ ತೀಕ್ಷ್ಣ ಬಡತನವು ಅಸ್ತಿತ್ವದಲ್ಲಿರುತ್ತದೆಯೋ ಅಲ್ಲಿಯ ತನಕ ಜನರಲ್ಲಿನ ಗುಣಕಾರಿ ಶಕ್ತಿಗಳು ಸಂಪೂರ್ಣವಾಗಿ ಹೊರಹರಿಯುವುದಿಲ್ಲ; ಶಿಕ್ಷಣ ಮತ್ತು ಆರೋಗ್ಯಗಳಂಥ ಕನಿಷ್ಠ ರಾಷ್ಟ್ರೀಯ ಕಾರ್ಯಕ್ರಮಗಳಿಗೂ ಹಣ ಒದಗಿಸುವುದಕ್ಕೆ ಪ್ರಭುತ್ವದ ಹತ್ತಿರ ಎಂದೂ ಸಮರ್ಪಕವಾದ ಸಂಪನ್ಮೂಲಗಳಿರುವುದಿಲ್ಲ; ಹಾಗೂ ಈ ಸೇವೆಗಳಲ್ಲಿ ತೊಡಗಿಸಲಾದ ತೀರ ಅತ್ಯಲ್ಪ ಹಣವೂ ಕೂಡ ಜನಸಮೂಹಗಳನ್ನು ತಲುಪುವುದಕ್ಕೆ ವಿಫಲವಾಗುತ್ತದೆ. ಆದ್ದರಿಂದ, ಸಾಮೂಹಿಕ ಬಡತನದ ಮೇಲೆ ನೇರವಾದ, ಬಹುಕಾಲ ಉಳಿಯಬಲ್ಲ ಹಾಗೂ ಕಸುವಿನಿಂದ ಕೂಡಿದ ಚೈತನ್ಯಪೂರ್ಣ ದಾಳಿ ಮಾಡುವುದನ್ನು ಬಿಟ್ಟು ಹಾಗೂ ಇನ್ನಷ್ಟು ಸರಿಸಮಾನವಾದ ಸಮಾಜವೊಂದನ್ನು ನಿರ್ಮಿಸುವುದನ್ನು ಬಿಟ್ಟು ಬೇರೆ ಪರ್ಯಾಯ ದಾರಿಯಿಲ್ಲ. ಈ ಪ್ರಧಾನ ರಾಷ್ಟ್ರೀಯ ಪ್ರಯತ್ನಕ್ಕೆ ಪೂರಕವಾಗಿರುವ ಹಾಗೆ 'ಆರೋಗ್ಯ ಸೇವೆಗಳ ರಾಷ್ಟ್ರವ್ಯಾಪಿ ಕಾರ್ಯಕ್ರಮ'ವೊಂದನ್ನು ಅಭಿವೃದ್ಧಿಪಡಿಸಬೇಕು; ಅಂತೆಯೇ ಈ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಆ ಪ್ರಧಾನ ರಾಷ್ಟ್ರೀಯ ಪ್ರಯತ್ನವೂ ಬೆಂಬಲವಾಗಿ ನಿಲ್ಲಬೇಕು."

ಔದ್ಯೋಗಿಕವಾಗಿ ಹೆಚ್ಚು ಮುಂದುವರಿದ ಹಾಗೂ ಗ್ರಾಹಕರನ್ನೇ ಗುರಿಯಾಗಿಸಿಕೊಂಡ ಪಾಶ್ಚಾತ್ಯ ಸಮಾಜಗಳಲ್ಲಿ ಇರುವ ಆರೋಗ್ಯ ಸೇವೆಗಳ ಮಾದರಿಯನ್ನೇ ನಾವೂ ಕೂಡ ಅಳವಡಿಸಿಕೊಂಡಿದ್ದೇವೆ; ಅವಿಮರ್ಶಾತ್ಮಕವಾಗಿ ಅನ್ನುವುದಕ್ಕಿಂತ, ಸುಮ್ಮನೇ ಮೌನವಾಗಿಯೇ ಆ ಮಾದರಿಯನ್ನು ಅಳವಡಿಸಿಕೊಂಡುಬಿಟ್ಟಿದ್ದೇವೆ. ಇದಕ್ಕೆ ತನ್ನದೇ ಆದ ಕುತರ್ಕ, ಭ್ರಾಂತಿಗಳಿವೆ; ನಿರ್ದಿಷ್ಟ ಸರಕು ಮತ್ತು ಸೇವೆಗಳ ಅನುಭೋಗದ ದೃಷ್ಟಿಯಿಂದ ಆರೋಗ್ಯವನ್ನು ತಪ್ಪಾಗಿ ವ್ಯಾಖ್ಯಾನಿಸಲಾಗುತ್ತದೆ; ಸಾರಾಂಶದಲ್ಲಿ ಜೀವನದ ಗುಣಮಟ್ಟವನ್ನು ನಿರ್ಧರಿಸುವ ಮೂಲಭೂತ ಜೀವನ ಮೌಲ್ಯಗಳು ತಿರುಚಲ್ಪಡುತ್ತವೆ; ಅಗತ್ಯಕ್ಕಿಂತ ಹೆಚ್ಚು ಕಟ್ಟುನಿಟ್ಟಿನ ವೃತ್ತಿಧೋರಣೆಯು ಖರ್ಚನ್ನು ಹೆಚ್ಚು ಮಾಡುತ್ತದೆ ಹಾಗೂ

ವ್ಯಕ್ತಿಯೊಬ್ಬನ ಸ್ವಾಯತ್ತತೆಯನ್ನು ಕಡಿಮೆ ಮಾಡುತ್ತದೆ; ಮಾತ್ರವಲ್ಲ ಜನರ ಆರೋಗ್ಯ ಮತ್ತು ಆನಂದದ ಮೇಲೂ ದುಷ್ಪರಿಣಾಮ ಬೀರುತ್ತದೆ. ವ್ಯವಸ್ಥೆಯ ಈ ದೌರ್ಬಲ್ಯಗಳು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಈಗ ಹೆಚ್ಚು ಹೆಚ್ಚಾಗಿ ಮನವರಿಕೆಯಾಗುತ್ತಿವೆ ಹಾಗೂ ಅದಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕಾಗಿನ ಪ್ರಯತ್ನಗಳೂ ನಡೆಯುತ್ತಿವೆ. ಒಂದು ವೇಳೆ ವ್ಯವಸ್ಥೆ ದೋಷರಹಿತವಾಗಿದ್ದಾಗಲೂ ಆ ಮಾದರಿಯನ್ನು ಅನುಸರಿಸುವುದಕ್ಕೆ ತಗಲುವ ಬೃಹತ್ ಖರ್ಚು ಹಾಗೂ ಅವಶ್ಯಕತೆಗಿಂತ ಹೆಚ್ಚು ಕಟ್ಟುನಿಟ್ಟಿನ ವೃತ್ತಿಧೋರಣೆ ತಾಳುವುದು ಅಭಿವೃದ್ಧಿ ಹೊಂದುತ್ತಿರುವ ನಮ್ಮಂತಹ ದೇಶಗಳ ಸಾಮಾಜಿಕಾರ್ಥಿಕ ಪರಿಸ್ಥಿತಿಗಳಿಗೆ ಖಂಡಿತಾ ಸರಿಹೊಂದುವುದಿಲ್ಲ. ನಮ್ಮ ದುರಂತ ಏನೆಂದರೆ ಪಾಶ್ಚಿಮಾತ್ಯ ರಾಷ್ಟ್ರಗಳಿಂದ ನಾವು ಎರವಲು ಪಡೆದುಕೊಂಡಿರುವ ಮಾದರಿಗಳ ಒಟ್ಟಾರೆ ಉಪಯುಕ್ತತೆಯ ಬಗ್ಗೆ ಹಾಗೂ ಅಂತಿಮವಾಗಿ ನಮ್ಮ ಸಮಾಜಕ್ಕೆ ಅವು ಹೊಂದಿಕೊಳ್ಳುವುದಿಲ್ಲ ಎಂಬ ಆತಂಕ ಸೃಷ್ಟಿಯಾದ ಮೇಲೂ ನಾವು ಅವುಗಳನ್ನೇ ಕಟ್ಟುನಿಟ್ಟಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ, ಈ ಮಾದರಿಯನ್ನು ತಿರಸ್ಕರಿಸಿ ನಮ್ಮ ದೇಶದ ವಾಸ್ತವ ಪರಿಸ್ಥಿತಿಗಳಿಗೆ, ನಮ್ಮ ಅಗತ್ಯಗಳಿಗೆ ಹಾಗೂ ನಮ್ಮ ಆಕಾಂಕ್ಷೆಗಳಿಗೆ ಸರಿಹೊಂದಿಕೊಳ್ಳುವಂಥ ಸೂಕ್ತ ಮತ್ತು ಆರ್ಥಿಕ ಪರ್ಯಾಯಗಳನ್ನು ಸೃಷ್ಟಿಸುವುದಕ್ಕೆ ಗಂಭೀರ ಪ್ರಯತ್ನಗಳನ್ನು ಹಾಕುವುದು ಒಂದು ಪ್ರಜ್ಞಾಪೂರ್ವಕವಾದ ಹಾಗೂ ಉದ್ದೇಶಪೂರ್ವಕವಾದ ತೀರ್ಮಾನವಾಗುತ್ತದೆ. ಈ ಹೊಸ ಮಾದರಿಯು ಮಾನವ ಪ್ರಯತ್ನದ ಮೇಲೆ ಅತೀವ ಒತ್ತು ನೀಡಬೇಕಾಗುತ್ತದೆ (ಹಣಕಾಸಿನ ನೀಡಿಕೆಯ ವಿಚಾರದಲ್ಲಿ ನಮ್ಮಲ್ಲಿ ಗಂಭೀರ ಅಡೆತಡೆಗಳಿರುವುದರಿಂದ ಅದರ ಮೇಲೆ ಒತ್ತು ನೀಡುವುದಕ್ಕಿಂತ ಮಾನವ ಪ್ರಯತ್ನದ ಮೇಲೆ ಹೆಚ್ಚು ಒತ್ತು ನೀಡುವುದಕ್ಕೆ ನಮ್ಮಲ್ಲಿ ಸಾಕಷ್ಟು ಅತಃಸ್ಸಾಮರ್ಥ್ಯವಿದೆ)."

ಶ್ರೀವಾತ್ಸವ ವರದಿಯು ಸಮುದಾಯದೊಳಗೆಯೇ ಅರೆವೃತ್ತಿಪರರನ್ನು ತರಬೇತುಗೊಳಿಸುವ ವಿಚಾರದಲ್ಲಿ ಒಂದು ಕುತೂಹಲಕಾರಿ ಪ್ರತಿಪಾದನೆಯನ್ನು ಮಾಡಿತು; ವಾಸ್ತವದಲ್ಲಿ ಇದು ಜಮ್ಮೇಡ್‌ನಂತಹ ಸಮುದಾಯ ಆರೋಗ್ಯ ಸುಧಾರಣಾ ಪ್ರಯತ್ನಗಳನ್ನು ಕೈಗೆತ್ತಿಕೊಳ್ಳುವ ಗುಂಪುಗಳಿಗೆ ಒಂದು ಆಧಾರ ಧ್ಯೇಯವಾಗಿ ಮಾರ್ಪಟ್ಟಿತ್ತು. ಇದಲ್ಲದೇ ಆ ಗುಂಪುಗಳು 'ಸಮುದಾಯ ಆರೋಗ್ಯ' ವಿಚಾರದಲ್ಲಿ ಇನ್ನಿತರ ಪ್ರಯತ್ನಗಳನ್ನೂ ನಡೆಸಿದ್ದವು. ಅವುಗಳಲ್ಲಿ ಈ ಕೆಳಗಿನವುಗಳೂ ಸೇರಿದ್ದವು:

- ಆರೋಗ್ಯವನ್ನು ಅಭಿವೃದ್ಧಿ ಚಟುವಟಿಕೆಗಳ ಜೊತೆ ಸಮ್ಮಿಳಿಸುವುದು.
- ಆರೋಗ್ಯ ಕಾರ್ಯಕ್ರಮಕ್ಕೆ ಪ್ರತಿಬಂದಾತ್ಮಕ, ಉತ್ತೇಜನಾತ್ಮಕ ಹಾಗೂ ಮರುಸ್ಥಾಪನಾತ್ಮಕ ದೃಷ್ಟಿಕೋನವನ್ನು ನೀಡುವುದು.
- ಕಡಿಮೆ ಖರ್ಚಿನ, ಪರಿಣಾಮಕಾರಿಯಾದ ಮತ್ತು ಸೂಕ್ತವಾದ ತಂತ್ರಜ್ಞಾನದೊಂದಿಗೆ ಪ್ರಯೋಗ ಮಾಡುವುದು.
- ಆರೋಗ್ಯ ಶಿಕ್ಷಣ ಮತ್ತು ಸಂವಹನಕ್ಕೆ ಸಂಬಂಧಿಸಿದಂತೆ ಪ್ರಯೋಗಶೀಲವಾದ ನವೀನ ರೂಪಗಳನ್ನು ಅಳವಡಿಸಿಕೊಳ್ಳುವುದು.
- ಸ್ಥಳೀಯವಾಗಿ ಲಭ್ಯವಿರುವ ಆರೋಗ್ಯ ಸಂಪನ್ಮೂಲಗಳನ್ನು ಗುರುತಿಸುವುದು, ಉತ್ತೇಜಿಸುವುದು ಹಾಗೂ ಸದ್ಬಳಕೆ ಮಾಡಿಕೊಳ್ಳುವುದು.
- ಆರೋಗ್ಯ ಸಂಬಂಧಿ ತೀರ್ಮಾನ ರೂಪಣೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಹೆಚ್ಚು ಮಾಡುವುದು.
- ಮಹಿಳಾ ಮಂಡಳಿಗಳು, ಯುವಕ ಸಂಘಗಳು, ರೈತ ಸಂಘಗಳು ಮುಂತಾದವುಗಳನ್ನೂ ಒಳಗೊಂಡಂತೆ ಒಟ್ಟಾರೆಯಾಗಿ ಸಮುದಾಯ ಸಂಘಟನೆಗಳನ್ನು ಪ್ರಾರಂಭಿಸುವುದು.
- ಆರ್ಥಿಕ ಸ್ವಾವಲಂಬನೆಗಾಗಿ ಸ್ಥಳೀಯ ಸಂಪನ್ಮೂಲಗಳನ್ನು ಸೃಷ್ಟಿಸುವುದಕ್ಕಾಗಿ ನಿರಂತರ ಹುಡುಕಾಟ ನಡೆಸುವುದು.
- ಆತ್ಮನಿಷ್ಠೆ ಮತ್ತು ಸಾಮಾಜಿಕ ಕಾರ್ಯಗಳನ್ನು ಉತ್ತೇಜಿಸುವುದು.

ಶ್ರೀವಾತ್ಸವ ಸಮಿತಿಯು 'ಸಮುದಾಯ ಆರೋಗ್ಯ'ಕ್ಕೆ ಸಂಬಂಧಪಟ್ಟ ಈ ಅಂಶಗಳಲ್ಲಿ ಕೇವಲ ಒಂದೇ ಒಂದು ಅಂಶದ ಮೇಲೆ ಮಾತ್ರ ಹೆಚ್ಚು ಗಮನಕೊಟ್ಟು ಎತ್ತಿತೋರಿತಾದರೂ ಅದು ಬಹಳ ಮಹತ್ವಪೂರ್ಣ ಅಂಶವೇ ಆಗಿತ್ತು.

ಬಾಕ್ಸ್:

ಒಂದು ಸಮುದಾಯಕ್ಕೆ ಅಗತ್ಯವಿರುವ ಸರಳ, ಉತ್ತೇಜನಾತ್ಮಕ, ಪ್ರತಿಬಂಧಾತ್ಮಕ ಹಾಗೂ ಗುಣಕಾರಕ ಆರೋಗ್ಯ ಸೇವೆಗಳನ್ನು ಒದಗಿಸುವುದಕ್ಕಾಗಿ ಆ ಸಮುದಾಯವೊಂದರ ಒಳಗೇ ಇರುವ ವೈದ್ಯಕೀಯ ಸಹಾಯಕ-ವೃತ್ತಿಪರರನ್ನು ಅಥವ ಅರೆ-ವೃತ್ತಿಪರರನ್ನು ಒಳಗೊಂಡ ತಂಡಗಳನ್ನು ರಚಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಶಿಫಾರಸ್ಸು ಮಾಡುತ್ತೇವೆ. ಇವರಲ್ಲಿ ದಾಯಿಯರು, ಕುಟುಂಬ ಯೋಜನೆಯ ಕಾರ್ಯಕರ್ತರು, ಸರಳ ಗುಣಕಾರಿ ಸೇವೆಗಳನ್ನು ಒದಗಿಸಬಲ್ಲ ವ್ಯಕ್ತಿಗಳು, ಸುಲಭವಾಗಿ ಒಬ್ಬರಿಂದ ಒಬ್ಬರಿಗೆ ಹರಡುವ ಸಾಂಕ್ರಾಮಿಕ ರೋಗಗಳ ನಿಯಂತ್ರಣವನ್ನೂ ಒಳಗೊಂಡಂತೆ ಉತ್ತೇಜನಾಕಾರಿ ಹಾಗೂ ಪ್ರತಿಬಂಧಾತ್ಮಕ ಆರೋಗ್ಯ ಚಟುವಟಿಕೆಗಳಲ್ಲಿ ತರಬೇತುಗೊಂಡವರು – ಮುಂತಾದವರನ್ನು ಈ ತಂಡ ಒಳಗೊಳ್ಳಬಹುದು. ಅವರು ವಿವಿದೋದ್ದೇಶಗಳಿಗೆ ಬಳಕೆಯಾಗಬೇಕೆಂದೇನೂ ಇಲ್ಲ. ಸಮುದಾಯದಲ್ಲಿರುವ ಯುವಕರು, ಪ್ರಾಥಮಿಕ ಶಾಲಾ ಶಿಕ್ಷಕರು, ನಿರ್ದಿಷ್ಟವಾಗಿ ಸುಶಿಕ್ಷಿತ ಮತ್ತು ಕೆಲಸ ಮಾಡುವುದಕ್ಕೆ ಇಚ್ಛೆಯಿರುವ ಗೃಹಣಿಯರು – ಇವೇ ಜನಭಾಗಗಳು ಅಂಥ ತಂಡಗಳನ್ನು ರಚಿಸುವುದಕ್ಕೆ ಅವಶ್ಯವಿರುವ ಮಾನವ ಸಂಪನ್ಮೂಲಗಳಾಗಿರುತ್ತಾರೆ. ಅವರ ಸಂಖ್ಯೆಯನ್ನು ನಿಯಂತ್ರಿಸುವ ಅವಶ್ಯಕತೆಯಿಲ್ಲ; ಅವರನ್ನು ಅಧಿಕೃತ ಕಾರ್ಯಕರ್ತರಾಗಿ ಸಂಘಟಿಸಿ ಸರ್ಕಾರಿ ಹಣದಿಂದ ಸಂಬಳ ನೀಡುವ ಅವಶ್ಯಕತೆಯೂ ಇಲ್ಲ. ಅವರನ್ನು ಸ್ವಯಂ ಉದ್ಯೋಗದ ಆಧಾರದಲ್ಲಿ ಮತ್ತು ಅರೆಕಾಲಿಕ ವೃತ್ತಿಯ ಆಧಾರದಲ್ಲಿ ಕೆಲಸ ಮಾಡುವುದಕ್ಕೆ ಬಿಡುವುದು ಒಳ್ಳೆಯದು. ಈ ವಿಚಾರದಲ್ಲಿ ಸರ್ಕಾರದ ಕರ್ತವ್ಯ ಏನೆಂದರೆ ತರಬೇತಿ ಮತ್ತು ಮರುತರಬೇತಿ ನೀಡುವುದಕ್ಕಾಗಿ, ಮಾರ್ಗದರ್ಶನ ಕೊಡುವುದಕ್ಕಾಗಿ, ಸಮಾಲೋಚನೆ ನಡೆಸುವುದಕ್ಕಾಗಿ (ಆಗಿಂದಾಗ್ಗೆ ನಡೆಯುವ ಸಮಾಲೋಚನೆಗಳನ್ನೂ ಒಳಗೊಂಡಂತೆ) ಸಮುದಾಯದೊಳಗಿಂದ ಬಹಳ ಎಚ್ಚರಿಕೆಯಿಂದ ಜನರನ್ನು ಆಯ್ಕೆ ಮಾಡಿಕೊಳ್ಳುವುದು ಹಾಗೂ ಅವಶ್ಯವಿರುವ ವೈದ್ಯಕೀಯ ಪರಿಕರಗಳನ್ನು ನ್ಯಾಯಯುತ ಬೆಲೆಯಲ್ಲಿ ಪೂರೈಸುವುದು.

1970ರ ದಶಕದಲ್ಲಿ ದಿ ಮಿಷನ್ ಹಾಸ್ಪಿಟಲ್ ನೆಟ್‌ವರ್ಕ್ ಹಾಗೂ ಅದರ ಸಹಭಾಗಿ ಡಿಸ್ಪೆನ್ಸರಿಗಳು ಜೈವಿಕ-ವೈದ್ಯಕೀಯ ಮಾದರಿಯ ಕೊರತೆಗಳನ್ನು ನಿಧಾನವಾಗಿ ಅರ್ಥಮಾಡಿಕೊಂಡು ತಮ್ಮ ಆಸ್ಪತ್ರೆ-ಡಿಸ್ಪೆನ್ಸರಿ ಮಾದರಿಯಿಂದ ಕದಲಲು ಪ್ರಾರಂಭಿಸಿದ್ದವು. 'ಸಮುದಾಯ ಆರೋಗ್ಯ'ದ ಸ್ಫೂರ್ತಿಯು ನಮ್ಮ ದೇಶದಲ್ಲಿ ಮಿಷನ್ ಹೆಲ್ತ್ ನೆಟ್‌ವರ್ಕ್ ಅನ್ನು ಮಾತ್ರವಲ್ಲದೇ ಇಡೀ ಪ್ರಪಂಚದಾದ್ಯಂತ ತನ್ನ ಪ್ರಭಾವ ಬೀರಲಾರಂಭಿಸಿತ್ತು. 'ಆರೋಗ್ಯ ಪಾಲನಾ ಸೇವೆಗಳ ಹೊಸ ದೃಷ್ಟಿಕೋನ' (New Orientation of Health Care Services) ಕುರಿತ ಕೋರ್ ಉನಮ್ ದಸ್ತಾವೇಜು ಒಂದು ಕೂತೂಹಲಕಾರಿ ಹಾಗೂ ಮಹತ್ವಪೂರ್ಣ ಮೈಲಿಗಲ್ಲಾಗಿದ್ದು ಈ ವಿಚಾರದಲ್ಲಿ ಬಹಳ ಧೈರ್ಯಶಾಲಿಯಾದದ್ದಾಗಿದೆ. ಚರ್ಚಿನ ಗುಣಕಾರಿ ಸಚಿವಾಲಯದ ಚರಿತ್ರೆಯಲ್ಲೇ ಮೊಟ್ಟ ಮೊದಲ ಬಾರಿಗೆ ಪ್ರಾಥಮಿಕ ವೈದ್ಯಕೀಯ/ಆರೈಕೆಯ ವೃತ್ತಿಪರರ ಒಂದು ಗುಂಪು ಚರ್ಚಿನ ಸಾಂಸ್ಥೀಕರಣಗೊಂಡ ಆರೋಗ್ಯ ಪಾಲನಾ ಸೇವೆಗಳ ಪ್ರಭಾವವು ಬಡವರ ಮತ್ತು ಮೂಲೆಗುಂಪಾದ ನಿರ್ಗತಿಕರ ಕಷ್ಟಕಾರ್ಪಣ್ಯಗಳಿಂದ ಬಹಳ ದೂರಸರಿದಿದೆ ಎಂದು ಹೇಳುವ ಒಳನೋಟ ಮತ್ತು ದೂರದೃಷ್ಟಿಯನ್ನು ಪ್ರದರ್ಶಿಸಿತ್ತು. ಇದು ಸಮುದಾಯ ಆರೋಗ್ಯದ ದಿಕ್ಕನ್ನು ಪುನರ್‌ನಿರ್ದೇಶಿಸುವುದಕ್ಕೂ ಕಾರಣವಾಯಿತು.

ಕೋರ್ ಉನಮ್ (1975)

ಸಮುದಾಯವೊಂದರ ಸಮಾಜಶಾಸ್ತ್ರೀಯ ಪರಿಸ್ಥಿತಿಯ ಬಗ್ಗೆ ಅರಿವಿರುವುದು ಬಹಳ ಮಹತ್ವಪೂರ್ಣವಾದ ವಿಚಾರ. ಸ್ಥಳೀಯ ಜನಸಂಖ್ಯೆಯಲ್ಲಿ ಜನಾಂಗೀಯ ಸಂಯೋಜನೆ ಮತ್ತು ಬೆಳವಣಿಗೆ, ಅದರ ಸಂಪ್ರದಾಯಗಳು ಮತ್ತು ರೂಢಿಗತ ನಿಯಮಾವಳಿಗಳು, ವಿವಿಧ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಹಾಗೂ ಸಮುದಾಯದ ಆರೋಗ್ಯವನ್ನೂ ಒಳಗೊಂಡಂತೆ (ಇದೊಂದು ಅವಿಭಾಜ್ಯ ಅಂಗವಾಗಿದ್ದು ಅದನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸುವಂತಿಲ್ಲ) ಒಟ್ಟಾರೆಯಾಗಿ ಸಮುದಾಯದ ಸಮತೋಲನ ಅಭಿವೃದ್ಧಿಗೆ ಕಾರಣವಾಗುವ ಎಲ್ಲಾ ಪರಿಸ್ಥಿತಿಗಳು ಇದರಲ್ಲಿ ಸೇರುತ್ತವೆ.

ತಮ್ಮದೇ ಸಮಸ್ಯೆಗಳನ್ನು ಅರಿತುಕೊಳ್ಳುವುದಕ್ಕೆ ಹಾಗೂ ಅವುಗಳನ್ನು ಅಭಿವ್ಯಕ್ತಗೊಳಿಸುವುದಕ್ಕೆ *ಸಮುದಾಯದ ಸದಸ್ಯರಿಗೆ* ಅವಶ್ಯವಿರುವೆಡೆಯಲ್ಲೆಲ್ಲಾ ಸಹಕರಿಸಬೇಕು; ಇದರಿಂದಾಗಿ ಇಲ್ಲೂ ಕೂಡ *ಅವರು ತಮ್ಮ ಅಭಿವೃದ್ಧಿಯನ್ನು ತಾವೇ ಮಾಡಿಕೊಳ್ಳುವ ಶಿಲ್ಪಿಗಳಾಗುತ್ತಾರೆ.* ಉದಾಹರಣೆಗಾಗಿ ಹೇಳಬೇಕಂದರೆ, ಅವರು ಆಸ್ಪತ್ರೆಗಳೆಂದರೆ ಯಾಕೆ ಹೆದರುತ್ತಾರೆ, ಯಾಕೆ ವೈದ್ಯಕೀಯ ಸೇವೆಗಳನ್ನು ಬಹಳ ತಡವಾಗಿ ಪಡೆಯುವುದಕ್ಕೆ ಬರುತ್ತಾರೆ, ಯಾಕೆ ಮಹಿಳೆಯರು ಮನೆಯಲ್ಲೇ ಹೆರಿಗೆ ಮಾಡಿಕೊಳ್ಳುವುದಕ್ಕೆ ಬಯಸುತ್ತಾರೆ, ಹಾಗೂ ಘನತೆಯಿಂದ ಸಾಯುವುದು ಎಂದರೆ ಅವರ ಅರ್ಥದಲ್ಲಿ ಏನು ಮುಂತಾದವುಗಳನ್ನು ಆ ಜನರು ಮಾತ್ರವೇ ವಿವರಿಸಬಲ್ಲರು.

ಈ ಗಹನವಾದ ಮಾನವೀಯ ಅಂಶಗಳೇ ಪ್ರಾಥಮಿಕ ಆರೋಗ್ಯ ಪಾಲನೆಯನ್ನು ಸಂಘಟಿಸುವುದಕ್ಕಾಗಿನ ಜವಾಬ್ದಾರಿಗಳನ್ನು ಹಂಚಿಕೊಡುವುದನ್ನು ಸಾಧ್ಯವಾಗಿಸುತ್ತವೆ. ಕೆಲವು ದೇಶಗಳಲ್ಲಿ ತಳಮಟ್ಟದಲ್ಲಿ ಸಮುದಾಯ ಆರೋಗ್ಯ ಸಮಿತಿಗಳನ್ನು ರಚಿಸಲಾಗಿದ್ದು ಅವುಗಳ ಸದಸ್ಯರನ್ನು ಸಮುದಾಯವೇ ಆಯ್ಕೆ ಮಾಡುತ್ತದೆ. ಈ ಸದಸ್ಯರು ಸಮುದಾಯದ ಗೌರವಾನ್ವಿತರಾಗಿರಬಹದು, ಸರ್ಕಾರಿ ಅಧಿಕಾರಿಗಳಾಗಿರಬಹುದು, ಇನ್ನಿತರ ಜವಾಬ್ದಾರಿಯುತ ವ್ಯಕ್ತಿಗಳಾಗಿರಬಹುದು ಅಥವ ಇಂಥ ಕೆಲಸಕ್ಕೆ ತಕ್ಕುದಾದ ಸಾಮರ್ಥ್ಯ, ವ್ಯಕ್ತಿತ್ವಗಳನ್ನು ಹೊಂದಿರುವ ಯಾವುದೇ ವ್ಯಕ್ತಿಗಳಾಗಿರಬಹುದು. ಈ ಸಮಿತಿಯು ತಾನು ಪ್ರತಿನಿಧಿಸುವ ಜನರ ಆರೋಗ್ಯ ಪಾಲನಾ ಅಗತ್ಯಗಳನ್ನು ಎತ್ತಿತೋರಿಸುತ್ತಾ ಅವುಗಳನ್ನು ಈಡೇರಿಸುವುದಕ್ಕಾಗಿ ಸಮುದಾಯ ಆರೋಗ್ಯ ಕಾರ್ಯಕರ್ತರನ್ನು ನೇಮಿಸುತ್ತದೆ.

ಈ ಹೊಸ ಪ್ರಾಥಮಿಕ ಆರೋಗ್ಯ ಪಾಲನಾ ನೀತಿಯು ರೂಪುದಳೆಯುತ್ತಿರುವಾಗಲೇ ಧಾರ್ಮಿಕ ಕೂಟದ ಸದಸ್ಯರು ತಾವು ಯಾವ ಪ್ರಸ್ತುತ ಪರಿಸ್ಥಿತಿಗಳಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೋ ಆ ಪರಿಸ್ಥಿತಿಗಳಿಗೆ ಅವಶ್ಯವಿದ್ದಲ್ಲೆಲ್ಲಾ ಮರುದಿಕ್ಕು ತೋರಿಸುವುದಕ್ಕಾಗಿ ಗಂಭೀರ ಪರಿಶೀಲನೆ ನಡೆಸಬೇಕು. ಕೆಲವೊಮ್ಮೆ ಏನಾಗುತ್ತದೆಂದರೆ ಈ ಬದಲಾವಣೆಗಳ ಪರಿಣಾಮವಾಗಿ (ಆ ಬದಲಾವಣೆಗಳು ಎಲ್ಲರ ಅರಿವಿಗೆ ಬಾರದೆಯೂ ಇರಬಹುದು) ಅವರಲ್ಲಿ ಬಹುತೇಕರು ಬಹಳಷ್ಟು ಜನರಿಗೆ ದುಬಾರಿಯಾರಿಯಾಗಿರುವ ಆಸ್ಪತ್ರೆಗಳಲ್ಲಿ ಮತ್ತು ಆರೋಗ್ಯ ಕೇಂದ್ರಗಳಲ್ಲಿ ಕೆಲಸ ಮಾಡುತ್ತಾ ದುಬಾರಿ ಹಣವನ್ನು ವ್ಯಯಿಸಲು ಶಕ್ತಿಯಿರುವ ಕೆಲವೇ ಹಣವಂತ ಕುಲೀನ ವರ್ಗದ ಜನರಿಗೆ ಮಾತ್ರ ಸುಲಭವಾಗಿ ಲಬ್ಯವಾಗುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಅವಶ್ಯವಾಗಿ ಜೊತೆಗಿರಬೇಕಿದ್ದದ್ದು ಬಹಳ ದೂರವಾದಂತಾಗುತ್ತದೆ.

(ಅಲ್ಮಾ ಆಟಾ ಮುಂಚಿನ ಆರೋಗ್ಯ ಕುರಿತ ವ್ಯಾಟಿಕನ್ ದಸ್ತಾವೇಜು)

1980ರ ದಶಕದ ಹೊತ್ತಿಗೆ ದೇಶದಲ್ಲಿ ವಿಕಾಸಗೊಳ್ಳುತ್ತಿದ್ದ ಸಮುದಾಯ ಆರೋಗ್ಯ ಚಳವಳಿಯು ಹೊಂದಿದ್ದ ಬಹುಮುಖ್ಯವಾದ ಅಂಶ ಎಂದರೆ ಬಡವರ ಪರವಾಗಿರುವ ಪರ್ಯಾಯ ಆರೋಗ್ಯ ವ್ಯವಸ್ಥೆಯೊಂದನ್ನು ಜಾರಿಗೆ ತರುವುದಕ್ಕಾಗಿ ಅದು ಬೆಳೆಸಿಕೊಂಡಿದ್ದ ಬದ್ಧತೆ. ವಾಸ್ತವದಲ್ಲಿ ಇದು ಖಂಡಿತವಾಗಿಯೂ ಬಡವರ ಪರವಾದ ಪರ್ಯಾಯ ಅಭಿವೃದ್ಧಿ ವ್ಯೂಹತಂತ್ರದ ಅಥವ ಸಾಮಾಜಿಕಾರ್ಥಿಕ ಬದಲಾವಣೆಯ ಪ್ರಕ್ರಿಯೆಯ ಭಾಗವೂ ಆಗಿತ್ತು. ಈ ವಾಸ್ತವಾಂಶವನ್ನು ಹೊಸದಾಗಿ ಬಂದಿರುವ ಸಮುದಾಯ ಆರೋಗ್ಯ ಕುತೂಹಲಿಗಳು ಆಗಾಗ ಮರೆತುಬಿಡುವುದುಂಟು. ಅವರು ಬಹಳಷ್ಟು ಸಂದರ್ಭದಲ್ಲಿ ಸಮುದಾಯ ಆರೋಗ್ಯವನ್ನು ಕೇವಲ ಸಮುದಾಯ ಆರೋಗ್ಯ ಕಾರ್ಯಕರ್ತರಿಗೆ ಮತ್ತು ಸೂಕ್ತ ಆರೋಗ್ಯ ತಂತ್ರಜ್ಞಾನಕ್ಕೆ ಸೀಮಿತಗೊಳಿಸಿ ನೋಡುತ್ತಾರೆ. ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ ಪ್ರೊ.ದೇಬಬಾರ್ ಬ್ಯಾಜರ್ನಿ ಹಾಗೂ ತದನಂತರದಲ್ಲಿ ಅವರ ಅನೇಕ ಸಹೋದ್ಯೋಗಿಗಳು ಸಮುದಾಯ ಆರೋಗ್ಯ ಸವಾಲಾಗಿರುವ ಸಾಮಾಜಿಕ-ಆರ್ಥಿಕ ಆಯಾಮಗಳನ್ನು ಒತ್ತಿಹೇಳದ್ದೂ ಕೂಡ ಈ ನಿಟ್ಟಿನಲ್ಲಿ ಒಂದು ಮಹತ್ವಪೂರ್ಣ ಮೈಲಿಗಲ್ಲೇ ಆಗಿದೆ. ಬ್ಯಾನರ್ಜಿಯವರು ನಡೆಸಿದ 19 ಹಳ್ಳಿಗಳ ಅಧ್ಯಯನವು ವಾಸ್ತವದಲ್ಲಿ ಒಂದು ಶ್ರೇಷ್ಠ ಅಧ್ಯಯನವೇ ಆಗಿದ್ದು ಅದು 'ಆರೋಗ್ಯವು ಅವಶ್ಯವಾಗಿ ಒಂದು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ವಿಚಾರವಾಗಿದ್ದು ಆರೋಗ್ಯಕ್ಕಾಗಿನ ಹೋರಾಟವು ಒಂದೇ ರೀತಿಯಲ್ಲಿದೆ' ಎಂದು ಸ್ಪಷ್ಟವಾಗಿ ಗುರುತಿಸಿತು. ಈ ಮೂಲ ಮತ್ತು ಮಹತ್ವಪೂರ್ಣ ಪರಿಕಲ್ಪನೆಯನ್ನು ಅವರು ಕಲಾತ್ಮಕವಾಗಿ ವಿವರಿಸಿದ್ದು ಇಡೀ ದೇಶದಾದ್ಯಂತ ಸಮುದಾಯ ಆರೋಗ್ಯ ಪಾಲನೆಯಲ್ಲಿ ತೊಡಗಿಕೊಂಡಿದ್ದ ಅನೇಕ ಕಾರ್ಯಕರ್ತರಿಗೆ ಬಹಳ ಸ್ಫೂರ್ತಿ ತುಂಬಿತು; ಈ ಪ್ರಕ್ರಿಯೆಯಲ್ಲೆ ಬ್ಯಾಜರ್ನಿಯವರು ಬಡವರ ಪರವಾಗಿರುವ ಆರೋಗ್ಯ ವ್ಯವಸ್ಥೆಯೊಂದರ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ಚಿಂತಕರೆಂದು ಹೆಸರುವಾಸಿಯಾದರು.

ಬಡನತ, ವರ್ಗ ಮತ್ತು ಸಂಸ್ಕೃತಿ (1982)

"ಸಾರಾಂಶೀಕರಿಸಿ ಹೇಳುವುದಾದರೆ, ನಮ್ಮ ಅವಿಷ್ಕಾರಗಳ ಪರಿಣಾಮಗಳನ್ನು ಪರಿಗಣನೆಗೆ ತೆಗೆದುಕೊಂಡರೆ ನಾಲ್ಕು ಮುಖ್ಯ ವಿಚಾರಗಳಿರುವುದು ಗೊತ್ತಾಗುತ್ತದೆ.

ಮೊದಲನೇಯದು, ಪರಿಸರಾತ್ಮಕ ಪರಿಸ್ಥಿತಿಗಳಲ್ಲಿ ಹಾಗೂ ಆರೋಗ್ಯ ಕೇಂದ್ರಗಳ ಅಲಬ್ಯತೆಯಲ್ಲಿ ಬಹಳಷ್ಟು ಭಿನ್ನತೆಗಳಿರುವ ಕಾರಣದಿಂದಾಗಿ ನಗರ ಪ್ರದೇಶಗಳಲ್ಲಿನ ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಿಗಿಂತ ಬಹಳಷ್ಟು ಉತ್ತಮವಾದ ಸೌಕರ್ಯಗಳನ್ನು ಅನುಭವಿಸುತ್ತಿದ್ದಾರೆಂದು ಸಾಮ್ಯಾನ್ಯೀಕರಿಸಿ ಹೇಳಬಹುದು. ಇದೇ ರೀತಿಯ ಭಿನ್ನತೆಗಳು ಹಳ್ಳಿ-ಹಳ್ಳಿಗಳ ನಡುವೆಯೂ ಅಸ್ತಿತ್ವದಲ್ಲಿವೆ (ನಗರಗಳಲ್ಲಿರುವಂತೆಯೇ); ಗ್ರಾಮೀಣ ಪ್ರದೇಶದಲ್ಲಿ

ವಾಸಿಸುವ ಜನರಲ್ಲಿಯೇ ಅನುಕೂಲಸ್ತರಾಗಿರುವ ಒಂದು ಸಣ್ಣ ವರ್ಗವು ಉಳಿದ ವಿಶಾಲ ಜನಮುದಾಯಕ್ಕೆ ಹೋಲಿಸಿ ನೋಡಿದರೆ ಇದ್ದುದರಲ್ಲಿಯೇ ಉತ್ತಮವಾದ ಪರಿಸರ ಹಾಗೂ ಉತ್ತಮವಾದ ಆರೋಗ್ಯ ಸೌಲಭ್ಯಗಳು ಸಿಗುವಂಥ ಜಾಗದಲ್ಲಿ ವಾಸಿಸುತ್ತದೆ.

ಎರಡನೇಯದು, ಬಡಜನರ ರಾಶಿರಾಶಿ ಆರೋಗ್ಯ ಸಮಸ್ಯೆಗಳಿಗೆ ಅವರು ಬದುಕುತ್ತಿರುವ ಅತ್ಯಂತ ಕೆಟ್ಟ ಪರಿಸರದ ಪರಿಸ್ಥಿತಿಗಳೇ ಕಾರಣವಾಗಿರುವುದರಿಂದ ಅವರು ಬದುಕುತ್ತಿರುವ ಪರಿಸ್ಥಿತಿಗಳನ್ನು ಸುಧಾರಿಸುವ ಮೂಲಕ ಮಾತ್ರವೇ ಈ ಸಮಸ್ಯೆಗಳನ್ನು ಬಗೆಹರಿಸಬಹುದು. *ಈ ಸುಧಾರಣೆಯು ಮೂಲಭೂತವಾಗಿ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳಿಗೆ ನೇರವಾಗಿ ಸಂಬಧಿಸಿದ್ದರಿಂದ ಒಂದು ಜನಸಮುದಾಯದ ಆರೋಗ್ಯ ಮಟ್ಟವನ್ನು ಸುಧಾರಣೆ ಮಾಡುವುದು ಎಂದರೆ ಆ ಸಮುದಾಯದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಯನ್ನು ಸುಧಾರಣೆ ಮಾಡುವುದೂ ಆಗಿರುತ್ತದೆ.* ಈಗ ಅಸ್ತಿತ್ವದಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳಲ್ಲಿ ಸಾಂಪ್ರದಾಯಿಕ ಆರೋಗ್ಯ ಸೇವೆಗಳು ಬಹಳ ನಗಣ್ಯವಾದ ಪಾತ್ರವನ್ನು ಮಾತ್ರವೇ ನಿರ್ವಹಿಸಬಲ್ಲವು. *ಹೀಗಾಗಿ, ಉತ್ತಮ ಆರೋಗ್ಯಕ್ಕಾಗಿನ ಹೋರಾಟವು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ನ್ಯಾಯಕ್ಕಾಗಿನ ಹೋರಾಟಗಳಂತೆಯೇ ಇರುತ್ತದೆ.*

ಮೂರನೇಯದು, ಆರೋಗ್ಯ ಕೇಂದ್ರಗಳ ಲಬ್ಯತೆಯ ವಿಚಾರದಲ್ಲಿ ಬಹಳಷ್ಟು ಅಸಮಾನತೆ ಇರುವ ಇಂದಿನ ಪರಿಸ್ಥಿತಿಗಳಲ್ಲಿ, ಬಡಜನರಿಗೆ ಸಿಗುವ ಆರೋಗ್ಯ ಸೇವೆಗಳ ಮೇಲೆ ಅನುಕೂಲಸ್ತ ವರ್ಗವೇ ನಿಯಂತ್ರಣ ಹೊಂದಿದೆ; ಅದು ಬಡಜನರನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಶೋಷಿಸುವುದಕ್ಕಾಗಿ ಈ ಆರೋಗ್ಯ ಸಂಸ್ಥೆಗಳನ್ನು ಒಂದು ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತದೆ.

ನಾಲ್ಕನೇಯದು, ಆಳುವ ವರ್ಗವು ಆರೋಗ್ಯ ಕ್ಷೇತ್ರದಲ್ಲಿ ಈಗಾಗಲೇ ಮಾಡಿರುವ ರಿಯಾಯಿತಿಗಳನ್ನು, ಅನುಕೂಲತೆಗಳನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳುವ ರೀತಿಯಲ್ಲಿ ಬಡಜನರು ಸಂಘಟಿತರಾದರೆ ತಮ್ಮನ್ನು ದಮನಿಸುವುದಕ್ಕಾಗಿ ಅನುಕೂಲಸ್ತರು ಬಳಸುತ್ತಿರುವ ಆರೋಗ್ಯ ಸೇವೆಗಳ ಲಬ್ಯತೆಯ ಅಸ್ತ್ರವನ್ನೇ ಮೊಂಡುಗೊಳಿಸಬಹುದು; ಮಾತ್ರವಲ್ಲ, ಇನ್ನೂ ಉತ್ತಮವಾದ, ನ್ಯಾಯಯುತವಾದ ಸಾಮಾಜಿಕ ವ್ಯವಸ್ಥೆಯೊಂದನ್ನು ಅಸ್ತಿತ್ವಕ್ಕೆ ತರುವುದಕ್ಕಾಗಿ ಹೋರಾಡುತ್ತಿರುವ ಇನ್ನಿತರ ಶಕ್ತಿಗಳೊಂದಿಗೆ ಕೈಜೋಡಿಸುವುದಕ್ಕೂ ಈ ರಿಯಾಯಿತಿಗಳನ್ನು ಒಂದು ಊರುಗೋಲನ್ನಾಗಿ ಬಳಸಿಕೊಳ್ಳಬಹುದು.

(ಡಿ.ಬ್ಯಾನರ್ಜಿ)

ಇದು ಭಾರತದಲ್ಲುಂಟಾದ ವಿದ್ಯಮಾನ ಮಾತ್ರ ಆಗಿರದೇ ಏಶಿಯಾದ ಬಹುತೇಕ ಭಾಗಗಳಲ್ಲೂ ಇದೇ ರೀತಿಯ ಬೆಳವಣಿಗೆಗಳು ಕಂಡುಬಂದವು; ಏಶಿಯಾದ ಬಡಜನ ಪರವಾದ ಸಮುದಾಯ ಆರೋಗ್ಯ ಯೋಜನೆಗಳ ಒಂದು ಜಾಲವಾಗಿರುವ 'ಏಶಿಯಾದ ಸಮುದಾಯ ಆರೋಗ್ಯ ಕ್ರಿಯಾ ಜಾಲ'ವು (Asian Community Health Action Network - ACHAN) ಸಮುದಾಯ ಆರೋಗ್ಯ ಮುನ್ನೋಟದ ಒಂದು ಚೌಕಟ್ಟನ್ನು ಸಿದ್ಧಪಡಿಸಿತಲ್ಲದೇ ಈ ದಿಶೆಯಲ್ಲಿ ತಮ್ಮ ಕಾರ್ಯಚಟುವಟಿಕೆಗಳಿಗೆ ಪುನರ್‌ದಿಕ್ಕು ತೋರಿಸಬೇಕೆಂದು ತನ್ನ ಸದಸ್ಯರಿಗೆ ಹಾಗೂ ಆರೋಗ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಇನ್ನಿತರರಿಗೆ ಮಾರ್ಗದರ್ಶನ ನೀಡಿತು. ಇಲ್ಲಿ ಅವರು ಕೇವಲ 'ಪ್ರಾಥಮಿಕ ಆರೋಗ್ಯ ಪಾಲನೆ' ಎಂಬ ಪದವನ್ನಷ್ಟೇ ಅಲ್ಲ, 'ಸಮುದಾಯ ಆರೋಗ್ಯ' ಎಂಬ ಪದವನ್ನೂ ಪ್ರಜ್ಞಾಪೂರ್ವಕವಾಗಿ ಬಳಸಿದ್ದು ಅತೀ ಮಹತ್ವದ್ದಾಗಿತ್ತು ಎಂಬುದನ್ನು ನಾವು ಗಮನಿಸಬೇಕು. ಈ ಬೆಳವಣಿಗೆ ನಡೆದದ್ದು 'ಆಲ್ಮಾ ಆಟಾ'ದ ಎರಡು ವರ್ಷಗಳ ನಂತರ!

'ಏಶಿಯಾದ ಸಮುದಾಯ ಆರೋಗ್ಯ ಕ್ರಿಯಾ ಜಾಲ'
(Asian Community Health Action Network - ACHAN)

ಏಶಿಯಾದಲ್ಲಿ ಬಡಜನರ ನಡುವೆ ಆರೋಗ್ಯ ಪಾಲನಾ ಚಟುವಟಿಕೆಗಳನ್ನು ಮಾಡಿ ಗಣನೀಯ ಅನುಭವ ಹೊಂದಿದ್ದ ಇಪ್ಪತ್ತು ಜನರ ಒಂದು ಗುಂಪು 1980ರಲ್ಲಿ 'ಏಶಿಯಾದ ಸಮುದಾಯ ಆರೋಗ್ಯ ಕ್ರಿಯಾ ಜಾಲ'ವನ್ನು ಸ್ಥಾಪಿಸಿತು. ಇಂದು ಅದು ಬಡಜನಪರ ಕಾಳಜಿ ಹೊಂದಿರುವ ಬಿಡಿ ಬಿಡಿ ವ್ಯಕ್ತಿಗಳು ಹಾಗೂ ಸರ್ಕಾರೇತರ ಸಂಘಟನೆಗಳನ್ನು ಒಳಗೊಂಡ ತನ್ನ ವಿಸ್ತೃತ ಜಾಲದ ಮೂಲಕ ಏಶಿಯಾದ ಹದಿನೈದು ದೇಶಗಳಲ್ಲಿ

ಕಾರ್ಯನಿರ್ವಹಿಸುತ್ತಿದೆ. ಇವರಲ್ಲಿ ಬಹುತೇಕರು ಸಮುದಾಯ ಮಟ್ಟದಲ್ಲಿ ನವೀನ, ಪ್ರಯೋಗಾತ್ಮಕ ಪ್ರಾಥಮಿಕ ಆರೋಗ್ಯ ಪಾಲನೆಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

'ಏಶಿಯಾದ ಸಮುದಾಯ ಆರೋಗ್ಯ ಕ್ರಿಯಾ ಜಾಲ'ವು ಏಶಿಯನ್ ಸಮುದಾಯಗಳಲ್ಲಿ ದಮನಿತ ಬಡ ಜನಸಮೂಹಗಳು ತಮ್ಮಿಂದ ತಾವೇ ಸ್ವಾವಲಂಭಿಯಾಗಿ ಮಾನವ ಅಭಿವೃದ್ಧಿಯನ್ನು ಹೊಂದುವಂತಹ ದೃಷ್ಟಿಯಿರುವ ಸಮುದಾಯ ಆಧಾರಿತ ಆರೋಗ್ಯ ಪಾಲನೆಯ ಸಿದ್ಧಾಂತವನ್ನು ಪ್ರಚುರಪಡಿಸಿ ಹರಡುವುದಕ್ಕೆ ಬಯಸುತ್ತದೆ; ವಾಸ್ತವದಲ್ಲಿ ಸ್ವಾವಲಂಭಿ ಮಾನವ ಅಭಿವೃದ್ಧಿಯೇ ನೈಜ ಪರಿವರ್ತನೆಯನ್ನು ತರುತ್ತದೆ.

ಆರೋಗ್ಯ ಎಂದರೆ ಬಿಡಿ ವ್ಯಕ್ತಿ ಮತ್ತು ಸಮುದಾಯಗಳ ದೈಹಿಕ, ಮಾನಸಿಕ, ಸಾಮಾಜಿಕ, ಆದ್ಯಾತ್ಮಿಕ, ಆರ್ಥಿಕ ಮತ್ತು ರಾಜಕೀಯ ಏಳಿಗೆಗಳೆಲ್ಲವೂ ಸಮ್ಮಿತಳಿತಗೊಂಡಿರುವಂತಹದ್ದು ಎಂದು 'ಏಶಿಯಾದ ಸಮುದಾಯ ಆರೋಗ್ಯ ಕ್ರಿಯಾ ಜಾಲ'ವು ಪರಿಭಾವಿಸುತ್ತದೆ.

ಒಂದು ಸಮುದಾಯವು ತನ್ನ ಆರೋಗ್ಯ ಸಮಸ್ಯೆಗಳನ್ನು, ತನ್ನ ಆರೋಗ್ಯ ಆದ್ಯತೆಗಳನ್ನು ಯಾವ ರೀತಿಯಲ್ಲಿ ನೋಡುತ್ತದೆಯೋ ನಾವೂ ಅದೇ ರೀತಿಯಲ್ಲಿ ನೋಡಬೇಕೆಂದೂ ಹಾಗೂ ಆರೋಗ್ಯ ಪಾಲನಾ ಕಾರ್ಯಕ್ರಮಗಳನ್ನು ಯೋಜಿಸುವಲ್ಲಿ, ಅನುಷ್ಠಾನಗೊಳಿಸುವಲ್ಲಿ, ಪರಿವೀಕ್ಷಿಸುವಲ್ಲಿ ಹಾಗೂ ಅವುಗಳನ್ನು ವಿಕಸಿಸುವಲ್ಲಿ ಸಮುದಾಯವನ್ನು ಕ್ರೀಯಾಶೀಲವಾಗಿ ತೊಡಗಿಸಿಕೊಳ್ಳಬೇಕೆಂದೂ 'ಏಶಿಯಾದ ಸಮುದಾಯ ಆರೋಗ್ಯ ಕ್ರಿಯಾ ಜಾಲ' ನಂಬುತ್ತದೆ.

'ಏಶಿಯಾದ ಸಮುದಾಯ ಆರೋಗ್ಯ ಕ್ರಿಯಾ ಜಾಲ'ವು ರಾಷ್ಟ್ರೀಯ ಮಟ್ಟದಲ್ಲಿ ತಳಮಟ್ಟದ ಜಾಲಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳುತ್ತದೆ ಮತ್ತು ಬೆಂಬಲಿಸುತ್ತದೆ"

1980ರ ಹೊತ್ತಿಗೆ 'ಸಮುದಾಯ ಆರೋಗ್ಯ ಸ್ಫೂರ್ತಿ'ಯು ನಿಜಾರ್ಥದಲ್ಲಿ ಇಡೀ ದೇಶವ್ಯಾಪಿಯಾಗಿ ಜನಪ್ರಿಯವಾಯಿತು. ಪ್ರಾಥಮಿಕ ಆರೋಗ್ಯ ಪಾಲನೆಗೆ ಸಂಬಂಧಪಟ್ಟಂತೆ 1978ರ ಆಲ್ಮಾ ಆಟಾ ಘೋಷಣೆಯು ಒಂದು ದೊಡ್ಡ ಮುನ್ನಡೆಯಾಗಿತ್ತಾದರೂ ಸಮುದಾಯ ಆರೋಗ್ಯದ ಸವಾಲು ಅದಕ್ಕಿಂತ ಬಹಳ ದೊಡ್ಡ ಸವಾಲಾಗಿತ್ತು; ಭಾರತೀಯ ಉಪಖಂಡದಲ್ಲಿ ಅನೇಕ ವರದಿಗಳು ಹಾಗೂ ಸಮಷ್ಠಿ ಪ್ರಯತ್ನಗಳು ಬೃಹತ್ತಾದ ಮತ್ತು ಸಮಗ್ರವಾದ ಈ ಸವಾಲನ್ನು ಎತ್ತಿಕೊಂಡು ಅದಕ್ಕೊಂದು ಸ್ಥೂಲ ರೂಪುರೇಶೆಯನ್ನು ಕೊಡುವುದಕ್ಕೆ ಪ್ರಯತ್ನಿಸಿದವು.

1981ರಲ್ಲಿ ಬಂದ "ಎಲ್ಲರಿಗೂ ಆರೋಗ್ಯ ಮತ್ತು ಪರ್ಯಾಯ ವ್ಯೂಹತಂತ್ರ ಕುರಿತ ಐಸಿಎಸ್ಎಸ್ಆರ್/ಐಸಿಎಂಆರ್ ತಜ್ಞರ ಗುಂಪು" (ICSSR/ICMR Expert Group on Health for All and Alternative Strategy) ಹಾಗೂ 1982ರ "ರಾಷ್ಟ್ರೀಯ ಆರೋಗ್ಯ ನೀತಿ"ಗಳು (1946ರ ಭೋರೆ ವರದಿಯ ನಂತರದಲ್ಲಿ ಆರೋಗ್ಯ ಕುರಿತಂತೆ ಮೊದಲ ಬಾರಿಗೆ ಬಂದ ಸಮಗ್ರ ವರದಿ ಇದಾಗಿದೆ) ಹೊಸ ದಿಕ್ಕುಗಳನ್ನು ಹಾಗೂ ಹೊಸ ಕಾಳಜಿಗಳನ್ನು ಸ್ಥೂಲವಾಗಿ ಚಿತ್ರಿಸಿಕೊಟ್ಟವು.

ಸ್ವಯಂಆಚ್ಛೆಯಿಂದ ಸಮುದಾಯ ಆರೋಗ್ಯ ಕೆಲಸದಲ್ಲಿ ತೊಡಗಿರುವ ಕಾರ್ಯಕರ್ತರನ್ನು ಮತ್ತು ಈ ನಿಟ್ಟಿನಲ್ಲಿ ಹೊಸ ಆಲೋಚನೆ ಮಾಡುವವರನ್ನು ಒಳಗೊಂಡ ಜಾಲವು ನಿಧಾನವಾಗಿ ಹೆಚ್ಚಾಗುತ್ತಿರುವಾಗಲೇ ಸರ್ಕಾರವು ರೂಪಿಸುತ್ತಿದ್ದ ನೀತಿಗಳು, ಅದರ ಗ್ರಹಿಕೆಗಳೂ ಕೂಡ ಅದೇ ದಿಕ್ಕಿನತ್ತ ಸಾಗುತ್ತಿದ್ದವು.

ಎಲ್ಲರಿಗೂ ಆರೋಗ್ಯ: ಒಂದು ಪರ್ಯಾಯ ವ್ಯೂಹತಂತ್ರ (ಐಸಿಎಸ್ಆರ್/ಐಸಿಎಂಆರ್ ಪರಿಹಾರ)

(Asian Health For All: An Alternative Strategy - ICSSR/ICMR Perscription)

ಪ್ರಜಾತಾಂತ್ರಿಕ, ವಿಕೇಂದ್ರೀಕೃತ ಹಾಗೂ ಜನಪಾಲ್ಗೊಳ್ಳುವಿಕೆಯ ವ್ಯವಸ್ಥೆ

ನಾವು ಮುಂದಿಡುವ ಐದನೇ ಬಹುಮುಖ್ಯ ಪ್ರಸ್ತಾವ ಏನೆಂದರೆ ಪ್ರಸ್ತುತವಾಗಿ ಅಸ್ತಿತ್ವದಲ್ಲಿರುವ ಅತ್ಯಂತ ಹೆಚ್ಚು ಕೇಂದ್ರೀಕೃತವಾದ ಹಾಗೂ ಬಹಳ ಅಧಿಕಾರಶಾಹಿತನದಿಂದ ಕೂಡಿದ ವ್ಯವಸ್ಥೆಯು ಜನರನ್ನು ಕೇವಲ ಆರೋಗ್ಯ ಸೇವೆಗಳನ್ನು ಒದಗಿಸಬೇಕಿರುವ ಹೊರಗಿನ ವಸ್ತುಗಳನ್ನಾಗಿ ಮಾತ್ರ ಪರಿಗಣಿಸುತ್ತದೆಯೇ ಹೊರತು ಅವರ ಪಾಲ್ಗೊಳ್ಳುವಿಕೆಯನ್ನು ಬಯಸುವುದಿಲ್ಲ; ಈ ವ್ಯವಸ್ಥೆಯನ್ನು ತೊಡೆದುಹಾಕಿ ಅದರ ಜಾಗದಲ್ಲಿ ಜನರನ್ನು ಆರೋಗ್ಯ ವ್ಯವಸ್ಥೆಯ ಒಳಗಿನವರನ್ನಾಗಿ ಕಾಣುವ, ಹೆಚ್ಚು ಪ್ರಜಾತಾಂತ್ರಿಕವಾದ, ವಿಕೇಂದ್ರೀಕೃತವಾದ ಮತ್ತು ಅವರ

ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸುವ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಬೇಕು. ಈ ಉದ್ದೇಶಕ್ಕಾಗಿ ಜಿಲ್ಲಾ ಆರೋಗ್ಯ ಕೇಂದ್ರವನ್ನೂ ಒಳಗೊಂಡಂತೆ ಕೆಳ ಹಂತದ ಎಲ್ಲಾ ಸಮ್ಮಿಳಿತ ಆರೋಗ್ಯ ಸೇವೆಗಳು ಪಂಚಾಯತ್ ರಾಜ್ ಸಂಸ್ಥೆಗಳ ಅಧೀನಕ್ಕೆ ಒಳಪಡುವಂತೆ ಮಾಡಬೇಕೆಂದು ನಾವು ಸಲಹೆ ಕೊಟ್ಟಿದ್ದೇವೆ. ಈ ನೀತಿಯ ಮೂಲಭೂತ ಧ್ಯೇಯೋದ್ದೇಶಗಳು ಏನಾಗಿರಬೇಕೆಂದರೆ:

- ಒಟ್ಟಾರೆ ಸಾಮಾಜಿಕ–ಆರ್ಥಿಕ–ರಾಜಕೀಯ ಪರಿವರ್ತನೆಗಾಗಿ ರೂಪುಗೊಳ್ಳುವ ಯೋಜನೆಗಳೊಂದಿಗೆ ಆರೋಗ್ಯ ವ್ಯವಸ್ಥೆಯ ಅಭಿವೃದ್ಧಿಯನ್ನೂ ಸಮ್ಮಿಳಿಸಬೇಕು;

- ಪ್ರತಿಯೊಬ್ಬ ವ್ಯಕ್ತಿಗೂ ಸಮರ್ಪಕವಾದ ಆಹಾರ ದೊರೆಯುವುದನ್ನು ಖಾತ್ರಿಗೊಳಿಸಬೇಕು; ಪ್ರತಿಯೊಬ್ಬ ವ್ಯಕ್ತಿಗೂ ಆರೋಗ್ಯಕ್ಕೆ ಅನುಕೂಲಕರವಾಗಿರುವಂತಹ ಪರಿಸರವನ್ನು ಹಾಗೂ ಅವಶ್ಯವಿದ್ದೆಡೆಯಲ್ಲೆಲ್ಲಾ ಸೋಂಕು ತಡೆಗಟ್ಟುವ ಪ್ರತಿರಕ್ಷಣೆಯನ್ನು ಒದಗಿಸಬೇಕು;

- ಪ್ರತಿಯೊಬ್ಬ ವ್ಯಕ್ತಿಯೂ ಪರಿಣಾಮಕಾರಿಯಾದ ಆರೋಗ್ಯಪೂರ್ಣ ಜೀವನವನ್ನು ಸಾಗಿಸುವುದಕ್ಕೆ ಹಾಗೂ ತನ್ನ ಕುಟುಂಬದ, ತನ್ನ ಸಮುದಾಯದ ಆರೋಗ್ಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ, ಅವುಗಳನ್ನು ಬಗೆಹರಿಸಿಕೊಳ್ಳುವಲ್ಲಿ ತಾನು ಅರ್ಥಪೂರ್ಣವಾಗಿ ಪಾಲ್ಗೊಳ್ಳುವುದಕ್ಕೆ ಸಮರ್ಥವಾಗುವ ಹಾಗೆ ಅವನಿಗೆ ಅವಶ್ಯ ಜ್ಞಾನವನ್ನು, ಕೌಶಲ್ಯಗಳನ್ನು ಹಾಗೂ ಮೌಲ್ಯಗಳನ್ನು ತುಂಬುವಂತಹ ಸಮರ್ಪಕ ಕಾರ್ಯಕ್ರಮವೊಂದನ್ನು ಕಂಡುಕೊಳ್ಳಬೇಕು;

- ಪ್ರಸ್ತುತವಾಗಿ ಅಸ್ತಿತ್ವದಲ್ಲಿರುವ ಆರೋಗ್ಯ ಪಾಲನಾ ಮಾದರಿಯನ್ನು ತೊಡೆದುಹಾಕಿ ಅದರ ಜಾಗದಲ್ಲಿ ಪರ್ಯಾಯವಾಗಿ ಹೊಸ ಮಾದರಿಯೊಂದನ್ನು ಅನುಷ್ಠಾನಗೊಳಿಸಬೇಕು; ಈ ಹೊಸ ಮಾದರಿಯು:

    - ಜನರ ಸಂಪ್ರದಾಯ ಮತ್ತು ಸಂಸ್ಕೃತಿಗಳಲ್ಲಿ ಅಡಕವಾಗಿರುವ ಅತ್ಯುತ್ತಮ ಅಂಶಗಳನ್ನು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದೊಂದಿಗೆ ಬೆಸೆಯುವಂತಿರಬೇಕು;

    - ಉತ್ತೇಜನಾಕಾರಿ, ಪ್ರತಿಬಂಧಾತ್ಮಕ ಹಾಗೂ ಗುಣಕಾರಿ ಕಾರ್ಯನಿರ್ವಹಣೆಗಳನ್ನು ಮೇಳೈಸಬೇಕು;

    - ಪ್ರಜಾತಾಂತ್ರಿಕವೂ, ವಿಕೇಂದ್ರೀಕೃತವೂ ಆಗಿರುವುದಲ್ಲದೇ ಜನರು ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸಬೇಕು;

    - ಜನಮುಖಿಯಾಗಿರಬೇಕು, ಅಂದರೆ ಪ್ರತಿಯೊಬ್ಬ ವ್ಯಕ್ತಿಗೂ ಸಮರ್ಪಕ ಆರೋಗ್ಯ ಪಾಲನೆಯನ್ನು ಒದಗಿಸಬೇಕು ಹಾಗೂ ದುರ್ಬಲ ವರ್ಗಗಳಿಗೆ ವಿಶೇಷ ಆದ್ಯತೆ ಕೊಡಬೇಕು.

    - ದುಬಾರಿಯಾಗಿರಬಾರದು; ಹಾಗೂ

    - ಸಮುದಾಯದೊಳಗೆ ಆಳವಾಗಿ ಬೇರೂರಿರಬೇಕು; ಜನರಿಗೆ ಅಗತ್ಯವಿರುವ ಆರೋಗ್ಯ ಪಾಲನಾ ಸೇವೆಗಳನ್ನು ಒದಗಿಸುವಲ್ಲಿ ಜನರೂ ಪಾಲ್ಗೊಳ್ಳುವಂತೆ ಮಾಡುವ ಉದ್ದೇಶವನ್ನು ಹೊಂದಿರಬೇಕು ಹಾಗೂ ಜನರು ತಮ್ಮ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುವುದಕ್ಕೆ ಶಕ್ತರಾಗುವಂತೆ ಅವರ ಸಾಮರ್ಥ್ಯವನ್ನು ಹೆಚ್ಚಿಸಬೇಕು.

ಎಲ್ಲರಿಗೂ ಆರೋಗ್ಯ: ಒಂದು ಪರ್ಯಾಯ ವ್ಯೂಹತಂತ್ರ
(ಐಸಿಎಸ್‌ಆರ್ ಮತ್ತು ಐಸಿಎಂಆರ್ 1981)

ರಾಷ್ಟ್ರೀಯ ಆರೋಗ್ಯ ನೀತಿ (1982)

ಆರೋಗ್ಯ ಕ್ಷೇತ್ರದಲ್ಲಿ ಇಡೀ ದೇಶದಾದ್ಯಂತ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ ಮತ್ತು ಸ್ವಯಂಸೇವಾ ಸಂಘಟನೆಗಳು ಕಾರ್ಯನಿರತವಾಗಿವೆ. ಅವುಗಳ ಸೇವೆ ಮತ್ತು ಬೆಂಬಲಗಳನ್ನು ಸದುಪಯೋಗಪಡಿಸಿಕೊಳ್ಳುವುದಲ್ಲದೇ ಈ ಸಂಘಟನೆಗಳ ಪ್ರಯತ್ನಗಳನ್ನು ಸರ್ಕಾರ ಹಾಕುತ್ತಿರುವ ಪ್ರಯತ್ನಗಳೊಂದಿಗೆ ಒಂದು ಏಕೀಕೃತ ಮಾದರಿಯಲ್ಲಿ ಸಮ್ಮಿಳಿಸಿ, ಸಮನ್ವಯಗೊಳಿಸಿ ಜೋಡಿಸಬೇಕು.

ಪ್ರಾಥಮಿಕ ಆರೋಗ್ಯ ಪಾಲನಾ ಕಾರ್ಯಧೋರಣೆಯು ಪರಿಣಾಮಕಾರಿಯಾಗಬೇಕೆಂದರೆ ಜ್ಞಾನ, ಸರಳ ಕೌಶಲ್ಯ ಮತ್ತು ತಂತ್ರಜ್ಞಾನಗಳು ಸಮುದಾಯದಿಂದ ಆಯ್ಕೆಯಾದ ಹಾಗೂ ಸಮುದಾಯದ ವಿಶ್ವಾಸವನ್ನು ಗೆದ್ದ ಆರೋಗ್ಯ ಸ್ವಯಂಸೇವಕರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ವರ್ಗಾವಣೆಯಾಗಬೇಕಾಗುತ್ತದೆ. ಸಮುದಾಯದಿಂದ ಆಯ್ಕೆಗೊಂಡ ಮುಂಚೂಣಿ ಆರೋಗ್ಯ ಕಾರ್ಯಕರ್ತರ ಕಾರ್ಯನಿರ್ವಹಣೆಯು ವೈದ್ಯಕೀಯ ಮತ್ತು ಆರೋಗ್ಯ ಜ್ಞಾನವನ್ನು ಆಚರಣಾತ್ಮಕ ಕ್ರಿಯೆಯಾಗಿ ಪರಿವರ್ತನೆ ಮಾಡುವ ನಿರ್ಧಿಷ್ಟ ಕಾರ್ಯಯೋಜನೆಯೊಂದಿಗೆ ಬೆಸೆಯಬೇಕು. ಹೀಗೆ ಜ್ಞಾನವನ್ನು ಆಚರಣಾತ್ಮಕ ಕ್ರಿಯೆಯಾಗಿ ಪರಿವರ್ತನೆ ಮಾಡುವುದಕ್ಕೆ ಅಲ್ಪಕಾಲದ ತರಬೇತಿ ಪಡೆದುಕೊಂಡಿರುವ ವ್ಯಕ್ತಿಗಳು ಸುಲಭವಾಗಿ ನಿರ್ವಹಿಸಲು ಸಾಧ್ಯವಿರುವಂತಹ ಬಹಳ ಸರಳ ಹಾಗೂ ಕಡಿಮೆ ಖರ್ಚಿನ ವೈದ್ಯಕೀಯ ಮಧ್ಯಪ್ರವೇಶಿಕೆಗಳನ್ನು ಬಳಸಿಕೊಳ್ಳಬೇಕು. ಈ ಆರೋಗ್ಯ ಮಾರ್ಗದರ್ಶಿಗಳಿಗೆ/ಕಾರ್ಯಕರ್ತರಿಗೆ ಕೊಡುವ ತರಬೇತಿಯ ಗುಣಮಟ್ಟ ಒಟ್ಟಾರೆ ಈ ಕಾರ್ಯಧೋರಣೆಯ ಯಶಸ್ಸಿನಲ್ಲಿ ಬಹಳ ಪ್ರಮುಖ ಪಾತ್ರ ನಿರ್ವಹಿಸುತ್ತದೆ.

ವಿಕೇಂದ್ರೀಕೃತ ಪ್ರಾಥಮಿಕ ಆರೋಗ್ಯ ಪಾಲನಾ ವ್ಯವಸ್ಥೆಯ ಯಶಸ್ಸು ಬಹಳ ಮುಖ್ಯವಾಗಿ ವ್ಯಕ್ತಿಗತ ಸ್ವಾವಲಂಬನೆಯನ್ನು ವ್ಯವಸ್ಥಿತವಾಗಿ ಸಂಘಟಿತಗೊಳಿಸುವುದರ ಮೇಲೆ ಹಾಗೂ ಸಮುದಾಯದ ಪರಿಣಾಮಕಾರಿ ಪಾಲ್ಗೊಳ್ಳುವಿಕೆಯ ಮೇಲೆ ಅವಲಂಬಿತವಾಗಿರುತ್ತದೆ; ಆರೋಗ್ಯ ಸೇವೆಗಳ ದ್ವಿತೀಯ ಮತ್ತು ತೃತೀಯ ಹಂತಗಳು ಅಗತ್ಯ ಸೌಕರ್ಯಗಳನ್ನು ಹಾಗೂ ತಾಂತ್ರಿಕ ಬೆಂಬಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಆರೋಗ್ಯ ಪಾಲನಾ ವ್ಯವಸ್ಥೆಯ ಬೆನ್ನಿಗೆ ಎಷ್ಟರಮಟ್ಟಿಗೆ ಸಂಘಟಿತವಾಗಿ ನಿಲ್ಲುತ್ತವೆ ಎಂಬುದರ ಮೇಲೆ ವಿಕೇಂದ್ರೀಕೃತ ಪ್ರಾಥಮಿಕ ಆರೋಗ್ಯ ಪಾಲನಾ ವ್ಯವಸ್ಥೆಯ ಯಶಸ್ಸು ಅವಲಂಬಿತವಾಗಿರುತ್ತದೆ.

(ರಾಷ್ಟ್ರೀಯ ಆರೋಗ್ಯ ನೀತಿ –1982
ಭಾರತ ಸರ್ಕಾರ, ನವದೆಹಲಿ)

1983ರ ಹೊತ್ತಿಗೆ, ಹೊಸ ಪರಿವರ್ತನೆಗಾಗಿ ತುಡಿಯುವ ಬಿಡಿ ಬಿಡಿ ವ್ಯಕ್ತಿಗಳ ಮಟ್ಟದಲ್ಲಿ ಹಾಗೂ ಅದೇ ದೃಷ್ಟಿಕೋನ ಹೊಂದಿರುವ ಹಲವು ಜನರನ್ನೊಳಗೊಂಡ ಸಾಮೂಹಿಕ ಜಾಲಗಳ ಮಟ್ಟದಲ್ಲಿ ಹಲವಾರು ವ್ಯಕ್ತಿಗಳು, ಸಮಾಜಸೇವಾ ತಂಡಗಳು 'ಸಮುದಾಯ ಆರೋಗ್ಯ ದೃಷ್ಟಿಕೋನ'ವನ್ನು ಸಮರ್ಥಿಸಿ ಬೆಂಬಲಕ್ಕೆ ನಿಂತವು; ಆದರೆ, ಭಾರತದ ಅತ್ಯಂತ ಬೃಹತ್ತಾದ ಆರೋಗ್ಯ ಜಾಲದ (ಪ್ರಾಯಶಃ ಇದು ವಿಶ್ವದಲ್ಲೇ ಅತ್ಯಂತ ದೊಡ್ಡದಾದ ಆರೋಗ್ಯ ಜಾಲವಾಗಿದೆ) ಪರಿವರ್ತನೆಯ ಈ ನಿಟ್ಟಿನಲ್ಲಿ ಒಂದು ಮಹತ್ವಪೂರ್ಣ ಮೈಲಿಗಲ್ಲಾಗಿದೆ. ಸಮುದಾಯ ಆರೋಗ್ಯದ ಮುಂದಿರುವ ಸವಾಲುಗಳಿಗನುಗುಣವಾಗಿ ತನ್ನ ಸದಸ್ಯ ಆಸ್ಪತ್ರೆಗಳಿಗೆ ಹೊಸ ಮಾರ್ಗದರ್ಶನ ನೀಡುವ ಉದ್ದೇಶದಿಂದ 'ಭಾರತೀಯ ಕೆಥೋಲಿಕ್ ಆರೋಗ್ಯ ಸಂಸ್ಥೆ'ಯು (The Catholic Health Association of India - CHAI) 1982ರಲ್ಲಿ ಸಮುದಾಯ ಆರೋಗ್ಯ ಇಲಾಖೆಯನ್ನು ಸ್ಥಾಪಿಸಿತು. ಅಷ್ಟುಹೊತ್ತಿಗಾಗಲೇ ಕೋರ್ ಉನಮ್ ಸ್ಫೂರ್ತಿ ಇತ್ತಾದರೂ ಇದು ಸಮುದಾಯ ಆರೋಗ್ಯ ಚಳವಳಿಗೆ 'ಹೊಸ ಸೇರ್ಪಡೆ'ಯಾಗಿತ್ತು. ಹಾಗಾಗಿ ಇದು ಸಮುದಾಯ ಆರೋಗ್ಯ ಚಳವಳಿಯು ಸಾಗಬೇಕಿರುವ ಹಾದಿಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ 1983ರ ಮೇ ತಿಂಗಳನಲ್ಲಿ ಪ್ರಾರಂಭವಾದ ಚರ್ಚೆಗಳಲ್ಲಿ ಸಮುದಾಯ ಆರೋಗ್ಯಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದ 'ಭಾರತದ ಸ್ವಯಂ ಆರೋಗ್ಯ ಸಂಸ್ಥೆ' (VHAI), 'ಭಾರತದ ಕ್ರಿಶ್ಚಿಯನ್ ವೈದ್ಯಕೀಯ ಸಂಸ್ಥೆ' (CMAI), 'ವೈದ್ಯಕೀಯ ಸ್ನೇಹಿತರ ಬಳಗ' (MFC), ಎಸಿಹೆಚ್ಎಎನ್, ಐಎಸ್ಐ, ಎಸ್ಈಎಆರ್ಸಿಹೆಚ್ ಹಾಗೂ ಮತ್ತಿತರ ಸಂಘಟನೆಗಳ ಸಮಾನ ಮನಸ್ಕ ಸಹಭಾಗಿಗಳನ್ನು ಒಟ್ಟುಗೂಡಿಸಿತು. ಒಂದು ದಶಕಕ್ಕೂ ಹೆಚ್ಚು ಅವಧಿಯ ಪ್ರಯೋಗದ ನಂತರದಲ್ಲಿ ಮೊದಲ ಬಾರಿಗೆ ಒಂದು ಸಂಸ್ಥೆಯು ಸಮುದಾಯ ಆರೋಗ್ಯದ ವ್ಯಾಖ್ಯಾನ ಮತ್ತು ಮುನ್ನೋಟಗಳನ್ನು ರೂಪಿಸುವುದಕ್ಕಾಗಿ ಪ್ರಯತ್ನ ನಡೆಸಿತ್ತು. ಇದು ಕೇವಲ ಒಂದು ಮುನ್ನೋಟ ಮಾತ್ರವಾಗಿರಲಿಲ್ಲ. ಆರೋಗ್ಯ ಕಾರ್ಯಕರ್ತರು ಒತ್ತಟ್ಟಿಗಿರಲಿ, ಪಾದ್ರಿ ಮತ್ತು ನನ್ಗಳ ಒಂದು ಚಿಕ್ಕ ತಂಡವೇ ಸಮುದಾಯ ಆರೋಗ್ಯವನ್ನು ಒಂದು ಶ್ರದ್ಧೆಯ ವಿಚಾರವನ್ನಾಗಿ ಮಾಡಿತು; ಪ್ರವಚನದ ಮೂಲಕ, ಉಪನ್ಯಾಸದ ಮೂಲಕ ಶುಭ ಸುದ್ದಿಯನ್ನು ಇಡೀ ದೇಶದಾದ್ಯಂತ ಹರಡಲಾರಂಭಿಸಿತು; ತರಬೇತಿ ಕಾರ್ಯಕ್ರಮಗಳು, ಸಮುದಾಯ ಆರೋಗ್ಯ ತಂಡ ತರಬೇತಿಗಳು (Community Health Team Training - CHTT), ಸಮುದಾಯ ಆರೋಗ್ಯ ಸಂಘಟನೆ, ಯೋಜನೆ ಮತ್ತು ನಿರ್ವಹಣೆಗಳು (Community Health Organisation, Planning and Management - CHOPAM) ಮುಂತಾದವುಗಳ ಮೂಲಕ

ವಾರಣಾಸಿ, ರಾಜ್‌ಕೋಟ್, ಅಜ್ಮೀರ್, ಮಂಡ್ಲಾ, ಮಂಡಾ ... ಹೀಗೆ ನಿಧಾನವಾಗಿ ಇದು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ವ್ಯಾಪಿಸಲಾರಂಭಿಸಿತು.

ಸಮುದಾಯ ಆರೋಗ್ಯ ಕಾರ್ಯಕ್ರಮ:
ಭಾರತ ಕೆಥೋಲಿಕ್ ಆಸ್ಪತ್ರೆ ಸಂಸ್ಥೆಯ (CHAI) ದೃಷ್ಟಿಕೋನ ಹಾಗೂ ಸಿದ್ಧಾಂತ

'ಕ್ರಿ.ಶ.2000ದ ಹೊತ್ತಿಗೆ ಸರ್ವರಿಗೂ ಆರೋಗ್ಯ' ಎಂಬ ವಿಶ್ವ ಆರೋಗ್ಯ ಸಂಸ್ಥೆಯ ಕರೆಯ ಬೆಳಕಿನಲ್ಲಿ ಭಾರತ ಸರ್ಕಾರದ ಪರಿಷ್ಕೃತ ರಾಷ್ಟ್ರೀಯ ಆರೋಗ್ಯ ನೀತಿ; ಹಾಗೂ ಪ್ರಾಥಮಿಕ ಆರೋಗ್ಯ ಪಾಲನೆಯ ವಿಚಾರಕ್ಕೆ ಸಂಬಂಧಿಸಿದಂತೆ ಆರೋಗ್ಯ ಸೇವೆಗಳ ಹೊಸ ದೃಷ್ಟಿಕೋನ ಕುರಿತು ಪಾಂಟಿಫಿಕಲ್ ಕೌನ್ಸಿಲ್ ಕೋರ್ ಉನಮ್ ಹೊರತಂದ ದಸ್ತಾವೇಜಿಗೆ ಅನುಗುಣವಾಗಿ ಚರ್ಚು ಮಾಡಿದ ಉಪನ್ಯಾಸ ಮತ್ತು ಇತ್ತೀಚಿನ ಪೋಪ್‌ಗಳು ನೀಡಿದ ಹೇಳಿಕೆ ಮತ್ತು ಭಾರತ ಕೆಥೋಲಿಕ್ ಆಸ್ಪತ್ರೆ ಸಂಸ್ಥೆಯ ಸಮುದಾಯ ಆರೋಗ್ಯ ಇಲಾಖೆಯಾದ CBCI ಈ ಕೆಳಗಿನವುಗಳನ್ನು ಎತ್ತಿಹಿಡಿಯುತ್ತವೆ:

1. ಆರೋಗ್ಯ ಎಂದರೆ ಕೇವಲ ರೋಗವಿಲ್ಲದಿರುವುದು ಮಾತ್ರವಲ್ಲ; ಬದಲಿಗೆ ಅದು ವ್ಯಕ್ತಿಗಳ, ಕುಟುಂಬಗಳ ಹಾಗೂ ಒಟ್ಟಾರೆಯಾಗಿ ಸಮುದಾಯದ ಒಟ್ಟಂದದ ಯೋಗಕ್ಷೇಮವಾಗಿರುತ್ತದೆ. ಇದು ಸಾಧ್ಯವಾಗಬೇಕೆಂದರೆ ಜನರ ಮತ್ತು ಸಮುದಾಯದ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವಂತಹ, ಸಾಮಾಜಿಕ ಯೋಗಕ್ಷೇಮವನ್ನು ಖಾತ್ರಿಪಡಿಸುವಂತಹ ಹಾಗೂ ಮಾನಸಿಕ ಮತ್ತು ಆಧ್ಯಾತ್ಮಿಕ ಅಗತ್ಯಗಳನ್ನು ಈಡೇರಿಸುವಂತಹ ಪರಿಸರ ಇರಬೇಕಾದದ್ದು ಅವಶ್ಯವಾಗಿರುತ್ತದೆ. ಅದಕ್ಕನುಗುಣವಾಗಿ, ಸಮುದಾಯವೊಂದರ ಆರೋಗ್ಯವನ್ನು ಅಳೆಯುವುದಕ್ಕೆ ಹೊಸ ಮಾನದಂಡಗಳನ್ನು ಅಳವಡಿಸಬೇಕಿರುವ ಅವಶ್ಯಕತೆಯನ್ನೂ ಪರಿಗಣಿಸಬೇಕಾಗುತ್ತದೆ; ಶಿಸು ಮರಣ ಪ್ರಮಾಣ, ಸರಾಸರಿ ಜೀವಿತಾವಧಿಯ ದರ ಮುಂತಾದ ಪಾರಂಪರಿಕ ಮಾನದಂಡಗಳ ಜೊತೆಗೆ ತೀರ್ಮಾನ ರೂಪಣೆಯಲ್ಲಿ ಸಮುದಾಯದ ಜನರ ಸಕ್ರಿಯ ಪಾಲ್ಗೊಳ್ಳುವಿಕೆ, ಸಮುದಾಯದಲ್ಲಿ ಸಾಮಾಜಿಕ ಪಿಡುಗುಗಳಿಲ್ಲದಿರುವುದು, ಜನರ ಸಂಘಟನಾ ಸಾಮರ್ಥ್ಯ, ಆರೋಗ್ಯ ಮತ್ತು ಅಭಿವೃದ್ಧಿಯಲ್ಲಿ ಮಹಿಳೆಯರು ಮತ್ತು ಯುವಕ/ಯುವತಿಯರ ಪಾತ್ರ ಇತ್ಯಾದಿ ಮಾನದಂಡಗಳನ್ನೂ ಅಳವಡಿಸಿಕೊಳ್ಳಬೇಕಾಗುತ್ತದೆ.

2. ಸಮುದಾಯ ಆರೋಗ್ಯ ಎಂದರೆ ಜನರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಸಾಮೂಹಿಕವಾಗಿ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವಂತೆ ಹಾಗೂ ಉತ್ತಮ ಆರೋಗ್ಯ ಪಡೆಯುವುದು ತಮ್ಮ ಹಕ್ಕು ಎಂಬುದಾಗಿ ಒತ್ತಾಯಮಾಡುವಂತೆ ಅವರನ್ನು ಶಕ್ತರನ್ನಾಗಿ ಮಾಡುವ ಪ್ರಕ್ರಿಯೆ ಎಂದು ಅರ್ಥಮಾಡಿಕೊಳ್ಳಬೇಕು. ಹೀಗೆ, ಸಮುದಾಯ ಆರೋಗ್ಯ ಎಂಬುದು ಅನಾರೋಗ್ಯವನ್ನು ಹಂಚುವ ಹಾಗೂ ಆದಾಯವನ್ನು ಸೃಜಿಸುವ ಕಾರ್ಯಕ್ರಮಗಳಷ್ಟೇ ಅಲ್ಲದೇ ಅದರಾಚೆಗಿರುವ ವಿಚಾರವಾಗಿದೆ.

3. ಬಹಳಷ್ಟು ವಿಶಾಲವಾಗಿರುವ, ವೈವಿಧ್ಯಮಯವಾಗಿರುವ, ದೇಶದ ಒಟ್ಟು ಜನಸಂಖ್ಯೆಯ ಶೇಕಡಾ 80ರಷ್ಟು ಭಾಗ ಗ್ರಾಮೀಣ ಪ್ರದೇಶದಲ್ಲೇ ವಾಸಿಸುವ ಹಾಗೂ ದೇಶದ ಶೇಕಡಾ 90ರಷ್ಟು ಆರೋಗ್ಯ ಪಾಲನಾ ಸೇವೆಗಳು ಅಲ್ಪಸಂಖ್ಯೆಯ ನಗರವಾಸಿಗಳಿಗೆ ಹೋಗುತ್ತಿರುವ ಭಾರತದಂತಹ ದೇಶವೊಂದರಲ್ಲಿ ಇಡೀ ಆರೋಗ್ಯ ಪಾಲನಾ ವ್ಯವಸ್ಥೆಯ ಬಗ್ಗೆ ಹೊಸ ದೃಷ್ಟಿಕೋನ ಬೆಳೆಸಿಕೊಳ್ಳಬೇಕಿರುವುದು ಹಾಗೂ ಅದರ ಬಗ್ಗೆ ಮರುಚಿಂತನೆ ನಡೆಸಬೇಕಿರುವುದು ಇಂದಿನ ತುರ್ತು ಅಗತ್ಯವಾಗಿದೆ.

4. ಬಹುತೇಕವಾಗಿ ರೋಗವನ್ನು ಗುಣಪಡಿಸುವ ಅಂಶಗಳ ಮೇಲೆಯೇ ಪ್ರಧಾನ ಒತ್ತುಕೊಡುತ್ತಿರುವ ಇಂದಿನ ವೈದ್ಯಕೀಯ ವ್ಯವಸ್ಥೆಯು ಮುಖ್ಯವಾಗಿ ಲಾಭಗಳಿಕೆಯೇ ಪ್ರಧಾನ ಉದ್ದೇಶವಾಗಿರುವಂಥ ವ್ಯಾಪಾರಿ ದಾರಿ ಹಿಡಿಯುವ ಸ್ವಭಾವದ್ದಾಗಿದೆ. ಈ ದೇಶದ ವಿಶಾಲ ಜನಸಮೂಹಗಳಿಗೆ ಯಾವ ರೀತಿಯ ಆರೋಗ್ಯ ಸೌಲಭ್ಯಗಳ ಅವಶ್ಯಕತೆಯಿದೆ ಎಂಬುದರ ಆಧಾರದಲ್ಲಿ ಇದು ಕಾರ್ಯನಿರ್ವಹಿಸುವುದಿಲ್ಲ; ಬದಲಿಗೆ ಜನರಿಗೆ 'ಆರೋಗ್ಯವನ್ನು ಮಾರಾಟ ಮಾಡುವುದ'ರ ಮೇಲೆಯೇ ಹೆಚ್ಚು ಗಮನ ಕೇಂದ್ರೀಕರಿಸುತ್ತದೆ. ಸಾಮಾಜಿಕ ಪಿಡುಗು ಮತ್ತು ಅಮತೋಲನಗಳೇ ರೋಗಗಳ ಉತ್ಪತ್ತಿಗಿರುವ ಮೂಲ ಕಾರಣಗಳಾಗಿವೆ; ಅವುಗಳ ಸರಿಪಡಿಕೆಗೆ ರಾಜಕೀಯ ಪರಿಹಾರವೇ ಉತ್ತರವಾಗಿದೆ; ತಮ್ಮ ನೈಜ ಅಗತ್ಯಗಳ ಬಗ್ಗೆ, ತಮ್ಮ ಹಕ್ಕುಗಳ ಬಗ್ಗೆ, ತಮ್ಮ ಜವಾಬ್ದಾರಿಗಳ ಬಗ್ಗೆ, ತಮ್ಮ ಸುತ್ತಮುತ್ತಲು ಲಭ್ಯವಿರುವ ಸಂಪನ್ಮೂಲಗಳ ಬಗ್ಗೆ ಜನರಲ್ಲಿ ಅರಿವು

ಮೂಡಿಸುವ ಹಾಗೂ ಸೂಕ್ತ ಕ್ರಮಕ್ಕಾಗಿ ಅವರು ಸಂಘಟಿತರಾಗುವಂತೆ ಮಾಡುವ ಪ್ರಕ್ರಿಯೆಯಾಗಿ ಈ ರಾಜಕೀಯ ಪರಿಹಾರವನ್ನು ಅರ್ಥಮಾಡಿಕೊಳ್ಳಬೇಕು. ಕೇವಲ ಈ ಪ್ರಕ್ರಿಯೆಯ ಮೂಲಕ ಮಾತ್ರವೇ ಭಾರತದ ವಿಶಾಲ ಜನಸಮೂಹಕ್ಕೆ ಆರೋಗ್ಯ ಎಂಬುದು ಒಂದು ವಾಸ್ತವವಾಗುವುದಕ್ಕೆ ಸಾಧ್ಯ.

ನಮ್ಮ ಆಯ್ಕೆ

ಈ ದೃಷ್ಟಿಕೋನ ಮತ್ತು ಸಿದ್ಧಾಂತಗಳ ಬೆಳಕಿನಲ್ಲಿ ನಾವು ಶೋಷಿತ, ಅಸಂಘಟಿತ ಜನಸಮೂಹಗಳೇ, ಅದರಲ್ಲೂ ನಿರ್ದಿಷ್ಟವಾಗಿ ಗ್ರಾಮೀಣ ಪ್ರದೇಶದಲ್ಲಿ ಬದುಕುತ್ತಿರುವ ಬಡವರೇ, ನಮ್ಮ ಗುರಿಯಾಗಿರುತ್ತಾರೆ. ದೇಶದಲ್ಲಿನ ಆರೋಗ್ಯ ಸಂಸ್ಥೆಗಳ ಮೂಲಕ, ಅದರಲ್ಲೂ ವಿಶೇಷವಾಗಿ ಭಾರತ ಕೆಥೋಲಿಕ್ ಆರೋಗ್ಯ ಸಂಸ್ಥೆಯ (CHAI) ಸದಸ್ಯ ಸಂಘಟನೆಗಳ ಮೂಲಕ ಹಾಗೂ ಜನಮುಖಿ ಆರೋಗ್ಯ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇನ್ನಿತರ ಬಿಡಿ ಬಿಡಿ ವ್ಯಕ್ತಿಗಳು ಮತ್ತು ಗುಂಪುಗಳ ಮೂಲಕ ಈ ಜನಸಮೂಹಗಳನ್ನು ತಲುಪುವುದಕ್ಕೆ ನಾವು ಉದ್ದೇಶಿಸಿದ್ದೇವೆ; ಆ ಮೂಲಕ ಹೆಚ್ಚೆಚ್ಚು ಜನರಿಗೆ ಆರೋಗ್ಯವನ್ನು ಒದಗಿಸುವ ನಮ್ಮ ಧ್ಯೇಯವನ್ನು ವಾಸ್ತವಕ್ಕಿಳಿಸುವುದಕ್ಕೆ ಪ್ರಯತ್ನಿಸುತ್ತೇವೆ. ಈ ಪ್ರಕ್ರಿಯೆಯಲ್ಲಿ ಇದೇ ರೀತಿಯ ಸಿದ್ಧಾಂತ ಮತ್ತು ಧ್ಯೇಯೋದ್ದೇಶಗಳನ್ನು ಎತ್ತಿಹಿಡಿಯುವ ಇನ್ನಿತರ ಸ್ವಯಂ ಸೇವಾ ಸಂಘಟನೆಗಳೊಂದಿಗೆ ಕೈಜೋಡಿಸಿ ಸಹಯೋಗದೊಂದಿಗೆ ಮುನ್ನಡೆಯುವುದಕ್ಕೆ ಸಾಧ್ಯವಿದ್ದಷ್ಟೂ ಗರಿಷ್ಠ ಪ್ರಮಾಣದಲ್ಲಿ ಪ್ರಯತ್ನ ನಡೆಸುತ್ತೇವೆ.

1984-1986ರಿಂದ ತಮ್ಮ ವೈದ್ಯಕೀಯ ಶಿಕ್ಷಣ ಸಂಸ್ಥೆಯ ಮೂಲಸ್ಥಾನದಿಂದ ಆಚೆಗೆ ಹೊರನಡೆದ ಆರೋಗ್ಯ ವೃತ್ತಿಪರರ ಒಂದು ಸಣ್ಣ ತಂಡವು 'ಅಧ್ಯಯನ-ಪ್ರತಿಫಲನ-ಕ್ರಿಯೆ' ಎಂಬ ಪ್ರಯೋಗವನ್ನು ಪ್ರಾರಂಭಿಸಿತು; ಇದರ ಹಿಂದಿದ್ದ ಮುಖ್ಯ ಉದ್ದೇಶವೇನೆಂದರೆ ಸಮುದಾಯ ಆರೋಗ್ಯ ಚಳವಳಿಯನ್ನು ಅಧ್ಯಯನ ಮಾಡುವ ಪ್ರಯತ್ನ ನಡೆಸುವುದು, ಈ ಕ್ಷೇತ್ರದಲ್ಲಿ ಬಹಳ ಕೀಲಕ ಪಾತ್ರ ನಿರ್ವಹಿಸುತ್ತಿರುವ ಆರೋಗ್ಯ ಸೇವೆ ನೀಡುವವರೊಂದಿಗೆ ಪರಸ್ಪರ ಸಂವಾದ ನಡೆಸುವುದು, ಆಗತಾನೆ ಹುಟ್ಟಿ ಬರುತ್ತಿದ್ದ ಸಮುದಾಯ ಆರೋಗ್ಯ ಪರಿಕಲ್ಪನೆಯ ವಿವಿಧ ಆಯಾಮಗಳನ್ನು ಅರ್ಥಮಾಡಿಕೊಳ್ಳುವುದು ಹಾಗೂ ಈ ಚಳವಳಿಗೆ ಸೇರುತ್ತಿದ್ದ ಜನರಿಗೆ ಸಮುದಾಯ ಆರೋಗ್ಯದ ಪರಿಕಲ್ಪನೆಯನ್ನು ಒಟ್ಟಂದದಲ್ಲಿ ಅರ್ಥಮಾಡಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಕೆಲವು ಸೂತ್ರಾವಳಿಗಳನ್ನು ಮತ್ತು ಕಲ್ಪನೆಯನ್ನು ಕಾರ್ಯಗತಗೊಳಿಸುವ ಸ್ಥೂಲವಿವರಣಾತ್ಮಕ ಚೌಕಟ್ಟನ್ನು ಸಿದ್ಧಪಡಿಸುವುದು. ಅಷ್ಟೇ ಅಲ್ಲದೆ, ಸಮುದಾಯ ಚಳವಳಿಯ ವಿದ್ಯಮಾನವು 1980ರ ದಶಕ ಮಧ್ಯಭಾಗದಲ್ಲಾಗಲೇ ಗಳಿಸಿಕೊಂಡಿದ್ದ ಅಪಾರ ಅನುಭವ ಮತ್ತು ದೃಷ್ಟಿಕೋನಗಳ ಶ್ರೀಮಂತಿಕೆಯ ಮೇಲೆ ವಿಶ್ವಾಸವನ್ನು ಹೆಚ್ಚಿಸುವ ಒಂದು ಪ್ರಯತ್ನವೂ ಇದಾಗಿತ್ತು. ತಮ್ಮನ್ನು 'ಸಮುದಾಯ ಆರೋಗ್ಯ ಕೋಶ' (Community Health Cell - CHC) ಎಂದು ಕರೆದುಕೊಂಡ ಈ ಗುಂಪು ತದನಂತರದಲ್ಲಿ 'ಸಮುದಾಯ ಆರೋಗ್ಯ ಜಾಗ್ರತಿ, ಸಂಶೋಧನೆ ಮತ್ತು ಕ್ರಿಯೆಗಾಗಿನ ಸಂಸ್ಥೆ' (Society for Community Health Awareness, Research and Action - SCHARA) ಎಂಬ ಸಂಘಟನೆಯಾಗಿ ಪರಿವರ್ತನೆಗೊಂಡು ತಳಮಟ್ಟದ ಅನುಭವಗಳಿಂದ ಕಲಿಯುವುದನ್ನು ಮುಂದುವರೆಸಿತು; ಪರ್ಯಾಯ ಆರೋಗ್ಯ ನೀತಿ ಕುರಿತ ಚರ್ಚೆಯನ್ನು ತೀಕ್ಷ್ಣಗೊಳಿಸುವುದಕ್ಕಾಗಿ, ಪರ್ಯಾಯ ನೀತಿ ರೂಪಣೆಗಾಗಿ ವಿವಿಧ ವ್ಯಕ್ತಿ-ಸಂಘಸಂಸ್ಥೆಗಳ ನಡುವೆ ಒಂದು ಸಂಪರ್ಕಜಾಲವನ್ನು ಕಟ್ಟುತ್ತಾ ಸಾಗತೊಡಗಿತು; ತಳಮಟ್ಟದದಲ್ಲಿ ಹೊಸ ಮಾದರಿಯ ಚಟುವಟಿಗಳನ್ನು ಮಾಡುವುದಕ್ಕೋಸ್ಕರ ಒಟ್ಟಾರೆ ಮೇಲು ಸ್ಥರದ ನೀತಿಗಳಲ್ಲಿ ಬದಲಾವಣೆ ತರುವ ಪ್ರಕ್ರಿಯೆಯನ್ನು ವೇಗಗೊಳಿಸುವುದಕ್ಕೆ ಪ್ರಯತ್ನಿಸುತ್ತಾ ಮುನ್ಸಾಗಿತು. 'ಸಮುದಾಯ ಆರೋಗ್ಯ ಕೋಶ'ವು ತನ್ನ ಪರ್ಯಾಲೋಚನೆಗಳ ಅನೌಪಚಾರಿಕ ಸಂಗ್ರಹವಾದ 'ಕೆಂಪು ಪುಸ್ತಕ'ವನ್ನು (The Red Book) ತನ್ನೊಂದಿಗೆ ಒಡನಾಟದಲ್ಲಿದ್ದ ಎಲ್ಲಾ ಗುಂಪುಗಳ ನಡುವೆ ವಿಸ್ತೃತವಾಗಿ ಹಂಚಿಕೆ ಮಾಡಿತು; ಈ ಪುಸ್ತಕವು ಹೊಸ ಸಮುದಾಯ ಆರೋಗ್ಯ ಪರಿಕಲ್ಪನೆಯನ್ನು ಬಹಳ ಸೃಜನಶೀಲವಾಗಿ ವಿವರಿಸುವುದಕ್ಕೆ ಪ್ರಯತ್ನ ಮಾಡಿತು. ಇದು ಒಂದು ಸುಲಭದ ಕೆಲಸವಾಗಿರಲಿಲ್ಲ. ಏಕೆಂದರೆ, ಹೊಸದಾಗಿ ಹುಟ್ಟಿಕೊಳ್ಳುತ್ತಿದ್ದ ಪರ್ಯಾಯ ರೂಪಾವಳಿಯನ್ನು ಅರ್ಥಮಾಡಿಕೊಳ್ಳುವಾಗ ಅದರ ವಿರವಾದ ಅಂಶಗಳನ್ನು, ವೈವಿಧ್ಯತೆಗಳನ್ನು ಚರ್ಚಿಸುವುದರ ಬದಲಿಗೆ ಬಹುಮುಖ್ಯವಾದ ಅಂಶಗಳ ಮೇಲೆ ಪೂರ್ಣ ಗಮನಕೊಡಬೇಕಿರುವುದು ಬಹಳ ಮುಖ್ಯವಾಗಿರುತ್ತದೆ. 1970ರ ದಶಕದ ಹಾಗೂ 1980ರ ದಶಕದ ಆರಂಭಿಕ ಅವಧಿಯ ಭಾರತೀಯ ಅನುಭವಗಳ ಆಧಾರದಲ್ಲಿ ಈ ಹೊಸ ಸಮುದಾಯ ಆರೋಗ್ಯ ಪರಿಕಲ್ಪನೆಯ ಹತ್ತು ಸೂತ್ರಾವಳಿಗಳನ್ನು ಗುರುತಿಸಲಾಯಿತು.

ಸಮುದಾಯ ಆರೋಗ್ಯ ಧೋರಣೆ (1984) 'ಸಮುದಾಯ ಆರೋಗ್ಯ ಕೋಶ' (CHC) ತಂಡದ ಪರ್ಯಾಲೋಚನೆ

'ಸಮುದಾಯ ಆರೋಗ್ಯ' ಎಂಬುದು ಆರೋಗ್ಯ ಪಾಲನಾ ಕ್ಷೇತ್ರದಲ್ಲಿ ವಿಕಾಸಗೊಳ್ಳುತ್ತಿರುವ ಹೊಸ ಧೋರಣೆಯನ್ನು ಪ್ರತಿನಿಧಿಸುವುದಕ್ಕಾಗಿ ಇಂದಿನ ಆರೋಗ್ಯ ಪಾಲನಾ ಬಳಗದಲ್ಲಿ ಸರ್ವೇಸಾಮಾನ್ಯವಾಗಿ ಬಳಸಲ್ಪಡುತ್ತಿರುವ ಒಂದು ಪರಿಭಾಷೆಯಾಗಿದೆ. ಬಹಳಷ್ಟು ಸಲ ಇದನ್ನು 'ಸಮುದಾಯ ಔಷಧೋಪಚಾರ' ಮತ್ತು 'ಪ್ರಾಥಮಿಕ ಆರೋಗ್ಯ ಪಾಲನೆ' ಎಂಬ ಪದಗಳಿಗೆ ಪರ್ಯಾಯವಾಗಿ, ಸಂವಾದಿಯಾಗಿಯೂ ಬಳಸಲಾಗುತ್ತದೆ. 1982–86ರ ಅವಧಿಯಲ್ಲಿ ಭಾರತದಲ್ಲಿ ನಾವು ಪ್ರಾರಂಭಿಸಿದ ಈ ಅನೌಪಚಾರಿಕ ಅಧ್ಯಯನ–ಪರ್ಯಾಲೋಚನೆಗಳ ಒಂದು ಪ್ರಕ್ರಿಯೆಯಲ್ಲಿ ನಾವು ಕಂಡುಕೊಂಡಿದ್ದೇನೆಂದರೆ 'ಸಮುದಾಯ ಆರೋಗ್ಯ' ಎಂಬ ಪದವು ಆರೋಗ್ಯ ಪಾಲನಾ ಕಾರ್ಯಾನುಷ್ಠಾನದಲ್ಲಿ ಅಥವ ಅದರ ಧೋರಣೆಯಲ್ಲಿ ಅಡಕವಾಗಿರುವ ಬಹಳಷ್ಟು ವಿಶಾಲವಾದ ಚಿಂತನೆ ಮತ್ತು ಆಯಾಮಗಳನ್ನು ಒಳಗೊಂಡಿದೆ. ನಾವು ಈ ಅಧ್ಯಯನಕ್ಕೆ ತೊಡಗುವಾಗ 'ಸಮುದಾಯ ಆರೋಗ್ಯ' ಪರಿಕಲ್ಪನೆಯನ್ನು ಬಹಳ ಚೆನ್ನಾಗಿ ಪ್ರತಿನಿಧಿಸುವಂತಹ, ಸಂಬಂಧಪಟ್ಟ ಎಲ್ಲಾ ಜನರಿಗೂ ಒಪ್ಪಿಗೆಯಾಗುವಂತಹ, ಬಹಳ ಅಚ್ಚುಕಟ್ಟಾಗಿ ಹೆಣೆದ ವಿಕರೂಪಿ ವ್ಯಾಖ್ಯಾನವನ್ನು ರೂಪಿಸುವುದು ನಮಗಿದ್ದ ಉದ್ದೇಶವಾಗಿರಲಿಲ್ಲ; ಬದಲಿಗೆ ಈ ಪರಿಕಲ್ಪನೆಯ ವ್ಯಾಖ್ಯಾನದ ಆಳವನ್ನು ಸಂಶೋಧಿಸಿ ಅರಿಯುವುದು ಹಾಗೂ ನಾವು ಸಾಮಾನ್ಯವಾಗಿ ಯಾವುದನ್ನು "ಪ್ರಾಥಮಿಕ ಆರೋಗ್ಯ ಪಾಲನೆ" ಅಥವ "ಸಮುದಾಯ ಔಷಧೋಪಚಾರ" ಎಂದು ಅರ್ಥಮಾಡಿಕೊಳ್ಳುತ್ತೇವೋ ಅಥವ ವಿವರಿಸುತ್ತೇವೆಯೋ ಅದರಿಂದಾಚೆಗೆ ಬಹುದೂರ ಹೋಗಿ ಅದರ ಅಪಾರ ಶ್ರೀಮಂತಿಕೆಯನ್ನು ಮತ್ತು ಅದರ ವಿವಿಧ ಆಯಾಮಗಳನ್ನು ಗುರುತಿಸುವುದು ನಮ್ಮ ಉದ್ದೇಶವಾಗಿತ್ತು. ಈ ಹೊಸ ಧೋರಣೆಯಲ್ಲಿ ಅಡಗಿರುವ ಸೂತ್ರಾವಳಿಗಳನ್ನು (ಅದರ ತತ್ವಶಾಸ್ತ್ರೀಯ ಪರಿಕಲ್ಪನೆಗಳು, ಧ್ಯೇಯೋದ್ಧೇಶಗಳು ಮತ್ತು ಕ್ರಮಶಾಸ್ತ್ರಗಳನ್ನೂ ಒಳಗೊಂಡಂತೆ) ವಿಕಾಸಗೊಳಿಸುವುದಕ್ಕೆ ಅನುಕೂಲವಾಗಲೆಂಬ ಉದ್ದೇಶದಿಂದ ನಾವಿಲ್ಲಿ ಕೆಲವು ಸಾಧ್ಯತೆಗಳನ್ನು ಸ್ಥೂಲವಾಗಿ ಇಡುತ್ತೇವೆ.

ಪರ್ಯಾಲೋಚನೆಗಳು:

1. *ಸಮುದಾಯ ಆರೋಗ್ಯ ಎಂದರೆ ಜನರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಸಾಮೂಹಿಕವಾಗಿ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವಂತೆ ಹಾಗೂ ಉತ್ತಮ ಆರೋಗ್ಯ ಪಡೆಯುವುದು ತಮ್ಮ ಹಕ್ಕು ಎಂಬುದಾಗಿ ಒತ್ತಾಯಮಾಡುವಂತೆ ಅವರನ್ನು ಶಕ್ತರನ್ನಾಗಿ ಮಾಡುವ ಒಂದು ಪ್ರಕ್ರಿಯೆ.*

2. *ಆರೋಗ್ಯದ ಮೇಲೆ, ಸಂಘಟನೆಗಳ ಮೇಲೆ, ಅಂದರೆ, ಅವಕಾಶಗಳ ಮೇಲೆ, ಜ್ಞಾನದ ಮೇಲೆ ಮತ್ತು ಉತ್ತಮ ಆರೋಗ್ಯವನ್ನು ಒದಗಿಸುವ ಬೆಂಬಲ ಸಂರಚನೆಗಳ ಮೇಲೆ ವ್ಯಕ್ತಿಯ, ಕುಟುಂಬದ ಹಾಗೂ ಸಮುದಾಯದ ಸ್ವಾಯತ್ತತೆಯನ್ನು ಹೆಚ್ಚಿಸುವ ಅಂಶವನ್ನೂ "ಸಮುದಾಯ ಆರೋಗ್ಯ" ಧೋರಣೆಯು ಒಳಗೊಂಡಿರುತ್ತದೆ.*

3. "ಸಮುದಾಯ ಆರೋಗ್ಯ"ದ ಪರಿಕಲ್ಪನೆಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತದೆ:

   - ಶಿಕ್ಷಣ, ಕೃಷಿ ವಿಸ್ತರಣೆ ಮತ್ತು ಆದಾಯಸೃಷ್ಟಿ ಕಾರ್ಯಕ್ರಮಗಳನ್ನೂ ಒಳಗೊಂಡಂತೆ ಒಟ್ಟಾರೆಯಾಗಿ ಎಲ್ಲಾ ಅಭಿವೃದ್ಧಿ ಚಟುವಟಿಕೆಗಳೊಂದಿಗೆ ಆರೋಗ್ಯವನ್ನು ವಿಕೀಭವಿಸಿ ಮೇಳೈಸುವ ಪ್ರಯತ್ನ;

   - ಈಗ ಅಸ್ತಿತ್ವದಲ್ಲಿರುವ ವೈದ್ಯಕೀಯ ಕಾರ್ಯಕ್ರಮಗಳಿಗೆ ಪ್ರತಿಬಂಧಾತ್ಮಕ, ಉತ್ತೇಜನಾತ್ಮಕ ಹಾಗೂ ಪುನರ್‌ಸ್ಥಾಪಕ ಕ್ರಿಯೆಗಳ ದೃಷ್ಟಿಕೋನ ಕೊಡುವ ಪ್ರಯತ್ನಗಳು;

   - ಆರೋಗ್ಯ ಪಾಲನೆಯಲ್ಲಿ, ಆರೋಗ್ಯ ಸಂಬಂಧಿ ಸಂಪರ್ಕ–ಸಂವಹನಗಳಲ್ಲಿ ಹಾಗೂ ದಾಖಲಿಸುವ ವ್ಯವಸ್ಥೆಯಲ್ಲಿ ಕಡಿಮೆ ಖರ್ಚಿನ, ಪರಿಣಾಮಕಾರಿಯಾದ ಸೂಕ್ತ ತಂತ್ರಜ್ಞಾನವನ್ನು ಬಳಸಿ ಪ್ರಯೋಗ ಮಾಡಬಹುದಾದ ಸಾಧ್ಯತೆಗಳಿಗಾಗಿನ ಹುಡುಕಾಟ; ಸಾಂಪ್ರದಾಯಿಕವಾಗಿ ಹೆರಿಗೆ ಮಾಡಿಸುವವರು (ದಾಯಿಗಳು), ಸಾಂಪ್ರದಾಯಿಕವಾಗಿ ರೋಗ ನಿವಾರಣೆ ಮಾಡುವವರು, ಜನಪದೀಯವಾಗಿ ವೈದ್ಯಕೀಯ ವೃತ್ತಿ ನಡೆಸುತ್ತಿರುವವರು, ಅಲೋಪಥಿಕ್ಕೇತರ ವೈದ್ಯಕೀಯ ವ್ಯವಸ್ಥೆ, ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ಔಷಧೋಪಚಾರಗಳು ಮತ್ತು ಹಲವಾರು ವರ್ಷಗಳಿಂದ ಪರಿಣಾಮಕಾರಿಯೆಂದು ಸಾಬೀತಾದ ರೋಗ ನಿವಾರಣೆಯ ಗೃಹವಿಧಾನಗಳು – ಇಂತಹ ಹಲವಾರು ಸ್ಥಳೀಯ ಮತ್ತು ದೇಶೀಯ ಆರೋಗ್ಯ ಸಂಪನ್ಮೂಲಗಳನ್ನು ಗುರುತಿಸುವುದು ಹಾಗೂ ಅವುಗಳನ್ನು ಸದ್ಬಳಕೆ ಮಾಡಿಕೊಳ್ಳುವುದು;

- ಹಳ್ಳಿಯಾಧಾರಿತವಾಗಿ ಕಾರ್ಯನಿರ್ವಹಿಸುವ ಆರೋಗ್ಯ ಕಾರ್ಯಕರ್ತರಿಗೆ ಸೂಕ್ತ ತರಬೇತಿ ಕೊಟ್ಟು ಅವರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು;

- ರೈತರ, ಮಹಿಳೆಯರ ಮತ್ತು ಯುವಜನತೆಯ ಗುಂಪುಗಳನ್ನು ರಚಿಸುವ ಮೂಲಕ ಇಡೀ ಸಮುದಾಯವು ಹೆಚ್ಚಿನ ಪ್ರಮಾಣದಲ್ಲಿ ಸಂಘಟಿತಗೊಳ್ಳುವಂತೆ ಮಾಡುವುದು;

- *ಯೋಜನೆಯ ರೂಪಣೆ, ಅದಕ್ಕೆ ಹಣಕಾಸು ನೀಡಿಕೆ, ಆರೋಗ್ಯ ಕ್ರಮಗಳ ಸಂಘಟನೆ ಮತ್ತು ಅನುಷ್ಠಾನ ಮುಂತಾದವುಗಳನ್ನೂ ಒಳಗೊಂಡಂತೆ ಒಟ್ಟಾರೆಯಾಗಿ ಆರೋಗ್ಯ ಸಂಬಂಧಿ ಕ್ರಿಯಾಚಟುವಟಿಕೆಗಳಿಗೆ ಸಂಬಂಧಪಟ್ಟ ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಸಮುದಾಯದ ಕ್ರಿಯಾಶೀಲ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು; ಅದಕ್ಕಾಗಿ ಸಮುದಾಯದ ಸದಸ್ಯರನ್ನು ಔಪಚಾರಿಕ ಮತ್ತು ಅನೌಪಚಾರಿಕ ಸಂರಚನೆಗಳಲ್ಲಿ ಹಾಗೂ ಆರೋಗ್ಯ ಸಮಿತಿಗಳಲ್ಲಿ ಸಂಘಟಿಸುವುದು;*

- ಸಹಕಾರಿ ಸಂಸ್ಥೆಗಳನ್ನು, ಆರೋಗ್ಯ ವಿಮೆಯನ್ನು ಹಾಗೂ ಇನ್ನಿತರ ಯೋಜನೆಗಳನ್ನು ಸ್ಥಾಪಿಸುವ ಮೂಲಕ ಹಾಗೂ ಸ್ಥಳೀಯವಾಗಿ ಲಭ್ಯವಿರುವ ಶ್ರಮ, ಮಾನವ ಕೌಶಲ್ಯಗಳು ಮತ್ತು ಸ್ಥಳೀಯ ಪರಿಕರಗಳನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳುವ ಮೂಲಕ ಆರೋಗ್ಯ ಕಾರ್ಯಾನುಷ್ಠಾನದಲ್ಲಿ ಸಮುದಾಯವು ಕ್ರಿಯಾಶೀಲವಾಗಿ ಬೆಂಬಲಕ್ಕೆ ನಿಲ್ಲುವ ಹಾಗೆ ಮಾಡುವುದು;

- ಆರೋಗ್ಯ ಶಿಕ್ಷಣ ನೀಡುವ ಕಾರ್ಯಕ್ರಮಗಳನ್ನು ಯಾವುದೇ ನಿಯಮಾವಳಿಗಳಿಲ್ಲದಂತೆ ಅನೌಪಚಾರಿಕವಾಗಿ ನಡೆಸುವುದು, ಅವುಗಳನ್ನು ಯಾವುದೇ ಗೊಂದಲಕ್ಕೆಡೆಯಿಲ್ಲದಂತೆ ಸ್ಪಷ್ಟವಾಗಿ, ವಿಷದವಾಗಿ ವಿವರಿಸುವುದು ಹಾಗೂ ಬಹಳ ನಿಷ್ಕಲ್ಮಷವಾಗಿ ಜಾರಿಗೆ ತರುವುದು;

4. 'ಸಮುದಾಯ ಆರೋಗ್ಯ' ಧೋರಣೆಯು ಅವಶ್ಯವಾಗಿ ಪ್ರಜಾತಾಂತ್ರಿಕವಾದ, ವಿಕೇಂದ್ರೀಕೃತವಾದ, ಜನರು ಪಾಲ್ಗೊಳ್ಳಬಹುದಾದ, ಜನರೇ ಕಟ್ಟುವಂತಹ ಹಾಗೂ ಜನರಿಗೆ ಶಕ್ತಿ-ಸಾಮರ್ಥ್ಯಗಳನ್ನು ತುಂಬುವಂತಹ ಒಂದು ಕಾರ್ಯಚಟುವಟಿಕೆಯಾಗಿದೆ; ಅಲ್ಲದೇ, ಈ ಹೊಸ ಮೌಲ್ಯ ವ್ಯವಸ್ಥೆಯು ಸಮುದಾಯ ಮತ್ತು "ಆರೋಗ್ಯ ಕ್ರಿಯಾ" ಅನುಷ್ಠಾನಕರ ನಡುವೆ ಹಾಗೂ "ಆರೋಗ್ಯ ಕ್ರಿಯಾ" ಅನುಷ್ಠಾನಕರೊಳಗೆಯೇ ಒಂದು ರೀತಿಯ ಅನ್ಯೋನ್ಯ ಒಡನಾಟವನ್ನು ಬೆಳೆಸಿ ಹಬ್ಬಿಸಬೇಕೆಂಬುದನ್ನು "ಸಮುದಾಯ ಆರೋಗ್ಯ" ಧೋರಣೆಯು ಗುರುತಿಸುತ್ತದೆ.

ಹೀಗಾಗಿ, "ಸಮುದಾಯ ಆರೋಗ್ಯ" ಧೋರಣೆಯನ್ನು ಇನ್ನಷ್ಟು ವ್ಯಾಪಕವಾಗಿ ಬೆಳೆಸಬೇಕೆಂದರೆ "ಆರೋಗ್ಯ ಕ್ರಿಯೆ"ಯನ್ನು ಅನುಷ್ಠಾನಗೊಳಿಸುವ ತಂಡಗಳು ಬಿಡಿ ವ್ಯಕ್ತಿಯಾಗಿ ಹಾಗೂ ಒಂದು ತಂಡವಾಗಿ ತಮ್ಮ ತಮ್ಮ ನಡುವಿನ ಸಂಬಂಧಗಳಲ್ಲಿ ಹೆಚ್ಚೆಚ್ಚು ಪ್ರಜಾತಾಂತ್ರಿಕವಾದ, ಮೇಲು-ಕೀಳೆಂಬ ಶ್ರೇಣೀಕರಣರಹಿತವಾದ, ಜನರು ಸಕ್ರಿಯವಾಗಿ ಪಾಲ್ಗೊಳ್ಳುವಂತಹ, ಸಾಮೂಹಿಕ ತಂಡ ರಚನೆಯ ಮತ್ತು ತಂಡ ಸಾಮರ್ಥ್ಯ ಬೆಳೆಸುವ ಮನೋಭಾವಗಳನ್ನು ಬೆಳೆಸಿಕೊಳ್ಳಬೇಕು.

5. ಅಸಮಾನತೆಯಿಂದ ಕೂಡಿದ ಹಾಗೂ ಮೇಲು-ಕೀಳು, ಬಡವ-ಶ್ರೀಮಂತ ಎಂಬಿತ್ಯಾದಿಗಳಿಂದ ಶ್ರೇಣೀಕರಣಗೊಂಡ ಸಾಮಾಜಿಕ ವ್ಯವಸ್ಥೆಯಲ್ಲಿ ನಿಜಾರ್ಥದಲ್ಲಿ "ಸಮುದಾಯ" ಎಂಬುದೇ ಇಲ್ಲ ಎಂಬುದನ್ನು 'ಸಮುದಾಯ ಆರೋಗ್ಯ' ಧೋರಣೆಯು ಗುರುತಿಸುತ್ತದೆ; ಆದ್ದರಿಂದ ಪ್ರಸ್ತುತವಾಗಿ ತೀರ್ಮಾನ ರೂಪಣೆಯಲ್ಲಿ ಸರಿಸಮಾನವಾಗಿ ಪಾಲ್ಗೊಳ್ಳಲು ಸಾಧ್ಯವಾಗದೇ ಹೊರಗುಳಿದಿರುವ ಸಮುದಾಯದ ಬಹುಸಂಖ್ಯಾತ ಜನರನ್ನು (ಅಂದರೆ ಬಡವರು, ಅನಾನುಕೂಲಸ್ತರು ಮತ್ತು ಮೂಲೆಗೆ ದೂಡಲ್ಪಟ್ಟ ಅವಕಾಶ ವಂಚಿತರು) ಹೆಚ್ಚಿನ ಪ್ರಮಾಣದಲ್ಲಿ ಸಂಘಟಿಸುವುದು, ತೊಡಗಿಸಿಕೊಳ್ಳುವುದು ಹಾಗೂ ಅವರು ತೀರ್ಮಾನ ರೂಪಣೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದು – ಇದೇ 'ಸಮುದಾಯ ಆರೋಗ್ಯ ಕ್ರಿಯೆ'ಯ ನಿಜವಾದ ಅರ್ಥವಾಗಿರುತ್ತದೆ ಎಂಬುದನ್ನೂ 'ಸಮುದಾಯ ಆರೋಗ್ಯ' ಧೋರಣೆಯು ಗುರುತಿಸುತ್ತದೆ.

ಯಥಾಸ್ಥಿತಿ ಬಯಸುವ ಶಕ್ತಿಗಳು ಹಾಗೂ ಪ್ರಸ್ತುತ ಅಸಮಾನ ಮತ್ತು ಶ್ರೇಣೀಕೃತ ವ್ಯವಸ್ಥೆಯಿಂದ ಅತ್ಯಂತ ಹೆಚ್ಚು ಲಾಭ ಪಡೆಯುತ್ತಿರುವ ಪಟ್ಟಭದ್ರರು ಇಂಥ ಪ್ರಯತ್ನಗಳನ್ನು ಸರ್ವೇಸಾಮಾನ್ಯವಾಗಿ ವಿರೋಧಿಸುತ್ತಾರೆ. ಸಮುದಾಯ ಆರೋಗ್ಯ ಕ್ರಿಯೆಯ ಕಾರಣದಿಂದಾಗಿ ಈ ರೀತಿಯ ಹಿತಾಸಕ್ತಿಗಳ ನಡುವೆ ಘರ್ಷಣೆಯುಂಟಾಗುತ್ತದೆ ಎಂಬುದನ್ನು, ಹಾಗೂ ಅದರ ಪರಿಣಾಮವಾಗಿ ಅನಿವಾರ್ಯವಾಗಿ ಕಲಹಗಳು

ಉದ್ಭವವಾಗುತ್ತವೆ ಎಂಬುದನ್ನು "ಸಮುದಾಯ ಆರೋಗ್ಯ ಧೋರಣೆ"ಯು ಗುರುತಿಸುತ್ತದೆ; ಇದೆಲ್ಲಾ ಗೊತ್ತಿದ್ದರೂ ಸಮುದಾಯಕ್ಕೆ ಶಕ್ತಿ, ಸಾಮರ್ಥ್ಯಗಳನ್ನು ತುಂಬುವ ತನ್ನ ಪ್ರಕ್ರಿಯೆಗೆ ಅದು ಕಟಿಬದ್ಧವಾಗಿರುತ್ತದೆಯಲ್ಲದೇ ಈ ಪ್ರಕ್ರಿಯೆಯಲ್ಲಿ ಕ್ರಿಯೆಗಳು ಮತ್ತು ವ್ಯೂಹತಂತ್ರಗಳು ಆರೋಗ್ಯ ವಿಷಯಗಳಾಚೆಗೆ ಹೋಗಿ ವಿಸ್ತಾರ ಸ್ವರೂಪಡೆದಂತೆಲ್ಲಾ ಅವುಗಳಿಗೆ ಬೆಂಬಲವಾಗಿ ನಿಲ್ಲುತ್ತದೆ.

6. ಇಡೀ ಸಮಾಜವನ್ನು ಹಲವು ಹೋಳುಗಳಾಗಿ ವಿಭಜಿಸಿದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ರಾಜಕೀಯ ಭಿನ್ನತೆಗಳನ್ನು ಅತಿದೊಡ್ಡ ಸಂಖ್ಯೆಯಲ್ಲಿರುವ ಬಡವರು ಮತ್ತು ಅನಾನುಕೂಲಸ್ತರು ಅಂತರ್ಗತ ಮಾಡಿಕೊಂಡಿರುತ್ತಾರಾದ್ದರಿಂದ ಅವರನ್ನು ಅವರವರ ಬಡತನ ಮತ್ತು ಸಾಮಾಜಿಕ ಸ್ತರಗಳೊಂದಿಗೆ ತಳಕು ಹಾಕಲಾಗುತ್ತದೆ; ಆದರೂ ಈ ಬಡವರು ಮತ್ತು ಅನಾನುಕೂಲಸ್ತರು ತಮ್ಮಷ್ಟಕ್ಕೆ ತಾವೇ "ಒಂದು ಸಮುದಾಯ"ವಾಗುವುದಿಲ್ಲ ಎಂಬುದನ್ನು "ಸಮುದಾಯ ಆರೋಗ್ಯ ಧೋರಣೆ"ಯು ಗುರುತಿಸುತ್ತದೆ.

ಈ ಹಿನ್ನೆಲೆಯಲ್ಲಿ, 'ಸಮುದಾಯ' ಪರಿಕಲ್ಪನೆ ಮತ್ತು ಸ್ಫೂರ್ತಿಗಳನ್ನು ಮೈಗೂಡಿಸುವ ಪ್ರಯತ್ನಗಳು ಹಾಗೂ ತಂಡದ ಮನೋಭಾವ ಮತ್ತು ಅಂತರ್‌ತಂಡದ ಸಂಬಂಧಗಳನ್ನು ಬೆಳೆಸುವ ಪ್ರಯತ್ನಗಳು ಯಾವುದೇ ಸ್ವರೂಪದ ಸಾಮುದಾಯಿಕ ಕ್ರಿಯೆಗಳಿಗೆ ಮೂಲಭೂತ ಅವಶ್ಯಕತೆಗಳಾಗಿರುತ್ತವೆ ಎಂಬುದನ್ನೂ ಸಮುದಾಯ ಆರೋಗ್ಯ ಧೋರಣೆಯು ಒಪ್ಪಿಕೊಳ್ಳುತ್ತದೆ. ಆದ್ದರಿಂದ ತನ್ನೆಲ್ಲಾ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಮೂಲಕ ಸಮುದಾಯ ನಿರ್ಮಾಣ ಪ್ರಕ್ರಿಯೆಯನ್ನು ಅದು ಉತ್ತೇಜಿಸುತ್ತದೆ ಮತ್ತು ತೀವ್ರಗೊಳಿಸುತ್ತದೆ.

7. ಅವಶ್ಯಕತೆಗಿಂತ ಹೆಚ್ಚು ವೈದ್ಯಕೀಕರಣಗೊಂಡಿರುವ ಇಂದಿನ ಆರೋಗ್ಯ ಪಾಲನಾ ವ್ಯವಸ್ಥೆಯು ತನ್ನ ತಂಡ ಕಾರ್ಯನಿರ್ವಹಣೆಯಲ್ಲಿ ಅಧಿಕಾರ ಶ್ರೇಣಿಗಳನ್ನು ಹೊಂದಿರುವುದು, ತೀರ್ಮಾನ ರೂಪಣೆಯಲ್ಲಿ ಜನರ ಪಾಲ್ಗೊಳದಿರುವುದು, ವೈದ್ಯರು ನಿರ್ವಹಿಸುವ ಪಾತ್ರಕ್ಕೆ ಅಗತ್ಯಕ್ಕಿಂತ ಹೆಚ್ಚು ಮಹತ್ವ ಕೊಡುತ್ತಾ ಇಡೀ ಆರೋಗ್ಯ ಪಾಲನಾ ವ್ಯವಸ್ಥೆಯಲ್ಲಿ ಜವಾಬ್ದಾರಿಗಳನ್ನು ಬಿಗಿಯಾಗಿ ವಿಂಗಡಿಸಿಡಲಾಗಿರುವುದು ಮುಂತಾದ ಅಂಶಗಳನ್ನು ಹೊಂದಿದ್ದು ತನ್ನದೇ ಆದ ಹಲವಾರು ಗುಣಲಕ್ಷಣಗಳನ್ನು ಪಡೆದಿರುವುದನ್ನು "ಸಮುದಾಯ ಆರೋಗ್ಯ" ಧೋರಣೆಯು ಗುರುತಿಸುತ್ತದೆ:

ಪ್ರಸ್ತುತ ಆರೋಗ್ಯ ಪಾಲನಾ ವ್ಯವಸ್ಥೆಯು ವೃತ್ತಿಪರ ಚಟುವಟಿಕೆಗಳಲ್ಲಿ ಪರಿಣಿತಿ ಪಡೆದು ನೈಪುಣ್ಯತೆ ಸಾಧಿಸುವುದಕ್ಕಾಗಿ ಹಾಗೂ ಆ ಚಟುವಟಿಕೆಗಳನ್ನು ವಿವಿಧ ವಿಭಾಗಗಳಡಿಯಲ್ಲಿ ವಿಂಗಡಿಸಿಸುವುದಕ್ಕಾಗಿ ಸದಾ ಪ್ರಯತ್ನಿಸುತ್ತಿರುತ್ತದೆ;

ಪ್ರಸ್ತುತ ಆರೋಗ್ಯ ಪಾಲನಾ ವ್ಯವಸ್ಥೆಯಲ್ಲಿ 'ಮಾನವನ ರೋಗ' ಎಂದರೆ ಅದು ಮನುಷ್ಯ ದೇಹದ ಭಾಗಗಳಿಗೆ ಸಂಬಂಧಿಸಿದ್ದು ಮಾತ್ರ ಎಂದು ಪೂರ್ವಾಗ್ರಹಪೀಡಿತ ಕಲ್ಪನೆ ಗಾಢವಾಗಿದ್ದು ಅದನ್ನು ಅಂತರ್‌ಜೀವಕೋಶೀಯ ಮಟ್ಟದಲ್ಲಿ, ಚಿಕ್ಕಚಿಕ್ಕ ಅಣುಗಳ ಮಟ್ಟದಲ್ಲಿ ಸೂಕ್ಷ್ಮವಾಗಿ ಗ್ರಹಿಸುವ ಪರಿಪಾಠವಿದೆಯೇ ಹೊರತು ಈ ಪ್ರಕ್ರಿಯೆಯಲ್ಲಿ ವ್ಯಕ್ತಿಯ ಸಮಗ್ರ "ಯೋಗಕ್ಷೇಮ"ವನ್ನು ಪರಿಗಣನೆಗೆ ತೆಗೆದುಕೊಳ್ಳುವುದನ್ನು ಸಂಪೂರ್ಣವಾಗಿ ಮರೆತುಬಿಡಲಾಗುತ್ತದೆ;

ಪ್ರಸ್ತುತ ಆರೋಗ್ಯ ಪಾಲನಾ ವ್ಯವಸ್ಥೆಯಲ್ಲಿ ಆರೋಗ್ಯ ಸೇವೆಗಳನ್ನು "ನೀಡುವವರು" ಮತ್ತು ಆರೋಗ್ಯ ಸೇವೆಗಳ "ಬಳಕೆದಾರರು" ಎಂಬ ಸ್ಪಷ್ಟ ವಿಭಜನೆಯನ್ನು ಮಾಡಲಾಗಿದೆ;

ಪ್ರಸ್ತುತ ಆರೋಗ್ಯ ಪಾಲನಾ ವ್ಯವಸ್ಥೆಯಲ್ಲಿ ವ್ಯಕ್ತಿಯ ಆರೋಗ್ಯದ 'ದೈಹಿಕ' ಆಯಾಮಕ್ಕೆ ಅವಶ್ಯಕತೆಗಿಂತ ಹೆಚ್ಚು ಮಹತ್ವ ನೀಡಲಾಗುತ್ತದೆಯೇ ಹೊರತು ಆತನ ಮಾನಸಿಕ, ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ, ಪರಿಸರಾತ್ಮಕ ಹಾಗೂ ರಾಜಕೀಯ ಆಯಾಮಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗುತ್ತದೆ;

ಪ್ರಸ್ತುತ ಆರೋಗ್ಯ ಪಾಲನಾ ವ್ಯವಸ್ಥೆಯಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವೃತ್ತಿಪರತೆಯಿದ್ದು ಅದು ಆರೋಗ್ಯ ಕೆಲಸದಲ್ಲಿ ನಿರತರಾಗಿರುವ ಕಾರ್ಯಕರ್ತರ ತಂಡಗಳಿಗೆ ಹಾಗೂ ಒಟ್ಟಾರೆಯಾಗಿ ಜನಸಮೂಹಗಳಿಗೆ ತಾಂತ್ರಿಕ ಜ್ಞಾನ ಮತ್ತು ಕೌಶಲ್ಯಗಳು ಸಲೀಸಾಗಿ ಹರಿಯುವುದನ್ನು ನಿಯಂತ್ರಿಸುತ್ತದೆ;

ಪ್ರಸ್ತುತ ಆರೋಗ್ಯ ಪಾಲನಾ ವ್ಯವಸ್ಥೆಯಲ್ಲಿ ಸೇವೆಗಳನ್ನು ಮತ್ತು ಕಾರ್ಯಗಳನ್ನು "ನೀಡುವ" ದೃಷ್ಟಿಕೋನವಿದೆಯೇ ಹೆಚ್ಚಾಗಿದೆಯೇ ಹೊರತು ಹೊರತು ಜನರನ್ನು "ಶಕ್ತರನ್ನಾಗಿ ಮಾಡುವ" ದೃಷ್ಟಿಕೋನವಿಲ್ಲ.

ಪ್ರಸ್ತುತ ಆರೋಗ್ಯ ಪಾಲನಾ ವ್ಯವಸ್ಥೆಯಲ್ಲಿ ಔಷಧಗಳಿಗೆ ಹಾಗೂ ತಂತ್ರಜ್ಞಾನಕ್ಕೆ ಅಗತ್ಯಕ್ಕಿಂತ ತೀರಾ ಹೆಚ್ಚು ಒತ್ತುಕೊಡುತ್ತಿರುವುದರಿಂದ ಅದು ಔಷಧೇತರ ಗುಣಕಾರಿ ವಿಧಾನ ಮತ್ತು ಕೌಶಲ್ಯಗಳನ್ನು ಸಂಪೂರ್ಣವಾಗಿ ಕಡೆಗಣಿಸುವುದಕ್ಕೆ ಹಾದಿಮಾಡಕೊಟ್ಟಂತಾಗಿದೆ;

ಪ್ರಸ್ತುತ ಆರೋಗ್ಯ ಪಾಲನಾ ವ್ಯವಸ್ಥೆಯಲ್ಲಿ ಅಲೋಪಥಿಕ್ ವೈದ್ಯ ವ್ಯವಸ್ಥೆಯನ್ನೇ ಅತ್ಯುತ್ತಮ ಎಂದು ಪರಿಭಾವಿಸಿ ಅಪ್ಪಿಕೊಂಡಿರುವುದರಿಂದ ಅಲೋಪಥಿಕ್ಕೇತರ ವೈದ್ಯ ವ್ಯವಸ್ಥೆಗಳ ಮತ್ತು ಇನ್ನಿತರ ಗುಣಕಾರಿ ಕೌಶಲ್ಯಗಳ ಅಸ್ತಿತ್ವವನ್ನೇ ಅಲ್ಲಗಳೆಯಲಾಗುತ್ತದೆ ಅಥವ ಅವುಗಳ ಸದ್ಬಳಕೆ ಮಾಡಿಕೊಳ್ಳುವುದಕ್ಕೆ ನಿರಾಕರಿಸಲಾಗುತ್ತದೆ;

"ಸಮುದಾಯ ಆರೋಗ್ಯ" ಕ್ರಿಯೆಯನ್ನು ಪ್ರಾರಂಭಿಸುವವರು ಬಹಳಷ್ಟು ಸಂದರ್ಭಗಳಲ್ಲಿ ಈ ಅತಿವೈದ್ಯಕೀಕರಣಗೊಂಡ ಪರಿಸರಗಳಿಂದಲೇ ಬಂದಿರುತ್ತಾರಾದರೂ ಅವರು ತಮ್ಮನ್ನು ತಾವು ಇದೇ ವೈದ್ಯಕೀಯ ವ್ಯವಸ್ಥೆಯ ವಿಸ್ತರಿತ ಭಾಗ ಎಂದು ಪರಿಭಾವಿಸುವುದಿಲ್ಲ. ತಮ್ಮ ಧೋರಣೆ ಮತ್ತು ಕ್ರಿಯೆಗಳಲ್ಲಿ ಅವರು ಈ ವಿಚಾರಗಳನ್ನು ನಿರಂತರವಾಗಿ ಎದುರುಗೊಳ್ಳುತ್ತಲೇ ಜನಮುಖಿ ಮತ್ತು ಸಮುದಾಯಮುಖಿಯಾಗಿರುವ ಹೊಸ ಮನೋಭಾವಗಳನ್ನು, ಹೊಸ ಕುಶಲತೆಗಳನ್ನು ಹಾಗೂ ಹೊಸ ದೃಷ್ಟಿಕೋನಗಳನ್ನು ವಿಕಾಸಗೊಳಿಸಲು ಪ್ರಯತ್ನಿಸುತ್ತಾರೆ; ಆ ಮೂಲಕ ಔಷಧೋಪಚಾರಗಳನ್ನು, ವೃತ್ತಿಪರ ಕುಶಲತೆಗಳನ್ನು ಹಾಗೂ ತಂತ್ರಜ್ಞಾನವನ್ನು ತಮ್ಮ ಸರಿಯಾದ ಮತ್ತು ಸೀಮಿತವಾದ ಸನ್ನಿವೇಶದಲ್ಲಿ ಸದ್ಬಳಕೆ ಮಾಡಲು ಯತ್ನಿಸುತ್ತಾರೆ;

8. "ಸಮುದಾಯ ಆರೋಗ್ಯ" ಧೋರಣೆಯು ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಡಿಸ್ಪೆನ್ಸರಿಗಳು, ಆಸ್ಪತ್ರೆಗಳು, ಬೋಧನಾ ಮತ್ತು ತರಬೇತಿ ಕೇಂದ್ರಗಳು, ವೈದ್ಯಕೀಯ, ನರ್ಸಿಂಗ್, ಅರೆವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ತಂಡಗಳು ಮತ್ತು ವೃತ್ತಿಪರ ತರಬೇತಿ ಕೇಂದ್ರಗಳು ಮತ್ತು ಸಂಸ್ಥೆಗಳು ಮುಂತಾದವುಗಳನ್ನು ಒಳಗೊಂಡಂತೆ ಪ್ರಸ್ತುತವಾಗಿ ಅಸ್ತಿತ್ವದಲ್ಲಿರುವ ಎಲ್ಲಾ ರೀತಿಯ ಮೇಲ್ರಚನೆಗಳೊಂದಿಗೆ ಮುಖಾಮುಖಿಯಾಗುತ್ತಲೇ ಸಮುದಾಯವೊಂದು ಹೊರಮುಖಿಯಾಗಿ ಮತ್ತು ಮೇಲ್ಮುಖಿಯಾಗಿ ಚಟುವಟಿಕೆಯಲ್ಲಿ ತೊಡಗುವಂತಹ ವ್ಯವಸ್ಥೆಯನ್ನು ವಿಕಾಸ ಗೊಳಿಸುವುದಕ್ಕೆ ಪ್ರಯತ್ನಿಸುತ್ತದೆ;

ಸರ್ಕಾರದಡಿಯಲ್ಲಿರುವ ಮತ್ತು ಸರ್ಕಾರೇತರ ಸಂಸ್ಥೆಗಳ ಆಶ್ರಯದಲ್ಲಿರುವ ಆರೋಗ್ಯ ಕಾರ್ಯಕ್ರಮಗಳು ಮತ್ತು ಆರೋಗ್ಯ ಸಂಸ್ಥೆಗಳೊಂದಿಗೂ ಅದು ಮುಖಾಮುಖಿಯಾಗುತ್ತದೆ.

"ಸಮುದಾಯ ಆರೋಗ್ಯ" ಧೋರಣೆಯು ಈ ಮೇಲ್ರಚನೆಗಳನ್ನು ಮುಖಾಮುಖಿಯಾಗುವುದರ ಹಿಂದೆ ಈ ಕೆಳಗಿನ ಉದ್ದೇಶಗಳಿವೆ:

- ***ಹೆಚ್ಚಿಚ್ಚು ಜನಮುಖಿಯಾಗುವುದು.***

  ಇದರಂಥವೇನೆಂದರೆ, ಬಹುಸಂಖ್ಯಾತ ಜನಸಮೂಹದ, ಅಂದರೆ ಬಡ ಮತ್ತು ಅನಾನುಕೂಲಸ್ತ ಜನಸಮೂಹದ ಬದುಕಿನ ಆರೋಗ್ಯ ವಾಸ್ತವಗಳಿಗೆ ಸ್ಪಂದಿಸುವಂತಹ ಸೂಕ್ಷ್ಮ ಸಂವೇದನೆಗಳನ್ನು ಬೆಳೆಸಿಕೊಳ್ಳುವುದು.

- ***ಹೆಚ್ಚಿಚ್ಚು ಸಮುದಾಯ ಮುಖಿಯಾಗುವುದು.***

  ಅಂದರೆ, ಕೇವಲ ಬಿಡಿ ಬಿಡಿ ವ್ಯಕ್ತಿಗಳ ಮಟ್ಟದಲ್ಲಿ ಮಾತ್ರವಲ್ಲದೇ ಇಡೀ ಸಮುದಾಯ ಮತ್ತು ಅದರ ಎಲ್ಲಾ ಜನವಿಭಾಗಗಳು ಎದುರಿಸುತ್ತಿರುವ ಆರೋಗ್ಯ ಸಮಸ್ಯೆಗಳನ್ನು ಒಟ್ಟಂದದಲ್ಲಿ ಅರ್ಥಮಾಡಿಕೊಳ್ಳುವುದು.

- ***ಹೆಚ್ಚಿಚ್ಚು ಸಮಾಜಮುಖಿಯಾಗುವುದು.***

  ಅಂದರೆ, ಆರೋಗ್ಯಕ್ಕಿರುವ ಜೈವಿಕ, ಸಾಮಾಜಿಕಾರ್ಥಿಕ, ಮಾನಸಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ, ರಾಜಕೀಯ ಹಾಗೂ ಪರಿಸರವೈಜ್ಞಾನಿಕ ಆಯಾಮಗಳನ್ನು ಗುರುತಿಸುವುದು.

- ***ಹೆಚ್ಚಿಚ್ಚು ಪ್ರಜಾತಾಂತ್ರಿಕವಾಗುವುದು.***

  ಅಂದರೆ, ತನ್ನ ಬೆಳವಣಿಗೆಯ ಪ್ರಕ್ರಿಯೆಯಲ್ಲಿ, ಯೋಜನೆ ರೂಪಣೆಯ ಪ್ರಕ್ರಿಯೆಯಲ್ಲಿ ಮತ್ತು ತೀರ್ಮಾನ ರೂಪಣೆಗಳ ಪ್ರಕ್ರಿಯೆಯಲ್ಲಿ ಜನರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು.

- *ಹೆಚ್ಚಿಚ್ಚು ಉತ್ತರದಾಯಿಯಾಗುವುದು.*

  ಅಂದರೆ, ಜನರ, ರೋಗಿಗಳ, ಗ್ರಾಹಕರ, 'ಫಲಾನುಭವಿ'ಗಳ ಮತ್ತು ಸಮುದಾಯಗಳ ಅಗತ್ಯ ಮತ್ತು ಆಶಯಗಳಿಗೆ ಅನುಗುಣವಾಗಿ ಔಷಧೋಪಚಾರ, ತಂತ್ರಜ್ಞಾನ, ಸಂರಚನೆ ಮತ್ತು ವೃತ್ತಿಪರ ಕೆಲಸಗಳಿರುವಂತೆ ಅವುಗಳನ್ನು ಜೋಡಿಸುವುದು.

9. ಹೀಗಾಗಿ, "ಸಮುದಾಯ ಆರೋಗ್ಯ" ಎಂಬುದು ಕೇವಲ ಒಂದು ವೈಶಿಷ್ಟ್ಯ ಮಾತ್ರವಲ್ಲ; ವೈದ್ಯಕೀಯ ವೃತ್ತಿಯ ಒಂದು ಹೊಸ ವಿಭಾಗ ಮಾತ್ರವಲ್ಲ; ಒಂದು ತಂತ್ರಜ್ಞಾನ ಇಕ್ಕಟ್ಟಲ್ಲ; ಅಥವಾ ಹೊಸ ಬಗೆಯ ಕಾರ್ಯಗಳ ಒಂದು ಸಮಷ್ಟಿಯಲ್ಲ ಮಾತ್ರ ಅಲ್ಲ.

   ಎಲ್ಲಕ್ಕಿಂತ ಹೆಚ್ಚಾಗಿ ಅದು 'ಆರೋಗ್ಯ' ಮತ್ತು 'ಆರೋಗ್ಯ ಪಾಲನೆ'ಗಳಿಗೆ ಸಂಬಂಧಿಸಿದ ಹೊಸ ದೃಷ್ಟಿಕೋನವಾಗಿದೆ, ಹೊಸ ಮಾನಸಿಕ ಧೋರಣೆಯಾಗಿದೆ; ಆರೋಗ್ಯ ಕೆಲಸದಲ್ಲಿ ಅದೊಂದು ಹೊಸ ಮೌಲ್ಯ ದೃಷ್ಟಿಕೋನವಾಗಿದೆ, ಹೊಸ ಸಮಾಜದ ಕಲ್ಪನೆಯೊಂದಿಗೆ ತಳುಕುಹಾಕಿಕೊಂಡಿರುವ ಭವಿತವ್ಯದ ಹೊಸ ದೃಕ್ಪಥವಾಗಿದೆ. ಆದ್ದರಿಂದ ಸಮುದಾಯ ಆರೋಗ್ಯ ಧೋರಣೆಯು ಪ್ರಸ್ತುತವಾಗಿ ಅಸ್ತಿತ್ವದಲ್ಲಿರುವ ಆರೋಗ್ಯ ಪಾಲನಾ ವ್ಯವಸ್ಥೆಗಳಿಗೆ, ಸಂಸ್ಥೆಗಳಿಗೆ, ಸಂಶೋಧನಾ ಪ್ರಯತ್ನಗಳಿಗೆ, ತರಬೇತಿ ಕಾರ್ಯಕ್ರಮಗಳಿಗೆ, ವೃತ್ತಿಧರ್ಮಗಳಿಗೆ ಮತ್ತು ಆರೋಗ್ಯ ಸಂಬಂಧಿ ಯೋಜನೆಗಳನ್ನು ರೂಪಿಸುವ ಕಸರತ್ತುಗಳಿಗೆ ವಿಸ್ತೃತವಾಗಿ ಹಬ್ಬಲೇಬೇಕಾಗಿದೆ.

10. ಯಾವ ವ್ಯವಸ್ಥೆಯಲ್ಲಿ ಸರ್ವರಿಗೂ ಉತ್ತಮ ಆರೋಗ್ಯ ಸುಲಭವಾಗಿ ದೊರೆಯುವಂತಹ ಅವಕಾಶವಿರುತ್ತದೆಯೋ ಅಂತಹ ಒಂದು ಪರ್ಯಾಯ ಸಾಮಾಜಿಕ-ರಾಜಕೀಯ-ಆರ್ಥಿಕ-ಸಾಂಸ್ಕೃತಿಕ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದಕ್ಕಾಗಿ ಮುನ್ನಡೆಯುತ್ತಿರುವ ಪ್ರಯತ್ನಗಳೊಂದಿಗೆ "ಸಮುದಾಯ ಆರೋಗ್ಯ ಕ್ರಿಯೆಯು" ನೇರವಾಗಿ ಕೈಜೋಡಿಸುತ್ತದೆ.

"ಆದ್ದರಿಂದ, ಕೆಲಸಕಾರ್ಯಗಳ ಬಗೆಗಳು ಒಂದು ರೀತಿಯ ವಿಧಾನಗಳೇ ಹೊರತು ಅವೇ ಅಂತಿಮ ಗುರಿಗಳಲ್ಲ ಎಂಬುದನ್ನು "ಸಮುದಾಯ ಆರೋಗ್ಯ" ಧೋರಣೆಯು ಗುರುತಿಸುತ್ತದೆ; ಅಲ್ಲದೇ, ಪ್ರಸ್ತುತವಾಗಿ ಅಸ್ತಿತ್ವದಲ್ಲಿರುವ ಕಾರ್ಯವಿಧಾನಗಳಿಗೆ ಕಾಲಕ್ಕನುಗುಣವಾಗಿ ಹೊಸ ದಿಕ್ಕುನೀಡುವುದಕ್ಕೆ ಅಥವ ಅವುಗಳನ್ನು ತೊಡೆದುಹಾಕಿ ಹೊಸ ಬಗೆಯ ಕೆಲಸಕಾರ್ಯಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಅಥವ ಸಮುದಾಯದೊಂದಿನ ಒಡನಾಟ, ಸಹವರ್ತನೆಗಳು ಹೆಚ್ಚಾದಂತೆ ಅದರ ಪರಿಣಾಮವಾಗಿ ವಿಕಾಸಗೊಳ್ಳುವ ಇನ್ನಷ್ಟು ಉತ್ತಮವಾದ, ಪ್ರಸ್ತುತವಾದ ಕೆಲಸಕಾರ್ಯಗಳ ವಿಧಾನಗಳನ್ನು ಮತ್ತು ಹೊಸ ದಿಗ್ದರ್ಶನಗಳನ್ನು ಅನುಸರಿಸುವುದಕ್ಕೆ ಅನುಕೂಲವಾಗುವಂತೆ ಪ್ರಸ್ತುತ ಕೆಲಸಕಾರ್ಯಗಳ ಪ್ರವೃತ್ತಿಯಲ್ಲಿ ಸಡಿಲತೆ ಹೊಂದಿರಬೇಕಾಗುತ್ತದೆ ಎಂಬುದನ್ನು "ಸಮುದಾಯ ಆರೋಗ್ಯ" ಧೋರಣೆಯು ಗುರುತಿಸುತ್ತದೆ."

ಭಾರತ ಸರ್ಕಾರದ ಆರೋಗ್ಯ ಸಚಿವಾಲಯವು "ಆರೋಗ್ಯ ವಿಜ್ಞಾನಗಳಿಗಾಗಿನ ರಾಷ್ಟ್ರೀಯ ವೈದ್ಯಕೀಯ ನೀತಿ" (National Education Policy for Health Sciences) ಎಂಬ ದಸ್ತಾವೇಜನ್ನು ಹೊರತಂದ ಸಂದರ್ಭದಲ್ಲಿ, 1991ರಲ್ಲಿ ಸಮುದಾಯ ಆರೋಗ್ಯ ತರಬೇತುದಾರರು (Community Health Trainers) ಸಭೆ ಸೇರಿ ಮೂರು ದಿನಗಳ ಕಾಲ ಚರ್ಚೆ ನಡೆಸಿದರು. ಅದಕ್ಕೂ ಮೊದಲು ಅವರು 'ಭಾರತದ ಸ್ವಯಂ ಆರೋಗ್ಯ ಸಂಸ್ಥೆ'ಯ (VHAI) ಆಶ್ರಯದಡಿಯಲ್ಲಿ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರೊಂದಿಗೆ ಪರಸ್ಪರ ಒಡನಾಟ, ಪರಿಚಯ ಬೆಳೆಸಿಕೊಳ್ಳುವ ಉದ್ದೇಶದಿಂದ ಸಭೆ ಸೇರಿದ್ದರು. 1991ರಲ್ಲಿ ನಡೆದ ಈ ಹೊಡ ಚರ್ಚೆಗಳು 'ಹಂಚಿತ ಕಾಳಜಿ ಮತ್ತು ವಿಕಸಿಸುತ್ತಿರುವ ಸಮಷ್ಟಿ' (Shared Concern and Evolving Collectivity) ಎಂಬ ಆರೋಗ್ಯ ಜಾಲವು ನಮ್ಮ ಚಿಂತನೆಗಳನ್ನು ಬಡಿದೆಬ್ಬಿಸುವಂಥ ಪ್ರಖರ ಘೋಷಣೆಯನ್ನು ಮಾಡುವುದಕ್ಕೆ ಕಾರಣವಾದವು. ಈ ಘೋಷಣೆಯಲ್ಲಿ ಆಗತಾನೆ ಹುಟ್ಟಿಕೊಳ್ಳುತ್ತಿದ್ದ ಸಮುದಾಯ ಆರೋಗ್ಯ ಚೌಕಟ್ಟಿನ ಹಲವಾರು ಅಂಶಗಳನ್ನು ಸಂಪೂರ್ಣವಾಗಿ ಸಮರ್ಥಿಸಿ ಬೆಂಬಲಿಸಲಾಗಿತ್ತು. ಪ್ರಾಯಶಃ ಇದು ನಮ್ಮ ದೇಶದಲ್ಲಿ ಈ ತರಬೇತುದಾರರ ಜಾಲವು ಹೊರತಂದ ಏಕಮಾತ್ರ ಜಂಟೀ ಘೋಷಣೆಯಾಗಿದ್ದು ತಳಮಟ್ಟದ ಸಮುದಾಯ ಆರೋಗ್ಯ ತರಬೇತಿ ಅನುಭವಗಳಿಂದ ಶೋಧಿಸಿ ಪಡೆದ ಸೂಕ್ಷ್ಮ ಪರಿಜ್ಞಾನ ಮತ್ತು ದೃಷ್ಟಿಕೋನಗಳನ್ನು ಸರಿಯಾದ ರೀತಿಯಲ್ಲಿ ಪ್ರತಿನಿಧಿಸುತ್ತದೆ.

'ಹಂಚಿತ ಕಾಳಜಿ ಮತ್ತು ವಿಕಸಿಸುತ್ತಿರುವ ಸಮಷ್ಠಿ'ಯ ಘೋಷಣೆ
(Shared Concern and Evolving Collectivity)

"ಸರ್ವರಿಗೂ ಆರೋಗ್ಯ" ಎಂಬ ಆದರ್ಶಮಯ ಗುರಿಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಆರೋಗ್ಯಕ್ಕಾಗಿನ ಶಿಕ್ಷಣ ನೀತಿಯು:

- ಆರೋಗ್ಯವು ಮಾನವನ ಅಭಿವೃದ್ಧಿಯ ಒಂದು ಅವಶ್ಯ ಭಾಗ ಎಂಬುದಾಗಿ ಹಾಗೂ ನ್ಯಾಯಸಮ್ಮತವಾದ ಮತ್ತು ನೈತಿಕವಾದ ಸಮಾಜವೊಂದರ ನಿರ್ಮಾಣದಲ್ಲಿ ಅದು ಒಂದು ಅವಿಭಾಜ್ಯ ಅಂಗ ಎಂಬುದಾಗಿ ಆರೋಗ್ಯವನ್ನು ಪರಿಗಣಿಸಬೇಕು.

- ಜನಮುಖಿಯಾದ ಆರೋಗ್ಯ ವ್ಯವಸ್ಥೆಯನ್ನು ನಿರ್ಮಾಣ ಮಾಡುವ ಹಾಗೂ ಅದನ್ನು ಬಹುಕಾಲ ಉಳಿಸಿಕೊಂಡು ಹೋಗುವ ಗುರಿಯನ್ನಿಟ್ಟುಕೊಂಡಿರಬೇಕು; ಆರೋಗ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಲ್ಲಿ ಜನರಿಗೆ ನೆರವಾಗಬೇಕು.

- ಸಮಾಜದ ಜನಸಾಮಾನ್ಯರಿಗೆ, ಅದರಲ್ಲೂ ವಿಶೇಷವಾಗಿ ಅತ್ಯಂತ ಕಡುಬಡವರಿಗೆ ಸುಲಭವಾಗಿ ಲಭ್ಯವಾಗುವಂತಿರಬೇಕು, ಕೈಗೆಟುಕುವಂತಿರಬೇಕು.

- ತಮಗೆ ಬೇಕೆನಿಸಿದ ಆರೋಗ್ಯ ವ್ಯವಸ್ಥೆಯನ್ನು ಆಯ್ದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ತೀರ್ಮಾನ ರೂಪಣೆ ಮಾಡುವಲ್ಲಿ, ನಿಯಂತ್ರಿಸುವಲ್ಲಿ, ಹಣ ನೀಡಿಕೆಯಲ್ಲಿ ಹಾಗೂ ಅದನ್ನು ವಿಕಾಸಗೊಳಿಸುವಲ್ಲಿ ಜನತೆಯು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಳ್ಳುವ ಮೂಲಕ ತಮ್ಮದೇ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಅವರನ್ನು ಶಕ್ತರನ್ನಾಗಿ ಮಾಡುವುದಕ್ಕೆ ತೀವ್ರವಾಗಿ ಪ್ರಯತ್ನ ನಡೆಸಬೇಕು.

- ಸಾಂಸ್ಕೃತಿಕ ಮತ್ತು ಪಾರಂಪರಿಕ ವೈದ್ಯಕೀಯ ವ್ಯವಸ್ಥೆಗಳು ಸೃಜನಶೀಲವಾಗಿದ್ದರೆ, ಪ್ರಯೋಜನಕಾರಿಯಾಗಿದ್ದರೆ ಅವುಗಳೊಂದಿಗೆ ಸಾಮರಸ್ಯದಿಂದ ಜೊತೆಗೂಡಿ ಹೋಗುವಂತಿರಬೇಕು.

- ಜನರಿಗೆ ಸೇವೆ ಸಲ್ಲಿಸುವಂತಹ ಸೂಕ್ತ ತಂತ್ರಜ್ಞಾನವನ್ನು ಬಳಸಿಕೊಂಡು ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳುವಂತಿರಬೇಕು.

ಆರೋಗ್ಯ ಮತ್ತು ಸಮುದಾಯ ಅಭಿವೃದ್ಧಿ

ಆರೋಗ್ಯ ಮತ್ತು ಸಮುದಾಯ ಅಭಿವೃದ್ಧಿಗಳ ನಡುವಿನ ಬಿಡಿಸಲಾಗದ ಬಂಧವನ್ನು ಬಹುತೇಕವಾಗಿ ಎಲ್ಲರೂ ಗುರುತಿಸುತ್ತಾರೆ. ಈ ವಿದ್ಯಮಾನವನ್ನು ಪರಿಗಣನೆಗೆ ತೆಗೆದುಕೊಂಡು ಆರೋಗ್ಯಕ್ಕೆ ಅವಶ್ಯವಾದ ಪ್ರಮಾಣದಲ್ಲಿ ಹಣನೀಡುವ ಮೂಲಕ ಅದು ಬಜೆಟ್‌ನಲ್ಲಿ ಪ್ರತಿಫಲನಗೊಳ್ಳುವಂತೆ ಮಾಡಬೇಕು. ಸಂಪನ್ಮೂಲಗಳ ಕೊರತೆಯ ಪ್ರತಿಕೂಲ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ಜನಸಮೂಹಗಳ ಆದ್ಯತೆಯ ಅಗತ್ಯಗಳಿಗೆ ಮೊದಲ ಪ್ರಾಶಸ್ತ್ಯ ಕೊಡಬೇಕು. ಈಗಾಗಲೇ ನಿಧಾನವಾಗಿ ಆಸ್ಪತ್ರೆ ಮತ್ತು ಡಿಸ್ಪೆನ್ಸರಿಗಳಿಂದ ಸಮುದಾಯದೆಡೆಗೆ ಪರಿವರ್ತನೆಗೊಳ್ಳುತ್ತಿರುವ ಆರೋಗ್ಯ ವಿದ್ಯಮಾನವನ್ನು ಪರಿಗಣಿಸುತ್ತಲೇ ನಾವು ಸಮುದಾಯದಲ್ಲಿ ಆರೋಗ್ಯ ಜಾಗ್ರತಿಯನ್ನು ಮೂಡಿಸುತ್ತಾ ಇನ್ನಷ್ಟು ಮುಂದ್ಸಾಗಿ ಗುಣಕಾರಿ ಅಂಶದಿಂದ ಉತ್ತೇಜನಾಕಾರಿ ಅಂಶದೆಡೆಗೆ ಹಾಗೂ ಅಲ್ಲಿಂದ ಸಮುದಾಯ ಆರೋಗ್ಯದೆಡೆಗೆ ಹೋಗುವ ಮೂಲಕ ಇನ್ನಷ್ಟು ಪ್ರಗತಿ ಸಾಧಿಸಬೇಕಿದೆ. ಎಲ್ಲಾ ಆರೋಗ್ಯ ಮತ್ತು ಅಭಿವೃದ್ಧಿ ಕಾರ್ಯಕರ್ತರು ಜನಸಮೂಹಗಳೊಂದಿಗೆ ಬೆರೆತು ಒಂದು ತಂಡವಾಗಿ ಒಗ್ಗೂಡಿ ಕೆಲಸ ಮಾಡಬೇಕು. ಪರಸ್ಪರ ಅಭಿಪ್ರಾಯ ಮತ್ತು ಅನುಭವಗಳನ್ನು ಹಂಚಿಕೊಳ್ಳುವ ಈ ಪ್ರಕ್ರಿಯೆಯಲ್ಲಿ ಪ್ರಾಥಮಿಕ ಸಮುದಾಯ ಹಂತದ ಕಾರ್ಯಕರ್ತರ ಮೇಲೆ ಹೆಚ್ಚಿನ ಹೊರೆ ಬೀಳದಂತೆ ಎಚ್ಚರಿಕೆ ವಹಿಸಬೇಕು.

ಆರೋಗ್ಯ ವ್ಯವಸ್ಥೆ ಮತ್ತು ರೂಢಿಗಳು

ನಮ್ಮಲ್ಲಿ ಅನೇಕ ವಿಧವಾದ ಆರೋಗ್ಯ ವ್ಯವಸ್ಥೆಗಳು ಮತ್ತು ರೂಢಿಗಳು ಜನಪ್ರಿಯವಾಗಿದ್ದು ಅವುಗಳಲ್ಲಿ ಬಹುತೇಕವುಗಳ ಮೂಲ ಬೇರುಗಳು ನಮ್ಮ ಪುರಾತನ ಕಾಲದ ಚರಿತ್ರೆಯೊಳಗೆ ಹುದುಗಿವೆ. ಈ ವ್ಯವಸ್ಥೆಗಳ ನಿರ್ದಿಷ್ಟ ಸಾಮರ್ಥ್ಯಗಳು ಮತ್ತು ಮಿತಿಗಳನ್ನು ಸರಿಯಾಗಿ ಗುರುತಿಸಬೇಕು; ಅವುಗಳನ್ನು ಮೌಲ್ಯಯುತವಾದ ಮತ್ತು

ಪರಿಣಾಮಕಾರಿಯಾದ ಪರಂಪರಾಗತ ಸೊತ್ತುಗಳನ್ನಾಗಿ ಪರಿಗಣಿಸಿ ಪೊರೆದು ಪೋಶಿಸಬೇಕು. ಈ ಆರೋಗ್ಯ ವ್ಯವಸ್ಥೆಗಳನ್ನು ಕುರಿತಂತೆ ಹಾಗೂ ಜನರ ವಿವಿಧ ಆರೋಗ್ಯ ಅಗತ್ಯಗಳನ್ನು ಈಡೇರಿಸುವುವಲ್ಲಿ ಅವು ನಿರ್ವಹಿಸುವ ಪಾತ್ರವನ್ನು ಕುರಿತಂತೆ ಆಳವಾಗಿ ಅಧ್ಯಯನ ಮಾಡುವುದಕ್ಕೆ, ಅರ್ಥಮಾಡಿಕೊಳ್ಳುವುದಕ್ಕೆ ಬಹಳಷ್ಟು ಮಹತ್ವ ಕೊಡಬೇಕು. ಈ ಪಾರಂಪರಿಕ ವ್ಯವಸ್ಥೆಗಳಲ್ಲದೇ, ಸರ್ಕಾರಿ ಆರೋಗ್ಯ ಪಾಲನಾ ವ್ಯವಸ್ಥೆ, ಖಾಸಗಿ ಆರೋಗ್ಯ ಪಾಲನಾ ವ್ಯವಸ್ಥೆ ಹಾಗೂ ಸ್ವಯಂಸೇವಾ ಆರೋಗ್ಯ ವ್ಯವಸ್ಥೆಗಳೆಂಬ ಸಂಕೀರ್ಣತೆಯೂ ಇದೆ. ಈ ಎಲ್ಲಾ ವ್ಯವಸ್ಥೆಗಳನ್ನು ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರ ಮಟ್ಟಿಗೆ ವಿಕೇಂದ್ರೀಕರಣಗೊಳಿಸಬೇಕು; ಜೊತೆಗೆ ಅವು ಜನರಿಗೆ ಉತ್ತರದಾಯಿಯಾಗಿರುವಂತೆ ನೋಡಿಕೊಳ್ಳಬೇಕು.

ಆರೋಗ್ಯ ಮಾನವ ಶಕ್ತಿಯ ಅಭಿವೃದ್ಧಿ

ಶಿಕ್ಷಣ ಮತ್ತು ತರಬೇತಿಗಳ ಪ್ರಸ್ತುತ ಸನ್ನಿವೇಶವನ್ನು ಪರಾಮರ್ಶಿಸಬೇಕಿದೆ. ಯಾವುದೇ ಪ್ರಯೋಜನಕಾರಿಯಾಗಿದೆಯೋ ಅದನ್ನು ಉಳಿಸಿಕೊಂಡು ಯಾವುದು ಅಪ್ರಯೋಜನಕಾರಿಯಾಗಿದೆಯೋ ಅದನ್ನು ತ್ಯಜಿಸಬೇಕು. ಆರೋಗ್ಯ ಶಿಕ್ಷಣದ ಪ್ರತೀ ಹಂತದಲ್ಲೂ ನೈತಿಕತೆ ಮತ್ತು ಮೌಲ್ಯಗಳು, ಉತ್ತಮ ನಡವಳಿಕೆಗಳು, ಸಾಮಾಜಿಕ ವಿಜ್ಞಾನ, ಆಡಳಿತ ನಿರ್ವಹಣೆ, ಆರೋಗ್ಯದ ಆರ್ಥಿಕತೆ ಮತ್ತು ಪರಿಸರ ಹವಮಾನ ಮುಂತಾದ ವಿಷಯಗಳನ್ನು ಸೇರ್ಪಡೆಗೊಳಿಸಿ ಅಧ್ಯಯನ ಮಾಡಬೇಕು. ಸ್ಥಳೀಯವಾಗಿ ಪ್ರಸ್ತುತವಾಗಿರುವ ಜ್ಞಾನ ಮತ್ತು ಕುಶಲತೆಗಳನ್ನೊಳಗೊಂಡ ಒಂದು ಜ್ಞಾನಭಂಡಾರವನ್ನು ರೂಪಿಸುವ ಅವಶ್ಯಕತೆಯಿದೆ; ಹಾಗೂ ಸರಿಯಾದ ವರ್ತನೆಗಳನ್ನು ರೂಢಿಸಿಕೊಳ್ಳುವ ಮನೋಭಾವವನ್ನು ಬೆಳೆಸುವ ಅವಶ್ಯಕತೆಯಿದೆ. ತಮ್ಮ ಆರೋಗ್ಯವನ್ನು ನಿರ್ವಹಣೆ ಮಾಡಿಕೊಳ್ಳುವ ಜನರ ಸಾಮರ್ಥ್ಯವನ್ನು ಹಾಗೂ ಆ ನಿಟ್ಟಿನಲ್ಲಿ ಅವರು ನಿರ್ವಹಿಸಬಲ್ಲ ಜವಾಬ್ದಾರಿಗಳನ್ನು ಗುರುತಿಸಬೇಕು.

ಆರೋಗ್ಯ ಸಿಬ್ಬಂಧಿ

ವಿಭಿನ್ನ ಬಗೆಯ ಆರೋಗ್ಯ ಪಾಲನಾ ಹಂತಗಳಿಗೆ ವಿಭಿನ್ನ ದರ್ಜೆಯ ಆರೋಗ್ಯ ಕಾರ್ಯಕರ್ತರು ಬೇಕಾಗುತ್ತಾರೆ; ಅವರು ಈ ಕೆಳಗಿನವರನ್ನು ಒಳಗೊಂಡಿರುತ್ತಾರೆ:

- ಸ್ವಯಂಸೇವಾ ಪ್ರವೃತ್ತಿಯ ಆರೋಗ್ಯ ಕಾರ್ಯಕರ್ತರು, ಅರೆ-ಸರ್ಕಾರಿ ಮತ್ತು ಸರ್ಕಾರಿ ಆರೋಗ್ಯ ಕಾರ್ಯಕರ್ತರು, ಶಿಕ್ಷಕರು, ಮತ್ತಿತರರನ್ನು ಒಳಗೊಂಡಂತೆ ಸಮುದಾಯ ಮಟ್ಟದಲ್ಲಿ ಕಾರ್ಯನಿರ್ವಹಿಸಬಲ್ಲ ಜನರ ತಂಡ.

- ವೈದ್ಯರು, ನರ್ಸ್‌ಗಳು, ದಂತ ವೈದ್ಯರು, ಆರೋಗ್ಯ ವೃತ್ತಿಪರರು, ತಂತ್ರಜ್ಞರು ಮತ್ತು ಅದೇ ರೀತಿಯ ವಿಭಾಗಕ್ಕೆ ಸೇರಿದ ಇನ್ನಿತರು. ಗುಣಾತ್ಮಕವಾಗಿಯೂ ಹಾಗೂ ಪ್ರಮಾಣಾತ್ಮಕವಾಗಿಯೂ ವಿಭಿನ್ನ ವಿಭಾಗಗಳ ವೃತ್ತಿಪರರನ್ನು ಸಾಧ್ಯವಾದಷ್ಟೂ ಪ್ರಮಾಣದಲ್ಲಿ ಮಿಶ್ರಣ ಮಾಡುವ ಅವಶ್ಯಕತೆಯಿದೆ; ಹಾಗೆ ಮಾಡುವಾಗ ಸಮುದಾಯ ಹಂತದಲ್ಲಿ ಕಾರ್ಯನಿರ್ವಹಿಸುವ ಆರೋಗ್ಯ ಕಾರ್ಯಕರ್ತರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು.

ಆರೋಗ್ಯ ತಂಡಗಳು

ಆರೋಗ್ಯ ತಂಡಗಳಿಗೆ ಕೊಡುವ ತರಬೇತಿ ಜನರ ಆರೋಗ್ಯಕ್ಕಾಗಿ ಆರೋಗ್ಯ ತಂಡಗಳ ಸದಸ್ಯರೆಲ್ಲರೂ ಒಂದು ತಂಡವಾಗಿ ಒಗ್ಗೂಡಿ ಕಾರ್ಯನಿರ್ವಹಿಸುವಂತೆ ಅವರನ್ನು ಸಮರ್ಥರನ್ನಾಗಿ ಮಾಡುವ ರೀತಿಯಲ್ಲಿ ಇರಬೇಕು.

ನಿರಂತರ ಶಿಕ್ಷಣ

ಬಹಳ ದೂರದ ಪ್ರದೇಶದ ಯಾವುದೋ ಮೂಲೆಯಲ್ಲಿ ಕೆಲಸ ಮಾಡುತ್ತಿರುವ ಆರೋಗ್ಯ ಕಾರ್ಯಕರ್ತನೂ ನಿರಂತರ ಶಿಕ್ಷಣದ ಪ್ರಯೋಜನ ಪಡೆದುಕೊಳ್ಳುವಂತೆ ಯೋಜಿಸಬೇಕು. ದೂರ ಶಿಕ್ಷಣ ಮತ್ತು ಇನ್ನಿತರ ಕಲಿಕಾ ವಿಧಾನಗಳ ಮೂಲಕ ಇದನ್ನು ಸಾಧಿಸಬಹುದು. ಶಿಕ್ಷಣ ನೀಡುವಾಗ ಜ್ಞಾನ, ಕುಶಲತೆ ಮತ್ತು ಧೋರಣೆಗಳ ಜೊತೆಗೆ ಸಾಮಾಜಿಕ ಗುರಿಗಳ ಮೇಲೆ ಹೆಚ್ಚಿನ ಒತ್ತು ನೀಡಬೇಕು.

ತರಬೇತಿ ವ್ಯೂಹತಂತ್ರಗಳು

ಆರೋಗ್ಯಕ್ಕಾಗಿನ ಶಿಕ್ಷಣವು ಪ್ರಧಾನವಾಗಿ ಸಮುದಾಯಮುಖಿಯಾಗಿದ್ದು ಜನರನ್ನು ಆಧರಿಸಿರಬೇಕು; ಇದರಿಂದ ಆರೋಗ್ಯ ವೃತ್ತಿಪರರು/ಆರೋಗ್ಯ ಕಾರ್ಯಕರ್ತರು ಆರೋಗ್ಯ ಸಮಸ್ಯೆಗಳನ್ನು ಸಮರ್ಥವಾಗಿ ನಿಭಾಯಿಸುವುದಕ್ಕೆ ಸಾಧ್ಯವಾಗುತ್ತದೆ.

ಸಾಮರ್ಥ್ಯವನ್ನಾಧರಿಸಿದ ಶಿಕ್ಷಣ

ಸಾಮರ್ಥ್ಯವನ್ನಾಧರಿಸಿದ ಶಿಕ್ಷಣವನ್ನು ಉತ್ತೇಜಿಸುತ್ತಾ ವಿವಿಧ ಹಂತಗಳಲ್ಲಿ ಕೆಲಸ ಮಾಡುವ ಕಾರ್ಯಕರ್ತರು ತಮ್ಮ ಕಾರ್ಯಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸಮರ್ಥರಾಗುವಂತೆ ಅವರಲ್ಲಿ ಸೂಕ್ತವಾದ ಕೌಶಲ್ಯಗಳನ್ನು, ಧೋರಣೆಗಳನ್ನು ಮತ್ತು ಜ್ಞಾನವನ್ನು ಬೆಳೆಸುವ ತರಬೇತಿ ನೀಡಬೇಕು. ಆರೋಗ್ಯ ನೀಡಿಕೆಯ ವ್ಯವಸ್ಥೆಯ ವಿವಿಧ ಹಂತಗಳಲ್ಲಿ ತರಬೇತಿ ನೀಡುವ ಸಂಸ್ಥೆ ಅಥವ ಸಂಘಟನೆಗಳಾಚೆಗೆ ಕಲಿಯುವುದಕ್ಕೆ ಅವಕಾಶ ಕಲ್ಪಿಸಬೇಕು. ಈ ಗುರಿಯನ್ನು ಸಾಧಿಸುವುದಕ್ಕೆ ನೆರವಾಗಬಲ್ಲ ಒಂದು ವಿಧಾನ ಎಂದರೆ ಸರ್ಕಾರಿ, ಸ್ವಯಂಸೇವಾ ಹಾಗೂ ಅಭಿವೃದ್ಧಿ ಯೋಜನೆಗಳಲ್ಲಿ ಸಮುದಾಯದ ಚುನಾಯಿತರನ್ನು ಹೆಚ್ಚು ಹೆಚ್ಚಾಗಿ ತೊಡಗಿಸಿಕೊಳ್ಳುವುದು.

ಮೌಲ್ಯ ದೃಷ್ಟಿಕೋನ

ವಯಕ್ತಿಕ ಮಟ್ಟದಲ್ಲಿ ಸನ್ನಡತೆಗಳನ್ನು ಮತ್ತು ಉತ್ತಮ ಸಂಬಂಧಗಳನ್ನು ಬೆಳೆಸಿಕೊಳ್ಳುವುದು ಹಾಗೂ ಸಾಮಾಜಿಕ ಮಟ್ಟದಲ್ಲಿ ಆರೋಗ್ಯ ಹಕ್ಕನ್ನು ಪ್ರತಿಪಾದಿಸುವುದು ಮತ್ತು ನ್ಯಾಯವನ್ನು ಸಮಾನವಾಗಿ ಹಂಚುವುದು – ಮುಂತಾದವುಗಳನ್ನೂ ಒಳಗೊಂಡಂತೆ ಎಲ್ಲಾ ಹಂತಗಳ ತರಬೇತಿ ಕಾರ್ಯಕ್ರಮಗಳಲ್ಲೂ ಉತ್ತಮ ಮೌಲ್ಯಗಳಿಗೆ, ನೈತಿಕತೆಗಳಿಗೆ ಹೆಚ್ಚಿನ ಮಹತ್ವ ನೀಡಬೇಕು.

ಆರೋಗ್ಯ ಮತ್ತು ಸಂಸ್ಕೃತಿ

ಎಲ್ಲಾ ತರಬೇತಿ ಕಾರ್ಯಕ್ರಮಗಳು ಜನರ ಬದುಕಿನ ವಿಧಾನವನ್ನು ಮತ್ತು ಅವರ ಆಚರಣೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು, ಅವುಗಳಿಂದ ಕಲಿಯಬೇಕು ಹಾಗೂ ಅವುಗಳ ಆಧಾರದಲ್ಲಿ ಹೊಸತನ್ನು ನಿರ್ಮಾಣ ಮಾಡಬೇಕು. ತರಬೇತಿ ನೀಡುವವರು ಮತ್ತು ತರಬೇತಿ ಪಡೆದುಕೊಳ್ಳುವವರು ಇಬ್ಬರೂ ಕಲಿಯಬೇಕೆಂಬ ಧೋರಣೆಯಿಂದ ಈ ಕ್ಷೇತ್ರವನ್ನು ತಲುಪಬೇಕು.

ಸರ್ಕಾರಿ ಮತ್ತು ಸರ್ಕಾರೇತರ ಕಾರ್ಯಕ್ರಮಗಳು

ಆರೋಗ್ಯ ಪಾಲನಾ ಸೇವೆಗಳನ್ನು ಒದಗಿಸುವುದು ಪ್ರಾಥಮಿಕವಾಗಿ ಸರ್ಕಾರದ ಕೆಲಸವಾಗಿದ್ದು ಸರ್ಕಾರೇತರ ಸ್ವಯಂ ಸೇವಾ ಸಂಘಟನೆಗಳೂ (NGOs) ತಮ್ಮದೇ ಆದ ಪಾತ್ರವನ್ನು ನಿರ್ವಹಿಸುತ್ತವೆ. ಸಂಖ್ಯೆಯಲ್ಲಿ, ವಿಧಾನಗಳಲ್ಲಿ, ಆರೋಗ್ಯ ಕಾರ್ಯಕರ್ತರ ಗುಣಮಟ್ಟಗಳಲ್ಲಿ ಮತ್ತು ಪರಿಣಾಮಕಾರಿ ತರಬೇತಿ ಕಾರ್ಯಕ್ರಮಗಳಲ್ಲಿ ಸರ್ಕಾರ ಮತ್ತು ಎನ್‌ಜಿಓಗಳೆರಡರ ಈ ಮಿಶ್ರಣವನ್ನು ಸಾಧ್ಯವಾದಷ್ಟೂ ಹೆಚ್ಚಿನ ಪ್ರಮಾಣದಲ್ಲಿ ಸಾಧಿಸಬೇಕೆಂದರೆ ಸರ್ಕಾರಿ ಮತ್ತು ಸರ್ಕಾರೇತರ ಕ್ಷೇತ್ರಗಳ ನಡುವೆ ಒಂದು ಅನ್ಯೋನ್ಯ ಸಹವರ್ತನೆ, ಒಡನಾಟಗಳನ್ನು ಬೆಳೆಸುವುದಕ್ಕೆ ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಹಾಕಬೇಕು; ಈ ಎರಡೂ ಕ್ಷೇತ್ರಗಳು ಒಂದು ಮತ್ತೊಂದರಿಂದ ಕಲಿಯುವ ಪ್ರಬುದ್ಧತೆ ತೋರಬೇಕು; ಒಂದರ ಪ್ರಯತ್ನಗಳಿಗೆ ಮತ್ತೊಂದು ಬೆಂಬಲವಾಗಿ ನಿಲ್ಲಬೇಕು.

ಆರೋಗ್ಯ ಪಾಲನಾ ಮತ್ತು ಔಷಧೋಪಚಾರ ವ್ಯವಸ್ಥೆ

ಎಲ್ಲಾ ತರಬೇತಿ ಕಾರ್ಯಕ್ರಮಗಳು ಜನರ ಆರೋಗ್ಯ ಸಂಸ್ಕೃತಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಆರೋಗ್ಯ ಪಾಲನಾ ಮತ್ತು ಔಷಧೋಪಚಾರ ವ್ಯವಸ್ಥೆಯ ಒತ್ತು ಏನೇ ಆಗಿರಲಿ, ತರಬೇತಿ ಕಾರ್ಯಕ್ರಮವೊಂದರಲ್ಲಿ ನಮ್ಮ ದೇಶದಲ್ಲಿರುವ ವಿಭಿನ್ನ ಸ್ವರೂಪದ ಆರೋಗ್ಯ ವ್ಯವಸ್ಥೆಗಳ ಮತ್ತು ಆರೋಗ್ಯ ಸಂಪ್ರದಾಯಗಳ ವೈವಿಧ್ಯತೆಗಳ ಬಗ್ಗೆ ಜಾಗ್ರತಿ ಮೂಡಿಸಬೇಕು; ಎಲ್ಲಾ ಆರೋಗ್ಯ ವ್ಯವಸ್ಥೆಗಳನ್ನೂ ಗೌರವದಿಂದ ಕಾಣುವ ಮನೋಭಾವ ಬೆಳೆಸಬೇಕು.

ಮೌಲ್ಯಮಾಪನ

ಎಲ್ಲಾ ತರಬೇತಿ ಕಾರ್ಯಕ್ರಮಗಳೂ ತಂತಮ್ಮ ಗುರಿಸಾಧನೆಯಲ್ಲಿ ಎಷ್ಟು ಪ್ರಮಾಣದಲ್ಲಿ ಪರಿಣಾಮಕಾರಿಯಾಗಿವೆ ಎಂಬುದನ್ನು ಅರಿಯುವುದಕ್ಕಾಗಿ ಎಲ್ಲಾ ತರಬೇತಿ ಕಾರ್ಯಕ್ರಮಗಳನ್ನೂ

ಮೌಲ್ಯಮಾಪನಕ್ಕೊಳಪಡಿಸಬೇಕು. ಖಿದ್ದಾಗಿ ತರಬೇತಿಗೊಳಪಟ್ಟವರು ಮತ್ತು ಜನರೇ ಈ ಮೌಲ್ಯಮಾಪನ ಮಾಡುವ ಪ್ರಕ್ರಿಯೆಯನ್ನು ಉತ್ತೇಜಿಸಬೇಕು.

ತರಬೇತಿದಾರರ ತರಬೇತಿ

ಸಮುದಾಯಮುಖಿಯಾಗಿರುವ, ಜನಾಧಾರಿತವಾಗಿರುವ ಆರೋಗ್ಯ ಪಾಲನೆಗಾಗಿ ತರಬೇತಿ ನೀಡುವವರಿಗೂ ತರಬೇತಿ ನೀಡುವ ಅವಶ್ಯಕತೆಯಿದೆ. ತರಬೇತುದಾರರು ತರಬೇತಿ ಪಡೆದುಕೊಳ್ಳುವವರಿಗೆ ಆದರ್ಶಪ್ರಾಯವಾಗಿರಬೇಕು. ಎಲ್ಲಾ ಔಪಚಾರಿಕ ಉಪನ್ಯಾಸ ಸರಣಿಗಳಲ್ಲೂ ತರಬೇತುದಾರರು ತಮ್ಮ ಪೂರ್ಣ ಸಮಯವನ್ನು ತರಬೇತಿಗಾಗಿ ಸಮರ್ಪಿಸಬೇಕು.

ತರಬೇತಿಯ ವಿಧಾನಗಳು

ಪರಿಸ್ಥಿತಿಗೆ ತಕ್ಕಂತೆ ವಿಭಿನ್ನ ಮಾದರಿಯ ಸೂಕ್ತ ಕಲಿಕಾ ಮತ್ತು ತರಬೇತಿ ವಿಧಾನಗಳನ್ನು ಅನುಸರಿಸಬೇಕು. ಸಾಧ್ಯವಾದಷ್ಟು ಮಟ್ಟಿಗೆ ಎಲ್ಲಾ ತರಬೇತಿಗಳನ್ನು ಪ್ರಾಯೋಗಿಕವಾಗಿ ಮಾಡಬೇಕು.

ನವೀನ ಮಾದರಿಯ ಕಾರ್ಯಕ್ರಮಗಳು

"ಸರ್ವರಿಗೂ ಆರೋಗ್ಯ" ಸಾಧನೆಗೆ ಬೇಕಿರುವ ಎಲ್ಲಾ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಸರ್ಕಾರಿ ಕ್ಷೇತ್ರವಾಗಿರಲಿ ಅಥವ ಸರ್ಕಾರೇತರ ಸ್ವಯಂಸೇವಾ ಕ್ಷೇತ್ರವಾಗಿರಲಿ ನವೀನ ಮಾದರಿಯ ತರಬೇತಿ ಕಾರ್ಯಕ್ರಮಗಳನ್ನು ಉತ್ತೇಜಿಸಿ, ಬೆಂಬಲಿಸಬೇಕು. ನವೀನ ಮಾದರಿಯ ಕಾರ್ಯಕ್ರಮಗಳ ವಿಚಾರದಲ್ಲಿ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವುದಕ್ಕೋಸ್ಕರ ಸ್ಥಾಪಿಸಲಾಗಿರುವ ರಾಷ್ಟ್ರೀಯ ಸಂಸ್ಥೆಗಳು ಈ ವಿಚಾರದಲ್ಲಿ ಜನರಿಗೆ ಉತ್ತರದಾಯಿಗಳಾಗಿರಬೇಕು.

ವಾಸ್ತವ ಪರಿಸ್ಥಿತಿಗಳಿಗೆ ಪ್ರಸ್ತುತವಾಗಿರುವ ನವೀನ ಮಾದರಿಗಳನ್ನು ಉತ್ತೇಜಿಸುವಲ್ಲಿ ತೊಡಗಿರುವ ವ್ಯಕ್ತಿಗಳ/ಸಂಸ್ಥೆಗಳ ಜಾಲಗಳನ್ನು ಬೆಂಬಲಿಸಿ, ಬಲಗೊಳಿಸಬೇಕು.

ನಮ್ಮ ವಿಶಾಲ ಜನಸಮೂಹಗಳ (ಬಡ ಮತ್ತು ಮೂಲೆಗೆ ದೂಡಲ್ಪಟ್ಟ ಅವಕಾಶ ವಂಚಿತರು) ಆರೋಗ್ಯ ಅಗತ್ಯಗಳಿಗೆ ಆರೋಗ್ಯ ವಿಜ್ಞಾನಗಳೇ ಜವಾಬ್ದಾರಿಯಾಗಿವೆ; ಈ ಆರೋಗ್ಯ ವಿಜ್ಞಾನಗಳಿಗೆ ಸಂಬಂಧಿಸಿದಂತೆ ಇಂತಹ ಒಂದು ಶಿಕ್ಷಣ ನೀತಿಯನ್ನು ವಿಕಾಸಗೊಳಿಸುವ ನಿಟ್ಟಿನಲ್ಲಿ ಎಲ್ಲರೂ ಒಗ್ಗೂಡಿ ಕೆಲಸ ಮಾಡುವ ಪ್ರಕ್ರಿಯೆಯನ್ನು ನಮ್ಮ 'ಹಂಚಿತ ಕಾಳಜಿ ಮತ್ತು ವಿಕಸಿಸುತ್ತಿರುವ ಸಮಷ್ಠಿ'ಯ ಈ ಘೋಷಣೆಯು ಪ್ರಾರಂಭಿಸಿದೆ. ನಮ್ಮ ಸ್ವಂತ ವ್ಯಕ್ತಿಗತ/ಯೋಜನೆ/ಕಾರ್ಯಕ್ರಮ ಸಾಂಸ್ಥಿಕ ಅನುಭವಗಳ ಮೇಲೆ ಕಾರ್ಯನಿರ್ವಹಿಸುತ್ತಲೇ ಅದೇ ವೇಳೆಯಲ್ಲಿ ನಾವು ಜೊತೆಗೂಡಿ ಕೆಲಸ ಮಾಡೋಣವೆಂದೂ, ದೇಶದಲ್ಲಿ ಆರೋಗ್ಯ ಮಾನವ ಶಕ್ತಿಯ ತರಬೇತಿಯಲ್ಲಿ ಈ ಬದಲಾವಣೆಗಳನ್ನು ಮತ್ತು ಈ ಹೊಸ ದೃಷ್ಟಿಕೋನಗಳನ್ನು ಜಾರಿಗೆ ತರುವಂತೆ ಒತ್ತಾಯಿಸೋಣವೆಂದೂ ತೀರ್ಮಾನಿಸಿದ್ದೇವೆ.

'ಸಮುದಾಯ ಆರೋಗ್ಯಮುಖಿ ಆಸ್ಪತ್ರೆ': ತಪ್ಪು ಕಲ್ಪನೆಯೇ ಅಥವ ಒಂದು ವಾಸ್ತವ ಸವಾಲೆ?

ಆಧುನಿಕ ಆಸ್ಪತ್ರೆಯ ಗೋಡೆಯ ಮೇಲೆ ಕೆತ್ತಲಾದ ಘೋಷವಾಕ್ಯಗಳು

ಸಮುದಾಯ ಆರೋಗ್ಯ ಧೋರಣೆಯು ಒಂದು ರೀತಿಯಲ್ಲಿ ಆಸ್ಪತ್ರೆ ವಿರೋಧಿ, ಡಿಸ್ಪೆನ್ಸರಿ ವಿರೋಧಿ, ವೈದ್ಯರ ವಿರೋಧಿ, ಔಷಧೋಪಚಾರಗಳ ವಿರೋಧಿ ಹಾಗೂ ತಂತ್ರಜ್ಞಾನ ವಿರೋಧಿ ಎಂದು ಭಾವಿಸುವ ಪರಿಪಾಠ ಸಮುದಾಯ ಆರೋಗ್ಯ ಚಳವಳಿ ವಿಕಾಸಗೊಳ್ಳುತ್ತಿದ್ದ ಆರಂಭಿಕ ಘಟ್ಟದಲ್ಲಿ ಬೆಳೆದಿತ್ತು. ವಾಸ್ತವದಲ್ಲಿ ಇದೊಂದು ತಪ್ಪು ಗ್ರಹಿಕೆಯಾಗಿತ್ತು: ಆಸ್ಪತ್ರೆ, ಕೇಂದ್ರ, ಸಂಸ್ಥೆಗಳಂದಾಚೆಗೆ ಹೊರನಡೆದು ಸಮುದಾಯ ಹಂತದ ಆರೋಗ್ಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕೆಂದು ಆರೋಗ್ಯ ವೃತ್ತಿಪರರನ್ನು ಮತ್ತು ಸಾಂಸ್ಥೀಕರಣಗೊಂಡ ಜೈವಿಕ-ವೈದ್ಯಕೀಯ ಕೇಂದ್ರಗಳನ್ನು ಉತ್ಸಾಹದಿಂದ ಪ್ರೇರೇಪಸಿಸುತ್ತಿದ್ದ ಸಮುದಾಯ ಆರೋಗ್ಯ ಕಾರ್ಯಕರ್ತರ ಹುಮ್ಮಸ್ಸು, ಹುರುಪುಗಳು ಈ ರೀತಿಯ ತಪ್ಪು ಗ್ರಹಿಕೆಗೆ ಹಾದಿಮಾಡಿಕೊಟ್ಟಿದ್ದವು; ಅದೇ ರೀತಿಯಲ್ಲಿ, 'ವೈದ್ಯಕೀಯ ಪಾಲನೆ'ಯ ಮೇಲೆ ತಮಗಿರುವ ವೃತ್ತಿಪರ ಮತ್ತು ಸಾಮಾಜಿಕ ನಿಯಂತ್ರಣವನ್ನು ಈ ಸಮುದಾಯ ಆರೋಗ್ಯ ಚಳವಳಿಯು ಕಿತ್ತುಕೊಂಡುಬಿಡುತ್ತದೆ ಎಂಬ ಭಯ ಜೈವಿಕ-ವೈದ್ಯಕೀಯ ಸಂಸ್ಥೆಗಳ ನಿರ್ಮಾತೃಗಳಿಗಿದ್ದುದು ಈ

ತಪ್ಪು ಅಭಿಪ್ರಾಯಕ್ಕೆ ಇನ್ನೊಂದು ಕಾರಣವಾಗಿತ್ತು. (ಬಹಳಷ್ಟು ಸಂದರ್ಭಗಳಲ್ಲಿ 'ಆರೋಗ್ಯ ಪಾಲನೆ'ಗೆ ಸಂವಾದಿಯಾಗಿ, ಪರ್ಯಾಯವಾಗಿ 'ವೈದ್ಯಕೀಯ ಪಾಲನೆ' ಎಂಬುದಾಗಿ ಬಳಸಲಾಗುತ್ತಿತ್ತು).

1980ರ ದಶಕದ ಮಧ್ಯ ಭಾಗದ ಹೊತ್ತಿಗೆ ಅವೆರಡೂ ಧೋರಣೆಗಳು ಪ್ರಸ್ಪರ ಮುಖಾಮುಖಿಯಾಗಿ ನಿಂತ ಸ್ಪರ್ಧಿಗಳು ಎಂಬ ಭಾವನೆ ಕಡಿಮೆಯಾಗುತ್ತಾ ಹೋಗಿ ಅವೆರಡೂ ಒಂದಕ್ಕೊಂದು ಮುಖಾಮುಖಿಯಲ್ಲ, ಬದಲಿಗೆ ಒಂದಕ್ಕೊಂದು ಪೂರಕ ಎಂದು ಗುರುತಿಸುವ ಆರಂಭಿಕ ಧೋರಣೆ ಬೆಳೆಯಲಾರಂಭಿಸಿತು. ಆಗ ಉದ್ಭವವಾದ ಪ್ರಶ್ನೆ ಏನೆಂದರೆ: ಜೈವಿಕ-ವೈದ್ಯಕೀಯ ಆಸ್ಪತ್ರೆಗಳು 'ಸಮುದಾಯ ಆರೋಗ್ಯಮುಖ'ಯಾಗುವುದಕ್ಕೆ ಸಾಧ್ಯವೆ? ಎಂಬುದು. 1988ರಲ್ಲೇ ಬೆಂಗಳೂರಿನಲ್ಲಿ ನಡೆದ ಚರ್ಚೆಯು ಇದೇ ಪ್ರಶ್ನೆಯನ್ನು ಕೈಗೆತ್ತಿಕೊಂಡಿತ್ತು. 1990ರ ಮಧ್ಯ ಭಾಗದಲ್ಲಿ ಈ ಚರ್ಚೆಗಳಿಂದ ಬಂದ ತೀರ್ಮಾನವನ್ನು ಒಂದು ಘೋಷವಾಕ್ಯದ ರೂಪದಲ್ಲಿ ಮಿಷನ್ ಆಸ್ಪತ್ರೆಯ ಗೋಡೆಯ ಮೇಲೆ ಕೆತ್ತಿಸಲಾಯಿತು; ಈ ಆಸ್ಪತ್ರೆಯು 'ಸಮುದಾಯ ಆರೋಗ್ಯಮುಖ' ಎಂಬುದನ್ನು ಸಂಕೇತಿಸುವುದಕ್ಕಾಗಿ ಹಾಗೆ ಮಾಡಲಾಗಿತ್ತು. ಪ್ರಸ್ತುತವಾಗಿ ರೋಗಕ್ಕೆ ಚಿಕಿತ್ಸೆ ಕೊಡುವ ಸಂಸ್ಥೆಗಳಾಗಿರುವ ಕೇಂದ್ರಗಳು ದ್ವಿತೀಯ ಮತ್ತು ತೃತೀಯ ಹಂತದ ಘಟಕಗಳ ಸಕ್ರಿಯ ಬೆಂಬಲದೊಂದಿಗೆ ಸಮುದಾಯ ಆರೋಗ್ಯವನ್ನು ಉತ್ತೇಜಿಸುವ ಕೇಂದ್ರಗಳಾಗಿ ಬದಲಾಗುವ ಈ ರೂಪಾವಳಿ ಪರಿವರ್ತನೆಯನ್ನು ಮಾಡಿಕೊಳ್ಳುವುದಕ್ಕೆ ಸ್ವಯಂಸೇವಾ ಕ್ಷೇತ್ರದಲ್ಲಿರುವ ಆಸ್ಪತ್ರೆಗಳು ಮನಸ್ಸು ಮಾಡುತ್ತವೆಯೆ? ಇಂದು ನಿರ್ದಿಷ್ಟ ಧ್ಯೇಯೋದ್ದೇಶಗಳನ್ನು ಹೊಂದಿರುವ ಎಷ್ಟು ಆಸ್ಪತ್ರೆಗಳು ಅಂತಹ ನೀತಿಯನ್ನು ಹೊಂದಿವೆ?

ಜನತೆ ಮತ್ತು ಸಮುದಾಯಗಳೇ ತೀರ್ಮಾನ ತೆಗೆದುಕೊಳ್ಳುವಂತೆ ಅವರಿಗೆ ಶಕ್ತಿತುಂಬಿ ಉತ್ತೇಜಿಸುವುದಕ್ಕಾಗಿ, ಆರೋಗ್ಯಕ್ಕೆ ಸಂಬಂಧಿಸಿದಂತೆ ಅವರ ಆಸಕ್ತಿಯನ್ನು ಕೆರಳಿಸಿ ಇನ್ನಷ್ಟು ಹೆಚ್ಚಿಸುವುದಕ್ಕಾಗಿ ಹಾಗೂ ಸಮುದಾಯ ಆರೋಗ್ಯದ ಪರಿಕಲ್ಪನೆಯನ್ನೇ ತಿರುಚಿ ವಿರೂಪಗೊಳಿಸುವುದರ ವಿರುದ್ಧ ಮತ್ತು ಆರೋಗ್ಯ ಪಾಲನೆಯ ಅಭಿವೃದ್ಧಿಯಲ್ಲಿ ನ್ಯಾಯಸಮ್ಮತತೆ ಮತ್ತು ಉತ್ತರದಾಯಿತ್ವಗಳಂಥ ಅಂಶಗಳನ್ನು ನಿರಂತರವಾಗಿ ಕಡೆಗಣಿಸುತ್ತಿರುವುದರ ವಿರುದ್ಧ ಕ್ರಿಯಾಶೀಲವಾಗಿ ವಾಗ್ವಾದ ನಡೆಸುವುದಕ್ಕಾಗಿ ಒಂದು ಸಂಘಟಿತ ಹೊಸ ಹೋರಾಟ ಪ್ರಾರಂಭಿಸಲು ಪ್ರಪಂಚದಾದ್ಯಂತ ಜನರ, ಯೋಜನೆಗಳ ಔಪಚಾರಿಕ ಮತ್ತು ಅನೌಪಚಾರಿಕ ಮೈತ್ರಿಕೂಟಗಳು ಅಸ್ತಿತ್ವಕ್ಕೆ ಬಂದವು.

ಈ ಪ್ರವೃತ್ತಿಯೊಂದಿಗೆ ಮುಖಾಮುಖಿಯಾಗುವುದಕ್ಕೆ ಈ ಅವಧಿಯಲ್ಲಿ 'ಅಂತರರಾಷ್ಟ್ರೀಯ ಜನಾರೋಗ್ಯ ಮಂಡಳಿ'ಯು (International People's Health Council - IPHC) ಜನಾರೋಗ್ಯ ಪ್ರಯತ್ನಗಳ ವಿಶ್ವಮಟ್ಟದ ಮೈತ್ರಿಕೂಟವಾಗಿ ವಿಕಾಸಗೊಂಡು ಹೊರಹೊಮ್ಮಿತು. 'ಏಶಿಯಾದ ಸಮುದಾಯ ಆರೋಗ್ಯ ಕ್ರಿಯಾ ಜಾಲ'ವು (Asian Community Health Action Network - ACHAN) ಹೆಚ್ಚಾಗಿ ಒಂದು ಪ್ರಾದೇಶಿಕ ಗುಂಪಾಗಿದ್ದು ಅದೂ ಕೂಡ 'ಆಲ್ಮಾ ಆಟಾ' ಘೋಷಣೆ ಹೊರಬಿದ್ದ ಒಂದು ದಶಕದ ನಂತರ 1988ರಲ್ಲಿ ಸಂಘಟಿಸಿದ ಕಠ್ಮಂಡು ಚರ್ಚೆಯಲ್ಲಿ ಈ ವಿರೂಪತೆಗಳನ್ನು ಎತ್ತಿತೋರಿತು. 'ಅಂತರರಾಷ್ಟ್ರೀಯ ಜನಾರೋಗ್ಯ ಮಂಡಳಿ'ಯು ತನ್ನ ಕರಪತ್ರದಲ್ಲಿ "ಆರೋಗ್ಯಕ್ಕಾಗಿನ ಹೋರಾಟವು ಬಡತನ, ಹಸಿವು ಮತ್ತು ಅನ್ಯಾಯಯುತ ಸಾಮಾಜಿಕ-ಆರ್ಥಿಕ ಸಂರಚನೆಗಳಿಂದ ವಿಮೋಚನೆ ಪಡೆಯುವುದಕ್ಕಾಗಿನ ಹೋರಾಟವೂ ಆಗಿದೆ" ಎಂದು ಸ್ಪಷ್ಟವಾಗಿ ಹೇಳಿತು.

ಬಾಕ್ಸ್

ಆಸ್ಪತ್ರೆಗಳ ಸಮುದಾಯ ಆರೋಗ್ಯ ದೃಷ್ಟಿಕೋನ

ಆಧುನಿಕ ಆಸ್ಪತ್ರೆಯ ಗೋಡೆಯ ಮೇಲೆ ಕೆತ್ತಲಾದ ಘೋಷವಾಕ್ಯಗಳು

ಸುಸ್ವಾಗತ!

- ಈ ಆಸ್ಪತ್ರೆಯು 123 ಹಳ್ಳಿಗಳಲ್ಲಿ ಜನರು ಕೈಗೆತ್ತಿಕೊಂಡಿರುವ ಆರೋಗ್ಯ ಪಾಲನಾ ಚಟುವಟಿಕೆಗಳನ್ನು ಹುರಿದುಂಬಿಸುತ್ತದೆ, ಬೆಂಬಲಿಸುತ್ತದೆ ಹಾಗೂ ಉತ್ತೇಜಿಸುತ್ತದೆ; ಇದರಿಂದಾಗಿ ಆ ಹಳ್ಳಿಗಳ ಜನರು ತಮ್ಮ ಆರೋಗ್ಯದ ಜವಾಬ್ದಾರಿಯನ್ನು ತಾವೇ ಹೊತ್ತುಕೊಳ್ಳಲು, ತಮ್ಮ ಆರೋಗ್ಯವನ್ನು ಉತ್ತಮ ರೀತಿಯಲ್ಲಿ ತಾವೇ ಕಾಪಾಡಿಕೊಳ್ಳಲು ಸಮರ್ಥರಾಗುತ್ತಾರೆ.

- ಈ ಆಸ್ಪತ್ರೆಯು ಆ ನಿರ್ದಿಷ್ಟ ಹಳ್ಳಿಗಳಿಗೆ ಸಂಬಂಧಿಸಿದಂತೆ ಕೆಲವು ನಿರ್ದಿಷ್ಟ ಜವಾಬ್ದಾರಿಗಳನ್ನು ಹೊಂದಿದೆ; ಆ ಹಳ್ಳಿಗಳ ಜನರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಹಾಗೂ ತಮ್ಮ ಆರೋಗ್ಯ ಅಗತ್ಯಗಳನ್ನು